


ಯಶವಂತನ ಯಶೋಗೀತ

ಆರ್.ವಿ.ಭಂಡಾರಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಯಶವಂತನ
ಯಶೋಗೀತೆ

(ಮಕ್ಕಳ ಕಾದಂಬರಿ)

ಆರ್. ವಿ. ಭಂಡಾರಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು-೫೬೦ ೦೦೨

YASHAVANTANA YASHOGEETA: A Childrens' Novel by R.V. Bhandari, *Published by* Mallikarjuna Swamy V.N., Administrative Officer, **Kannada Pustaka Pradhikara,** (Kannada Book Authority) Kannada Bhavan, J.C. Road, Bangalore - 560 002.

First Impression by Navakarnataka Publication Pvt. Ltd, Bangalore.

Second Impression : 2006 by Kannada Book Authority
(Copy Right of 2nd impression Kannada Book Authority)

Copies: 1,000

Pages: viii + 102

Price: Rs.35/-

Cover Page : **Pa. Sa. Kumar**

Type setting at **ILA Mudrana**, Bangalore

Printed at **Sreeranga Printers (P) Ltd.** # 517, Samudragupta Maurya Road, Bhavani Naga
Bangalore - 560 019, Phone: 080-26524757, 26679333 E-mail: sreerangaprinters@yahoo.co.i

ಹಣತೆ ಹಚ್ಚುತ್ತೇವೆ

ಆಡಿಬಾ ನನ ಕಂದ ಅಂಗಾಲ ತೊಳೆದೇನು
ತೆಂಗಿನಕಾಯಿ ತಿಳಿನೀರ ತಕ್ಕೊಂಡು ನಿನ್ನ
ಬಂಗಾರ ಮೋರೆ ತೊಳೆದೇನು

ಬಾಲ್ಯವೆಂಬುದು ಮಗುವಿನ ಬೆಳವಣಿಗೆಯಲ್ಲಿ ಪವಿತ್ರವಾದ ಹಾಗೂ ಅಮೂಲ್ಯವಾದ ಅನುಭವ ವಿಶೇಷ. ಮನೋವಿಜ್ಞಾನಿಗಳ ಪ್ರಕಾರ ಮಕ್ಕಳ ಲೋಕ ಗ್ರಹಿಕೆ ಸುಮಾರು ನಾಲ್ಕೈದು ವರ್ಷಗಳಿಂದ ಮೊದಲ್ಗೊಂಡು ಹದಿನಾಲ್ಕು ಹದಿನೈದು ವರ್ಷಗಳ ಅವಧಿಯಲ್ಲಿ ತುಂಬ ತೀಕ್ಷ್ಣ ಹಾಗೂ ಸೂಕ್ಷ್ಮವಾಗಿರುತ್ತದೆ. ಪರಿಸರ ಭಾಷೆ ಅರ್ಥಾತ್ ಮಾತೃಭಾಷೆ ಇಲ್ಲಿ ಪ್ರಧಾನ ಪಾತ್ರವಹಿಸುತ್ತದೆ.

ಮಕ್ಕಳಿಗೆ ಸರಿಯಾದ ಶಿಕ್ಷಣ ನೀಡಬೇಕಾದ್ದು ಸಮಾಜದ ಆದ್ಯ ಕರ್ತವ್ಯ. ಮನುಷ್ಯನ ದುರಾಸೆ ಪೈಪೋಟಿ ಹೋಲಿಕೆಗಳ ದಾಳಿಗೆ ಮಕ್ಕಳು ಪ್ರಯೋಗಪಶುಗಳಾಗಬಾರದು. ಒತ್ತಡದ ಶಿಕ್ಷಣಕ್ಕೆ ಒಳಗುಮಾಡಿ ಅವರ ಸೃಜನಶಕ್ತಿಯನ್ನು ಮುರುಟಿಸಬಾರದು. ಬಾಲ್ಯಾನುಭವದ ಸುಮಧುರತೆ ಹಾಳಾಗಬಾರದು. ಕಲಿಕೆ ಪ್ರಯಾಸದ ಶಿಕ್ಷೆಯಾಗದೆ ನಲಿಯುತ್ತಾ ಗ್ರಹಿಸುವ ವಿಕಾಸಶೀಲ ಗತಿಯಾಗಬೇಕು.

ಕನ್ನಡ ಮಕ್ಕಳ ಮನಸ್ಸನ್ನು ಬೆಳೆಸುವ ಕೈಂಕರ್ಯದಲ್ಲಿ ನಾಡಿನ ಹಲವು ಜನ ಪೂರ್ವಸೂರಿಗಳು ಮಕ್ಕಳಿಗಾಗಿ ಗುಣಾತ್ಮಕ ಸಾಹಿತ್ಯ ರಚನೆ ಮಾಡಿದ್ದಾರೆ. ಸರಳ ಸುಂದರ ಸುಲಲಿತವಾದ ಆ ರಚನೆಗಳು ಬಾಲ್ಯದ ಮನಸ್ಸಿಗೆ ಮುದ ನೀಡುವುದಷ್ಟೇ ಅಲ್ಲದೆ ಮಾನವೀಯ ಜೀವನ ಮೌಲ್ಯಗಳನ್ನು ಕುಸುಮಗಂಧದ ಪರಿಯಲ್ಲಿ ಅರಿವಿಗೆ ಮುಟ್ಟಿಸುತ್ತವೆ. ಪೂರ್ವಸೂರಿಗಳ ಈ ಹಾದಿಯನ್ನು ಅನುಸರಿಸಿದಂತೆ ಅನಂತರದ ಹಲವು ಕನ್ನಡ ಮನಸ್ಸುಗಳು ತಮ್ಮ ಭಾವನೆ, ಆಲೋಚನೆಗಳನ್ನು ಮಗುಸಹಜ ಭಾವಗತಿಯಲ್ಲಿ ಹರಿಯ ಬಿಟ್ಟಿವೆ. ಕನ್ನಡ ಮಕ್ಕಳ ಮನಸ್ಸನ್ನು ಆರೋಗ್ಯಕರ ಭಾವದಲ್ಲಿ ಬೆಳಸುವ ಇಂಥ ಸಾಹಿತ್ಯವನ್ನು ಸಂಕಲಿಸಿ, ಕರ್ನಾಟಕದ ಎಲ್ಲ ಭಾಗದ ಮಕ್ಕಳಿಗೂ ಸುಲಭವಾಗಿ ತಲುಪುವಂತೆ ಮಾಡಬೇಕೆಂಬುದು ಕನ್ನಡ ಪುಸ್ತಕ ಪ್ರಾಧಿಕಾರದ ಹೆಬ್ಬಯಕೆ. ಅದರ ಫಲ ಈ ಮಕ್ಕಳ ಪುಸ್ತಕ ಮಾಲೆ. ಈ ಮಾಲೆಯಲ್ಲಿ ಕವಿತೆ, ನಾಟಕ, ಕಾದಂಬರಿ, ವ್ಯಕ್ತಿಚಿತ್ರ, ಪ್ರವಾಸ ಕಥನಗಳನ್ನು ಒಳಗೊಂಡ ಪುಸ್ತಕಗಳು ಪ್ರಕಟವಾಗುತ್ತಿವೆ.

★ ★ ★

'ಯಶವಂತನ ಯಶೋಗೀತ' – ಆರ್.ವಿ. ಭಂಡಾರಿಯವರು ಮಕ್ಕಳಿಗಾಗಿ ಬರೆದ ಅಪರೂಪದ ಕಾದಂಬರಿ. ಅನುಭವದ ಗಟ್ಟಿಬೇರುಗಳೊಂದಿಗೆ ಇಲ್ಲಿನ ಬದುಕು ತನ್ನ ರೆಂಬೆಕೊಂಬೆಗಳನ್ನು ಚಾಚಿದೆ. ಹುಡುಗನೊಬ್ಬನ ಸ್ವಾಭಿಮಾನಸಂಪನ್ನ ಮನಸ್ಸು ಕಷ್ಟಪರಂಪರೆಗಳ ನಡುವೆಯೇ ಸಾಧನೆಯ ಹಾದಿ ತುಳಿದಿದೆ. ಅವನ ಸಾಧನೆಯ ಹಾದಿಯಲ್ಲಿ ಸಮಾಜದ ಹಲವು ವಿಕರಾಳ ಮುಖಗಳು ಅನಾವರಣಗೊಂಡಿವೆ. ವ್ಯಕ್ತಿನೆಲೆಯ ಸಣ್ಣಮನಸ್ಸುಗಳಿಂದ ಹಿಡಿದು ಗೋಮುಖವ್ಯಾಘ್ರಗಳಂತೆ ವರ್ತಿಸುವ ಗುಂಪುಗಳ ವ್ಯಾಪ್ತಿಯವರೆಗೆ ಇಲ್ಲಿ ಹಲವು ಸಮಾಜವಿದ್ರೋಹಿ ದುಷ್ಟಶಕ್ತಿಗಳು ಬಯಲುಗೊಂಡಿವೆ. ಇವೆಲ್ಲ ಬಾಲಕ ಯಶವಂತನ ಬಾಲ್ಯಾನುಭವದೊಳಗೆ ಸಹಜವಾಗಿ ಎದುರಾಗುವ ಸಂಗತಿಗಳಾಗಿ ಬದುಕಾಗಿ ತಮ್ಮ ಕರಾಳತೆಯನ್ನು ಅವನ ಸುತ್ತ ಹಬ್ಬಿಹಾಸಿವೆ. ಅವುಗಳ ವಿಷವರ್ತುಲದಿಂದ ಬಿಡಿಸಿಕೊಂಡು ಯಶವಂತ ಒಳ್ಳೆಯ ಮಾನವೀಯ ಬದುಕಿನತ್ತ ಓಡುತ್ತಾನೆ. ಅವನ ಈ ಪ್ರಯಾಣ ಸವಲತ್ತು ವಂಚಿತ ಸಮುದಾಯ ಮೂಲಗಳಿಂದ ಬರುವ ಬಹುತೇಕ ಬಾಲಪ್ರತಿಭೆಗಳ ಪ್ರಾತಿನಿಧಿಕ ರೂಪವಾಗಿದೆ. ಹಳ್ಳಿಗಾಡಿನ ದಟ್ಟ ಅನುಭವ ಚಿತ್ರಣದಿಂದ ಹಿಡಿದು ನಗರಬದುಕಿನ ಚಕ್ರವ್ಯೂಹ ಗತಿಯವರೆಗಿನ ಇಲ್ಲಿಯ ಎಲ್ಲ ವಿವರಗಳೂ ಆಪ್ತವಾಗಿ ಮನಸ್ಸನ್ನು ತಟ್ಟುತ್ತವೆ. ಆಧುನಿಕ ಬದುಕಿನ ವಿಷಯಮ ಸಂಕೀರ್ಣತೆಗೆ ಕನ್ನಡಿಹಿಡಿದಂತಿವೆ. ಅನುಭವ ದ್ರವ್ಯ ಮಾತ್ರ ಇಂಥ ಅತ್ಯುತ್ತಮ ಕೃತಿಯನ್ನು ಕಟ್ಟಿಕೊಡಲು ಸಾಧ್ಯ.

ಸ್ವಾಭಿಮಾನ, ನೈತಿಕ ಎಚ್ಚರ ಮಾನವೀಯ ಪ್ರೀತಿ ಸತ್ಯಕ್ಕಾಗಿ ಹೋರಾಡುವ ಛಲ ಸ್ವತಂತ್ರಮನೋಧರ್ಮ ಶ್ರಮ–ಪ್ರತಿಭೆಗಳ ಮಾನ್ಯತೆ ಇತ್ಯಾದಿ ಜೀವನ ಮೌಲ್ಯಗಳ ಸಂಘರ್ಷವನ್ನು ಕಾದಂಬರಿ ತನ್ನ ವಸ್ತುವಿನ್ಯಾಸದಲ್ಲಿ ಕುಸುಮಗಂಧದ ರೀತಿ ಕಾಣಿಸಿದೆ.

ಇಂಥ ಕುಸುಮಗಂಧವನ್ನು ಆಘ್ರಾಣಿಸಿದ ಮಕ್ಕಳ ಮನಸ್ಸು ಕಲ್ಯಾಣದ ಬದುಕಿನ ಹಾದಿಯಲ್ಲಿ ಕ್ರಮಿಸುವ ಇಚ್ಛಾಶಕ್ತಿಯನ್ನು ಬೆಳಸಿಕೊಳ್ಳುವಂತಾಗಲಿ. ಕಾದಂಬರಿಯ ಕರ್ತೃವಾದ ಮಾನ್ಯಶ್ರೀ ಆರ್.ವಿ. ಭಂಡಾರಿಯವರಿಗೆ ಪ್ರಾಧಿಕಾರ ಆತ್ಮೀಯ ಕೃತಜ್ಞತೆಗಳನ್ನು ಅರ್ಪಿಸುತ್ತದೆ.

ಕನ್ನಡ ಪುಸ್ತಕ ಪ್ರಾಧಿಕಾರವು ಆಯೋಜಿಸಿದ ಈ ಮಕ್ಕಳ ಸಾಹಿತ್ಯಮಾಲೆಯ ಸಂಪಾದಕತ್ವವನ್ನು ವಹಿಸಿಕೊಂಡು ತುಂಬಾ ಸಮರ್ಥವಾಗಿ ಈ ಕೈಂಕರ್ಯವನ್ನು ಆಗುಮಾಡಿಕೊಟ್ಟ ಬೊಳುವಾರ ಮಹಮದ್ ಕುಂಞ ಅವರಿಗೂ ಅವರ ಸಂಗಡ ಸದಸ್ಯರಾಗಿ ಸಹಕರಿಸಿದ ಹಿರಿಯರಾದ ಶ್ರೀಕಂಚ್ಯಾಣಿ ಶರಣಪ್ಪ, ಡಾ. ಶರಣಮ್ಮ ಗೊರೆಬಾಳ, ಪ್ರೊ.ಕೃಷ್ಣಮೂರ್ತಿ ಬಿಳಿಗೆರೆ ಇವರಿಗೂ ಪ್ರಾಧಿಕಾರದ ಆತ್ಮೀಯ ಕೃತಜ್ಞತೆಗಳು. ಮಕ್ಕಳ ಸಾಹಿತ್ಯಮಾಲೆಯ ಎಲ್ಲ ಪುಸ್ತಕಗಳ ಕರಡು ತಿದ್ದುವಲ್ಲಿ ಹೆಚ್ಚಿನ ಆಸ್ಥೆವಹಿಸಿ ಸಹಕರಿಸಿದ ಪ್ರೊ. ಕೆ.ಆರ್. ಗಣೇಶ್ ಅವರಿಗೆ, ಸಲಹೆ ಸೂಚನೆಗಳ ಸಹಕಾರ ನೀಡಿದ ಹಿರಿಯರಾದ ಪ್ರೊ. ಚಿ. ಶ್ರೀನಿವಾಸರಾಜು ಅವರಿಗೆ, ಡಿಟಿಪಿ ಮಾಡಿದ ಇಳಾ ಮುದ್ರಣದವರಿಗೆ ಚಿತ್ರ ಕಲಾವಿದ ಪ.ಸ. ಕುಮಾರ್ ಅವರಿಗೆ, ಮುದ್ರಣ ಮಾಡಿದ ಶ್ರೀರಂಗ ಪ್ರಿಂಟರ್ಸ್ ಪ್ರೈ.ಲಿ. ರವರಿಗೆ ಈ ಯೋಜನೆಗೆ ಸಹಕರಿಸಿದ ಆಗಿನ ಆಡಳಿತಾಧಿಕಾರಿ ಶ್ರೀ ಎನ್. ತಿಪ್ಪೇಸ್ವಾಮಿ ಮತ್ತು ಸಿಬ್ಬಂದಿ ಬಳಗದವರಿಗೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲ ಸದಸ್ಯ ಮಿತ್ರರಿಗೆ ಆತ್ಮೀಯ ಕೃತಜ್ಞತೆಗಳು.

ಪ್ರೊ|| ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಸಂಪಾದಕರ ಮಾತು

ಕನ್ನಡದ ಮಕ್ಕಳ ವ್ಯಕ್ತಿತ್ವ ವಿಕಾಸ ಹಾಗೂ ಸ್ವಯಂ ಪರಿಪೂರ್ಣತೆಗೆ ಅಗತ್ಯವಾದ ಉತ್ತಮ ಗುಣಮಟ್ಟದ 'ಮಕ್ಕಳ ಸಾಹಿತ್ಯ'ವನ್ನು ೧೦-೧೨ ಆಕರ್ಷಕ ಸಂಪುಟಗಳಲ್ಲಿ ಪ್ರಕಟಿಸಬೇಕೆಂಬುದು, ಕನ್ನಡ ಪುಸ್ತಕ ಪ್ರದಿಕಾರದ ಅಧ್ಯಕ್ಷರಾಗಿರುವ ಪ್ರೊ. ಎಸ್.ಜಿ. ಸಿದ್ಧರಾಮಯ್ಯನವರ ಆಸೆಯಾಗಿತ್ತು. ಅವರ ಆಸೆಯು ಹೆಚ್ಚುಕಮ್ಮಿ ನನ್ನದೇ ಆಗಿದ್ದುದರಿಂದ, ಕಳೆದೊಂದು ವರ್ಷದ ಅವಧಿಯಲ್ಲಿ ಕತೆ, ಕಾದಂಬರಿ, ಕವನ, ನಾಟಕ, ಪ್ರವಾಸ ಕಥನ, ವ್ಯಕ್ತಿಚಿತ್ರ - ಹೀಗೆ ಮಕ್ಕಳ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ನಾನು ಆಯ್ದು, ಸಂಪಾದಿಸಿ ಸಿದ್ಧಗೊಳಿಸಿದ ಹತ್ತು ಕೃತಿಗಳಲ್ಲಿ, ಪ್ರಸ್ತುತ **'ಯಶವಂತನ ಯಶೋಗೀತ'** ಒಂದು ಆಕರ್ಷಕ ಮಕ್ಕಳ ಕಾದಂಬರಿ. 'ನವಕರ್ನಾಟಕ ಪ್ರಕಾಶನ'ದಿಂದ ಹಿಂದೊಮ್ಮೆ ಪ್ರಕಟವಾಗಿದ್ದ ಈ ಕೃತಿ, 'ಕರ್ನಾಟಕ ಸಾಹಿತ್ಯ ಅಕಾಡೆಮಿ'ಯಿಂದ ವರ್ಷದ 'ಅತ್ಯುತ್ತಮ ಮಕ್ಕಳ ಪುರಸ್ಕಾರ'ವನ್ನೂ ಗಳಿಸಿಕೊಂಡಿದೆ.

ಪಂಜೆಯವರ ಕಾಲದಿಂದಾರಂಭಿಸಿ ಇಂದು ಸಂಜೆಯವರೆಗೂ, ಒಂದೆರಡು ಅಪವಾದಗಳನ್ನು ಹೊರತು ಪಡಿಸಿದರೆ, ಮಕ್ಕಳ ಸಹಿತ್ಯ ವಸ್ತು-ವಿನ್ಯಾಸಗಳಲ್ಲಿ ಗಮನಿಸಬಹುದಾದಂತ ಬದಲಾವಣೆಗಳಾಗಲೀ ಸಂತೋಷಪಡಬಹುದಾದಂತಹ ಬೆಳವಣಿಗೆಗಳಾಗಲೀ ಕಾಣಿಸುತ್ತಿಲ್ಲ. ಕನ್ನಡದ ಮಕ್ಕಳ ಸಾಹಿತ್ಯದ ಲೇಖಕರು ಮತ್ತು ಓದುಗರು ಇಬ್ಬರೂ ಒಂದೇ ಶಾಲೆಗೆ ಸೇರಿದವರು : ಕನ್ನಡ ಶಾಲೆಯಲ್ಲಿ ಕಲಿಸುವವರು ಮತ್ತು ಕನ್ನಡ ಶಾಲೆಯಲ್ಲಿ ಕಲಿಯುವವರು. ಆದ್ದರಿಂದಲೇ, ಬಹುಪಾಲು ಗ್ರಾಮೀಣ ಕನ್ನಡ ಶಾಲಾ ಮಾಸ್ತರುಗಳಿಂದ ಗ್ರಾಮೀಣ ಕನ್ನಡ ಶಾಲಾ ವಿದ್ಯಾರ್ಥಿಗಳಿಗಾಗಿ ರಚಿಸಲ್ಪಡುವ ಮಕ್ಕಳ ಸಾಹಿತ್ಯದಲ್ಲಿ, ಗ್ರಾಮೀಣ ಕನ್ನಡದ ಮಕ್ಕಳಿಗೆ ಚಿರಪರಿಚಿತವಾದ ಕಾಗೆ, ಕೋಗಿಲೆ, ದನ, ಎತ್ತಿನಗಾಡಿ, ಜೇಡರಬಲೆಗಳೇ ವಸ್ತು ವಿವರಗಳಾಗಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಬಸ್ಸು, ಕಾರು, ಲೈಟು, ಫ್ಯಾನು, ಕ್ಲಾಸ್, ಟ್ಯೂಶನ್‌ಗಳನ್ನು ಕನ್ನಡ(?)ವೆಂದು ಒಪ್ಪಿಕೊಳ್ಳುವ ನಾವು, ಹಾಲಿನ ಪ್ಯಾಕೆಟ್, ರೆಡ್ ಸಿಗ್ನಲ್, ಓವರ್ ಬ್ರಿಡ್ಜ್, ಸೂಪರ್ ಮಾರ್ಕೆಟ್‌ಗಳನ್ನು ಕನ್ನಡದ ಪದಗಳಲ್ಲ ಎಂಬ ಅನುಮಾನದಿಂದ ಪರಿಚಯಿಸುವುದಿಲ್ಲ.

'ಯಶವಂತನ ಯಶೋಗೀತ' ಈ ಸಂಪ್ರದಾಯವನ್ನು ಸಡಿಲಿಸಲು ಪ್ರಯತ್ನಿಸುತ್ತದೆ. ಜನಪರವಾದ ಹೋರಾಟಗಳ ಜೊತೆಗೇ ಬರೆಯುತ್ತಾ ಬೆಳೆದ ಶ್ರೀ ಆರ್.ವಿ. ಭಂಡಾರಿಯವರ 'ಯಶವಂತನ ಯಶೋಗೀತ' ಕಾದಂಬರಿಯುದ್ದಕ್ಕೂ ಪ್ರಗತಿಪರವಾದ ಚಿಂತನೆಗಳು ತಣ್ಣನೆ ಹರಿಯುತ್ತವೆ. ಈ ಕಾದಂಬರಿಯನ್ನು ಓದುವ ಮಕ್ಕಳ ಜತೆಗೆ ಪ್ರೀತಿಯಿಂದ ಮಾತನಾಡಬಲ್ಲ ಪಾರ್ವತಿ, ಯಶವಂತ, ಜಾನಿ, ಸಿದ್ದಪ್ಪ, ಹಸನ್, ಗರುಡ, ಸುಕುಮಾರಸ್ವಾಮಿ, ಚಾರ್ವಾಕ ಇವರೆಲ್ಲರೂ ಓದುಗ ಮಕ್ಕಳ ಪ್ರತಿರೂಪಗಳೇ ಆಗಿದ್ದಾರೆ. ಚಲನೆಯಿಂದ ಆರಂಭಗೊಳ್ಳುವ ಕಥಾವಸ್ತು ಕುತೂಹಲವನ್ನು ಕಾಯ್ದುಕೊಳ್ಳುತ್ತಲೇ ಗ್ರಮೀಣ ಪರಿಸರದ ಆಟ-ಪಾಟ-ಒಗಟುಗಳ ವಿವರಗಳನ್ನು ಹೊರೆಯಾಗದಷ್ಟು ಎಚ್ಚರಿಕೆಯಿಂದ ಪರಿಚಯಿಸುತ್ತದೆ. ಮಕ್ಕಳಿಗೆ ಕಾದಂಬರಿ ಬರೆದರೆ ಹೇಗಿರಬೇಕು ಎಂಬುದರ ಪಥ್ಯ ಈ 'ಯಶವಂತನ ಯಶೋಗೀತ'.

ಈ ಕೃತಿಯನ್ನು ಸಿದ್ಧಗೊಳಿಸುವ ಸಂದರ್ಭದಲ್ಲಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ಧರಾಮಯ್ಯನವರ ಹಿರಿತನದಲ್ಲಿ ನೇಮಕಗೊಂಡ ಸಂಪಾದಕ ಮಂಡಳಿಯ ಸದಸ್ಯರಾದ ಶ್ರೀ ಕಾಂಚ್ಯಾಣಿ ಶರಣಪ್ಪ, ಶ್ರೀ ಕೃಷ್ಣಮೂರ್ತಿ ಬಿಳಿಗೆರೆ, ಶ್ರೀಮತಿ ಶರಣಮ್ಮ ಗೊರೆಬಾಳ ಇವರು ನೀಡದ ಮಾರ್ಗದರ್ಶನಕ್ಕೆ ನಾನು ಋಣಿ. ಈ ಕಾದಂಬರಿಯನ್ನು ಪ್ರಕಟಿಸಲು ಅನುಮತಿ ನೀಡದ ಲೇಖಕರಿಗೂ, ಈ ಕಾದಂಬರಿಯ ಮೊದಲ ಪ್ರಕಾಶಕರಾದ ನವಕರ್ನಾಟಕದ ಶ್ರೀ ಆರ್.ಎಸ್. ರಾಜಾರಾಮ ಅವರಿಗೂ ನಾನು ಕೃತಜ್ಞ.

ಬೆಂಗಳೂರು **ಬೊಳುವಾರು ಮಹಮದ್ ಕುಂಞಿ**
ಅಕ್ಟೋಬರ ೨, ೨೦೦೫

ಪರಿವಿಡಿ

೧. ಗಡಿಯಾರ ಕದ್ದವರು ಯಾರು?

ಯಶವಂತ ಶಾಲೆಗೆ ಹೋದವನೇ ತನ್ನ ವರ್ಗದ ಕೋಣೆಯಲ್ಲಿ ಕೂಡ್ರುವ ಹಲಗೆಯ ಮೇಲೆ ತನ್ನ ಪಾಟಿಚೀಲ ಒಗೆದು ಶಾಲೆಯ ಹಿಂದುಗಡೆಯ ಗುಡ್ಡಕ್ಕೆ ಓಡಿದ.

ಈಗ ಸುಮಾರು ಒಂದು ವಾರದಿಂದಲೂ ಆತನಿಗೆ ಒಂದು ವಿಶೇಷ ಕುತೂಹಲ ಹಿಂದಿನ ಗುಡ್ಡದ ಓರೆಯಲ್ಲಿ ಕಾದಿರುತ್ತಿತ್ತು.

ಯಶವಂತನ 'ಸರಕಾರಿ ಪೂರ್ಣ ಪ್ರಾಥಮಿಕ ಶಾಲೆ ಕೆರೆಕೋಣ' ಇರುವುದು ಒಂದು ಗುಡ್ಡದ ಓರೆಯಲ್ಲಿ. ಶಾಲೆಯಲ್ಲಿ ಮುಂದುಗಡೆ ಅಂಗಳದ ಆಚೆ ರಸ್ತೆಯೂ ಹಾದುಹೋಗಿದೆ. ಅದೊಂದು ಮಲೆನಾಡ ಗ್ರಾಮೀಣ ಪ್ರದೇಶವಾದುದರಿಂದ ಗುಡ್ಡ ಬೆಟ್ಟಗಳ ಮಧ್ಯೆಯೇ ಮನೆ, ಮಂದಿರ, ಶಾಲೆಗೀಲೆಗಳೆಲ್ಲ ಇರುವುದು.

ಶಾಲೆಯ ಹಿಂದೆ ಬೆಟ್ಟ. ಬೆಟ್ಟವೆಂದರೆ ಕಡಿದಾದ ಬೆಟ್ಟವಲ್ಲ. ಅದು ಬೆಟ್ಟದ ಓರೆ. ಆ ಇಳಿಜಾರಿನಲ್ಲಿ ಅನೇಕ ಮರಗಳು, ಮುಳ್ಳುಹಿಂಡುಗಳು, ಅಪರೂಪಕ್ಕೆ ಗೋವೆಮರ (ಗೇರುಮರ)ಗಳೂ ಇವೆ. ಸಂಜೆಯಾದರೆ ಅಲ್ಲಿ ನರಿಗಳು ಬಂದು 'ಹುಕೆ ಹೂ ಹುಕೆ ಹೂ' ಎಂದು ಕೂಗುತ್ತವೆ. ಅಲ್ಲಿ ಮಿಗಗಳು, ಹಂದಿಗಳು, ಮೊಲಗಳು ಇವೆ. ನವಿಲುಗಳೂ ಇವೆ. ಕರಿಮುಳ್ಳಣ್ಣು, ಬಿಳಿಮುಳ್ಳಣ್ಣು, ಕುಸುಮಾಲೆ ಹಣ್ಣುಗಳಿವೆ.

ಶಾಲೆಯಲ್ಲಿ ವಿಶ್ರಾಂತಿಗೆ ಬಿಡುವಾದಾಗೆಲ್ಲ ಶಾಲಾ ಮಕ್ಕಳು ಅಲ್ಲಿಗೆ ಓಡುತ್ತಾರೆ. ಅವರಿಗೆ ಎರಡು ಕೆಲಸ. ಒಂದು, ಉಚ್ಚೆ ಹೊಯ್ಯುವುದು. ಪೇಟೆಯ ಶಾಲೆಗಳಂತೆ ಮಕ್ಕಳಿಗಾಗಿ 'ಮೂತ್ರಿ' ಇಲ್ಲಿಲ್ಲ. ಎರಡನೆಯದಾಗಿ ಹಣ್ಣುಗಳನ್ನು ಆರಿಸುವುದು.

ಯಶವಂತ ಓಡಿದ್ದು ಈ ಎರಡೂ ಕಾರಣಕ್ಕೂ ಅಲ್ಲ.

ಒಮ್ಮೆ ಅಲ್ಲಿ ಹಣ್ಣು ಆರಿಸಲು ಹೋಗಿದಾಗಿದ್ದ ಹಿಂಡಿನ ಪಕ್ಕದಲ್ಲಿ ನಿಂತು ಹಣ್ಣು ಕೀಳುವಾಗ ಒಂದು ಜೇಡದ ಬಲೆಯನ್ನು ಕಂಡ. ಜೇಡ ವಿಶಾಲವಾಗಿ ತನ್ನ ಬಲೆಯನ್ನು ನೇಯ್ದಿತ್ತು. ಅದು ಬೆಳಗಿನ ಹೊತ್ತು ಚಳಿಗಾಲ ಬೇರೆ. ಬಲೆಯ ರೇಷ್ಮೆಯಂಥ ಎಳೆಗಳ ನೇಯ್ಗೆಯ ಮೇಲೆ ಮಂಜುಹನಿ ಜೋಲುತ್ತಿತ್ತು. ಬಲೆಯ ಮೇಲೆ ಬೆಳಗಿನ ಸೂರ್ಯ ಕಿರಣ ಹರಡಿತ್ತು. ಇದರಿಂದ ಜೇಡಬಲೆ ಮಣಿಗಳನ್ನು ಪೋಣಿಸಿದ ಆಭರಣದಂತೆ ತೋರುತ್ತಿತ್ತು. ಬಲೆಯಲ್ಲಿ ವಿವಿಧ ಬಣ್ಣಗಳು ಸೇರೆಯಾಗಿದ್ದವು.

ಇನ್ನೇನು, ಯಶವಂತ ಒಂದು ಕೊಕ್ಕೆಯಿಂದ ಬಲೆಕಟ್ಟಿದ ಹಿಂಡಿನ ಹೆಣೆಯನ್ನು ಬಗ್ಗಿಸಿಯೇ ಬಿಟ್ಟ. ಬಲೆ ತುಂಡಾಗಿಬಿಟ್ಟಿತು. 'ಸರ್' ಎಂದು ಚುರುಕಾಗಿ ಜೇಡ ಓಡಿ ಹೋಗಿ ಎಲೆಯ ಪೊದೆಯನ್ನು ಸೇರಿತು.

ಯಶವಂತನಿಗೆ ನಿರಾಶೆಯಾಯಿತು. ಹಣ್ಣಿನ ಆಸೆಯಿಂದ ಒಂದು ಸುಂದರ ಬಲೆಯನ್ನು ಹರಿದು ಬಿಟ್ಟಿದ್ದ. ಒಂದು ಕ್ಷಣದಲ್ಲಿ ಅವನ ಮನಸ್ಸು ಕಳವಳಕ್ಕೊಳಗಾಯಿತು. ಅಷ್ಟರಲ್ಲಿ ಶಾಲೆಯಲ್ಲಿ ಪ್ರಾರ್ಥನೆಗಾಗಿ ಸೂಚನೆಯ ಗಂಟೆ ಬಾರಿಸಿತು. ಯಶವಂತ ಹಿಂದಿರುಗಿದ.

ವಿಚಿತ್ರ. ಯಶವಂತ ಜೇಡದ ಬಲೆಯನ್ನು ಮರೆಯಲೇ ಇಲ್ಲ. ಸುಮ್ಮನೆ ಏಕಾಂತದಲ್ಲಿ ಕುಳಿತಾಗೆಲ್ಲ ಅವನಿಗೆ ಬೇರೆ ಬೇರೆ ಬಣ್ಣದ ಹರಳುಮಣಿಗಳಿಂದ ಪೋಣಿಸಿ ಅಲಂಕರಿಸಿದ್ದಂತಿದ್ದ ಬಲೆಯೇ ಕಣ್ಮುಂದೆ ಕಟ್ಟುತ್ತಿತ್ತು.

ಮಾರನೆ ದಿನ ಶಾಲೆಗೆ ಹೋದೊಡನೇ ಆತ ಕಾತರ ತಡೆಯಲಾರದೆ ಮುನ್ನಾದಿನ ಬಲೆಕಟ್ಟಿದ್ದ ಮುಳ್ಳು ಹಿಂಡಿನ ಕಡೆ ಓಡಿದ. ಅರೆ! ಎಂಥಾ ಆಶ್ಚರ್ಯ! ಮತ್ತೆ ಅದೇ ರೀತಿಯ ಬಲೆ. ಮುತ್ತಿನ ಮಣಿಗಳನ್ನು ತನ್ನಲ್ಲಿ ಸಿಕ್ಕಿಸಿಕೊಂಡ ಸಾಣಿಗೆ.

ಅವನಿಗೆ ಆ ಕ್ಷಣದಲ್ಲಿ, ಅವನ ಶಾಲೆಯ ವಾರ್ಷಿಕೋತ್ಸವದಂದು ಹೆಣ್ಣುಮಕ್ಕಳು ಸ್ಪರ್ಧೆಗಾಗಿ ಹಾಕಿದ ಆ ಹತ್ತಾರು ರಂಗೋಲಿಯೂ ಇದರ ಸನಿಹ ಬರದು, ಸ್ಪರ್ಧೆಗೇನಾದರೂ ಇಟ್ಟಿದ್ದರೆ ಆ ಜೇಡದ ಬಲೆಗೇ ಬಹುಮಾನ ಬರುತ್ತಿತ್ತು ಎಂದೆನ್ನಿಸಿತು.

ಕೂಡಲೇ ಅವನ ತಲೆಯಲ್ಲಿ ಏನು ಹೊಳೆಯಿತೋ, ಆ ಬಲೆಯನ್ನು ಒಂದು ಕೋಲಿನಿಂದ ಹರಿದುಹಾಕಿಬಿಟ್ಟ.

ಮಾರನೆ ದಿನ ಮತ್ತೆ ಅದೇ ಕುತೂಹಲ. ಆ ದಿನವೂ ಹೋಗಿ ನೋಡುತ್ತಾನೆ. ಅದೇ ಅದೇ ಬಲೆ : ಅದೇ ಹಳದಿ. ಕೆಂಪಿನ ಮುತ್ತು ನೀರಿನ ಹನಿ. ಅದೇ ರೇಷ್ಮೆ ಎಳೆಯ ಬಲೆ. ಗಿಡದಿಂದ ಗಿಡಕ್ಕೆ ರಚಿಸಿದ ರಂಗೋಲಿ.

ಇದೀಗ ಮಾತ್ರ ಅವನಿಂದ ತಡೆಯಲಾಗಲಿಲ್ಲ. ಶಾಲೆಗೆ ಕೂಡಲೇ ಬಂದ. ತನ್ನ ಗೆಳೆಯ ರವಿ, ಮಾಸ್ತಿ, ಯಂಕಟು, ಸೀತೆ ಇವರಿಗೆಲ್ಲ ಹೇಳಿದ.

"ಇಲ್ಲಿ ಬನ್ನಿ, ಹಿಂದಿನ ಗುಡ್ಡಕ್ಕೆ ಏನೋ ತೋರಿಸುತ್ತೇನೆ, ಭಾಳ ಚೆಂದ."

"ನಂಗೆ ಗೊತ್ತಾಯ್ತೋ, ಗೊತ್ತಾಯ್ತು."

"ಎಂತದು?"

"ನಾನೂ ನೋಡಿದ್ದೆ ನಿನ್ನೆ ಆ ಕಾಸಗನ ಮರದ ಪೊಟರೆಯಲ್ಲಿ ಯಾವುದೊ ಹಕ್ಕಿ ಎರಡು ಮೊಟ್ಟೆ ಇಟ್ಟಿದೆ. ನಾನು ನಿನ್ನೆ ನೋಡಿದ್ದೆ. ಸುಮ್ಮನೆ ಬಂದಿದ್ದೆ. ಈ ಕಳ್ಳ ನೋಡಿಬಿಟ್ಟಿದ್ದಾನೆ."

"ಅದಲ್ಲ, ಅದಲ್ಲ; ಕುತ್ತಗಿ ಮುಟ್ಟಿಕೊಂಡು ಹೇಳ್ತೆ, ಅದಲ್ಲ."

"ಹಂಗಾರೆ ಏನು?"

"ನೀವು ಬನ್ನಿ"

ಅವರೆಲ್ಲ ಅವನನ್ನು ಹಿಂಬಾಲಿಸಿದರು. ಯಶವಂತ ಜೇಡದ ಬಲೆಯಿದ್ದಲ್ಲಿ ಅವರನ್ನು ಕರೆದೊಯ್ದು ತೋರಿಸಿದ.

"ನೋಡಿ ಚಿನ್ನದ ಬಲೆ."

"ಓಹೊ, ಇದೇಯ? ಬುರ್ನಾಸು, ಇದು ಜೇಡದ ಬಲೆ. ನಮ್ಮನೆ ಮಾಡಿಗೆಲ್ಲ ದಿನಾ ದಿನಾ ತೆಗೆದು ಹಾಕಿದರೂ ಕಟ್ತದೆ."

"ನಾನು ಮೊನ್ನೆ ತೆಗೆದು ಹಾಕಿದ್ದೆ. ನಿನ್ನೆ ಅದೇ ರೀತಿ; ನಿನ್ನೆ ತೆಗೆದು ಹಾಕಿದ್ದೆ. ಇಂದು ಮತ್ತೆ ಅದೆ."

"ಹೌದಲ್ಲ ಚೆಂದ ಅದೆ. ಸೂರ್ಯನ ಬಿಸಿಲು ಜೋರ್ ಆದ್ಮೇಲೆ ಇದು ಚೆಂದ ಕಾಣೂದಿಲ್ಲ" ಸೀತೆ ಎಂದಳು.

ಗೆಳೆಯರೆಲ್ಲ ಅಷ್ಟೊಂದು ಮೆಚ್ಚಿಕೊಳ್ಳದ್ದಕ್ಕೆ ಯಶವಂತನಿಗೆ ನಿರಾಶೆಯಾಯಿತು. ಅವರೆಲ್ಲ ಯಂಕಟು ಮುನ್ನಾದಿನ ಕಂಡಿಟ್ಟ ಹಕ್ಕಿಮೊಟ್ಟೆಯನ್ನು ನೋಡಲು ಹೆಜ್ಜೆ ಹಾಕುತ್ತಿದ್ದಂತೆ ಶಾಲೆಯಲ್ಲಿ ಸೂಚನಾಗಂಟೆ ಬಡಿಯಿತು.

"ಇದಕಾಗೇ ಯಶು ದಿನಾ ಓಡಿ ಬರ್ತಿದ್ದ ಶಾಲೆಗೆ ಬಂದ ಕೂಡ್ಲೆ. ಅದೇನ ದೊಡ್ಡು" ಎಂದು ಕೊಳ್ಳುತ್ತ ಅವರು ಶಾಲೆಯ ಕಡೆ ನಡೆದರು.

ಇತರ ಹುಡುಗರಿಗೆ ಅದೇನು ದೊಡ್ಡದು ಎನ್ನಿಸಿದರೂ ಯಶವಂತನಿಗೆ ಸಣ್ಣದೆನಿಸಲಿಲ್ಲ. ಆ ಜೇಡದ ಬಲೆ ಅವನ ಮನಸ್ಸನ್ನು ಸೆರೆ ಹಿಡಿದುಬಿಟ್ಟಿತು.

ಆದ್ದರಿಂದ ಆತನು ಮಾರನೇ ದಿನವೂ ಮತ್ತೆ ಮತ್ತೆ ಅದನ್ನು ನೋಡುತ್ತಲೇ ಇದ್ದ. ದಿನಾಲೂ ಹರಿದುಹಾಕಿ ಬರುತ್ತಿದ್ದ. ಮತ್ತೆ ಮಾರನೇ ದಿನ ಅದೇ ರೀತಿಯ ಬಲೆ. 'ಭಲೆ' ಎಂದು ಕೊಂಡನಾತ.

ರವಿವಾರ ಶಾಲೆಯಿಲ್ಲ.

ಯಶವಂತ ತಂದೆಯೊಡನೆ ಬೆಟ್ಟಕ್ಕೆ ನಡೆದಿದ್ದ.

ಯಶವಂತನ ತಂದೆ ತಾಯಿಗಳು ಕೂಲಿಯಾಳುಗಳು. ಅವರಿಗೆ ಸ್ವಂತ ಜಮೀನು ಇದ್ದಿರಲಿಲ್ಲ. ಅನಂತಭಟ್ಟನ ಹಿತ್ತಲಿನಲ್ಲಿ ಒಂದು ಬಿಡಾರ ಕಟ್ಟಿಕೊಂಡಿದ್ದರು.

ಅನಂತಭಟ್ಟ ತಕ್ಕಮಟ್ಟಿಗಿನ ಜಮೀನುದಾರ. ಅದರೊಟ್ಟಿಗೆ ಉದಾರಿ ಕೂಡ. ಆತನ ಮನೆ ಇರುವುದು ತೋಟ ಮತ್ತು ಹಿತ್ತಲಿನ ಒಂದು ಪಕ್ಕದಲ್ಲಿ. ಅಡಿಕೆ, ತೆಂಗಿನಕಾಯಿ, ಬಾಳೆಗೊನೆ ಇತ್ಯಾದಿಗಳು ಕಳುವಾಗದಂತೆ ಕಾವಲು ಕಾಯಲು ಕಾವಲುಗಾರನಿಗಾಗಿ ತೋಟದ ಮತ್ತೊಂದು ಪಕ್ಕದಲ್ಲಿ ಒಂದು ಗುಡಿಸಲು ಕಟ್ಟಿಸಿದ್ದ.

ಯಶವಂತನ ತಂದೆ ದೊಡ್ತಮ್ಮ. ಆತನ ಹೆಸರು ಏನೋ ಬೇರೆ ಇದ್ದಿರಲೂಬಹುದು. ಈಗ ಯಾರಿಗೂ ತಿಳಿಯದು. ಅವನನ್ನು ಕರೆಯುವುದು ದೊಡ್ತಮ್ಮ. ಬಹುಶಃ ಅವನ ತಂದೆಗೆ ಹಲವು ಮಕ್ಕಳಿದ್ದು ಈತ ಹಿರಿಯವನಾಗಿರಬೇಕು. ಮಕ್ಕಳಿಗೆ 'ತಮ್ಮ' ಎಂದು ಕರೆಯುವ ವಾಡಿಕೆ ಯಿಂದಾಗಿ 'ದೊಡ್ಡ ತಮ್ಮ' 'ದೊಡ್ತಮ್ಮ' ಆಗಿರಬೇಕು. ಆತ ಈಗ ಎಲ್ಲರಿಗೂ 'ದೊಡ್ತಮ್ಮ'ನೇ ಆಗಿದ್ದಾನೆ.

ತಾಯಿಯ ಹೆಸರು ಮಂಜಮ್ಮ.

ಅವರಿಬ್ಬರೂ ಒಂದು ದಿನ ಬಂದು ಅನಂತಭಟ್ಟನ ಕಾಲಿಗೆ ಎರಗಿ, ಬೇಡಿಕೊಂಡರು.

"ಒಡ್ಯಾ, ಹಗಲೆಲ್ಲ ನೂರ್‌ಮನೆ ತಿರ್‍ಗಿ, ದುಡ್ಕೊಂಡ್ ಬಂದರೂ ಒಂದ್ ಮುಟ್ಟಿ ಬೇಯ್ಸಕಂಡ್ ತಿಂಬೂಕು ಜಾಗ ಇಲ್ಲ. ಒಂದ್ ಉಪಕಾರ ಮಾಡಿ. ಮುಂದಿನ ಜಲ್ಮದಲ್ಲಾದ್ರು ನಿಮ್ಮ ಋಣ ತೀರಸ್ತೇವೆ. ವಾಸಕ್ಕೆ ಒಂದ್ ಜಾಗ ಕೊಡಿ."

ಅನಂತಭಟ್ಟ ಇದೇ ಗುಡಿಸಲನ್ನು ಅವರಿಗೆ ಬಿಟ್ಟುಕೊಟ್ಟ.

"ಇರಿ ನನಗೂ ಅನುಕೂಲವೇ ಆಯ್ತು. ರಾತ್ರಿ ತೋಟ ಕಾಯುವುದಕ್ಕೆ ಆಳು ಇಡಿಸೂದಾದ್ರು ತಪ್ಪುತ್ತದೆ" ಎಂದು ಔದಾರ್ಯ ತೋರಿದ.

ಹೀಗಾಗಿ ಅವರು ಅದನ್ನು ತಮ್ಮ ಮನೆಯನ್ನಾಗಿ ಮಾಡಿಕೊಂಡಿದ್ದರು.

"ಎಂಟೆಂಟು ದಿನಕ್ಕೆ ಹಿತ್ತಲಿಗೆ ನೀರು ಹಾಯಿಸಿ. ಕಾಯಿಕೊಯ್ಲಿಗೆ ನಿಮಗೂ ನಾಲ್ಕು ಕಾಯಿಕೊಡ್ತೆ" ಎಂದು ಅನಂತಭಟ್ಟ ಹೇಳಿದ್ದ. ಹೀಗಾಗಿ ಅವರು ಕಾಯಿಕೊಯ್ಲಿಗೆ ಬಂದಾಗ ನಾಲ್ಕೈದು ಕಾಯಿ ಕೊಡುತ್ತಿದ್ದ. ಇದೊಂದು ದೊಡ್ಡ ಉಪಕಾರವಾಗಿತ್ತು ಆ ಬಡವರಿಗೆ.

ಸಾಮಾನ್ಯವಾಗಿ ರವಿವಾರ ಮಗನನ್ನು ಅವನಪ್ಪ ಬೆಟ್ಟಕ್ಕೆ ಕರೆದುಕೊಂಡು ಹೋಗುತ್ತಿದ್ದ.

"ಕಡೀಕ ಆಡೂಕೆ ಹೋಗಲಕ್ಕು. ಒಂದ್ ಸಲ ನನ್ನ ಸಂಗ್ತೀಗೆ ಬಾ. ಒಂದ್ ತಕಲಾ ಎಳೆ ಕರ್ಡ ತರಲಕ್ಕು. ಕರೂಗೆ ತಿಂಬೂಕ್ ಆಗ್ತದೆ" ಎಂದು ಅವನ ಅಪ್ಪ ಹೇಳುತ್ತಿದ್ದ.

ಯಶವಂತನ ಮನೆಯಲ್ಲಿ ಒಂದು ಕರು ಇತ್ತು. ಅದಕ್ಕೆ ಈಗ ಎರಡು, ಎರಡೂವರೆ ವರ್ಷವಾಗಿತ್ತು. "ಇನ್ನೊಂದು ಎರಡು ವರ್ಷದಲ್ಲಿ ಕಟ್ಟಿ ಕರು ಹಾಕ್ತದೆ." ಎಂದು ಮಂಜಮ್ಮನ ಅಂದಾಜು.

ಆ ಕರುವನ್ನು ಅವರು 'ಅನಂತ ಒಡ್ಯ'ನ ಮನೆಯಿಂದಲೇ 'ಸಾಕಲು' ತೆಗೆದುಕೊಂಡಿದ್ದರು.

'ಸಾಕಲು' ತೆಗೆದುಕೊಳ್ಳುವುದು ಅಂದರೆ ಹೀಗೆ. ಗಂಟಿ ಉಳ್ಳವರ ಮನೆಯಿಂದ ಒಂದು ಹೆಂಗರುವನ್ನು ತಾವು ಸಾಕಿ ಸಲಹುತ್ತೇವೆ ಎಂದು ತೆಗೆದುಕೊಳ್ಳುವುದು. ಸಾಮಾನ್ಯವಾಗಿ ಆಕಳು ನಾಲ್ಕು ವರ್ಷಕ್ಕೆ ಗಬ್ಬಕ್ಕೆ ಬರುತ್ತದೆ. ಅದು ಕಟ್ಟಿ ಕರು ಹಾಕಿದ ನಂತರ ಒಂದು ಕರುವನ್ನು ಸಾಕಿದವರು ಉಣ್ಣುವುದು. ಇಲ್ಲಿ 'ಕರು' ಎಂದರೆ ಆಕಳ ಮಕ್ಕಳಲ್ಲ. ಕರು ಎಂಬಲ್ಲಿ 'ಕ'ವನ್ನು 'ಅ' ಎಂದು ಹೊರ ಉಚ್ಚಾರ ಮಾಡಿದರೆ ಒಂದು ಅವಧಿ – ಸುಮಾರು ಒಂದೂವರೆ ವರ್ಷ – ಹಾಲನ್ನು ಕರೆದು ತೆಗೆದುಕೊಳ್ಳುವುದು ಎಂದು ಅರ್ಥ. ಸುಮಾರು ಒಂದೂವರೆ ವರ್ಷಕ್ಕೆ ಅದು ಹಾಲು ಬತ್ತಿಸಿಕೊಳ್ಳುತ್ತದೆ. ಮುಂದಿನ ವರ್ಷ ಅದು ಕಟ್ಟಿ ಕರು ಹಾಕಿದಾಗ ಅದನ್ನು ಅದರ ಕರುವಿನ ಸಂಗಡ ಅದರ ಮಾಲಿಕನಿಗೆ ತಿರುಗಿ ಒಪ್ಪಿಸಬೇಕು. ಮೊದಲ ಕರು ಸಾಕಿದವರಿಗೆ ಇರುತ್ತದೆ. ಇದಕ್ಕೆ 'ಸಾಕಲು ತಂದದ್ದು ಅಥವಾ ಕೊಟ್ಟಿದ್ದು' ಎನ್ನುತ್ತಾರೆ.

ಹಾಗೆ ಅನಂತಭಟ್ಟನ ಮನೆಯಿಂದಲೇ ಸಾಕಲು ತಂದ ಕರು ಇದು. ಅದರ ಹೆಸರು 'ಗಂಗೆ'. ಅದಕ್ಕೆ ತಿನ್ನಲು ಹಸಿ ಬೇಕು.

ಹೀಗಾಗಿ ಅಪ್ಪನ ಸಂಗಡ ಯಶವಂತ ಹಸಿ (ಎಳೆಯ ಹುಲ್ಲು) ತರಲು ಬೆಟ್ಟಕ್ಕೆ ಹೋಗಿದ್ದ.

ಯಶವಂತನಿಗೆ ಓರ್ವ ಅಕ್ಕ ಇದ್ದಳು. ಅವಳು ಹೆಚ್ಚಾಗಿ ತಾಯಿಯ ಸಂಗಡ ತೋಟಕ್ಕೆ ನೀರು ತೋಕಲು ಮಾತ್ರ ಹೋಗುತ್ತಿದ್ದಳು. ಅಡಿಕೆ ತೋಟಕ್ಕೆ ನೀರು ಹನಿಸಲು ಎರಡು ಕಡೆಯ ಮರಗಳ ಮಧ್ಯದಲ್ಲಿ ಬೆಲಗು ತೆಗೆದಿರುತ್ತಾರೆ. ಅದರಲ್ಲಿ ನೀರು ಹಾಯಿಸುತ್ತಾರೆ. ಹಾಗೆ ಹರಿಯುವ ನೀರಿಗೆ ಅಡ್ಡಿಹಾಕಿ (ನೀರು ಸಿಂಬೆ) ನಿಂತ ನೀರನ್ನು ಹಾಳೆ (ನೀರು ತೋಕಲು, ಮರದ ತುಂಡನ್ನು ದೀರ್ಘವರ್ತುಲಾಕಾರದಲ್ಲಿ ಸೀಳಿ ಒಳಗಿನ ತಿರುಳನ್ನು ತೆಗೆದು ಹೊಂಡಮಾಡಿದ ಸಾಧನ)ಯಿಂದ ಗೊಪ್ಪೆಗೆ (ಮರದ ಬುಡಕ್ಕೆ) ಹಾಕುತ್ತಾರೆ. ಅದಕ್ಕೆ ಒಂದೇ ಸವನೆ ಒಬ್ಬರೇ ಬಗ್ಗಿ ತೋಕುತ್ತ ಹೋದರೆ ಬೇಗ ದಣಿವಾಗುತ್ತದೆ. ಸೊಂಟ ಕಡಿತ ಶುರುವಾಗುತ್ತದೆ. ಇಬ್ಬರು ಇದ್ದರೆ ಒಬ್ಬರು ನೀರು ತೋಕುವಾಗ ಇನ್ನೊಬ್ಬರು ನಿಂತು ವಿಶ್ರಾಂತಿ ಪಡೆಯಲು ಆಗುತ್ತದೆ. ಆದ್ದರಿಂದ ಮಂಜಮ್ಮ ತನ್ನ ಮಗಳನ್ನು ಸಂಗಡ ಕರೆದುಕೊಂಡು ಹೋಗುತ್ತಾಳೆ.

ಯಶವಂತನಿಗೆ ಇನ್ನೊಬ್ಬ ತಮ್ಮ. ಇನ್ನೂ ಚಿಕ್ಕವ. ಆತ ಈಗ ಮೂರನೇ ತರಗತಿಯಲ್ಲಿ ಓದುತ್ತಿದ್ದಾನೆ. ಯಶವಂತ ಹೋಗುವ ಶಾಲೆಯಲ್ಲೇ ಅವನೂ ಓದುತ್ತಾನೆ.

ಯಶವಂತನ ಅಕ್ಕ ನಾಲ್ಕನೇ ತರಗತಿಯ ತನಕ ಓದಿ ಶಾಲೆ ಬಿಟ್ಟಿದ್ದಳು. ಮನೆ ಕೆಲಸಕ್ಕೆ ಜನ ಬೇಕಾಗಿತ್ತು. ಹಾಗೆ ಅವಳು ಮನೆಯ ಕೆಲಸ ಮಾಡಿಕೊಂಡಿದ್ದರೆ ಮಂಜಮ್ಮನಿಗೆ ಕೂಲಿಗೆ ಹೋಗಲು ಅನುಕೂಲ. ಬಡವರ ಬಾಳುವೆಯೇ ಹಾಗೆ.

ಯಶವಂತನನ್ನು ನಾಲ್ಕನೇ ತರಗತಿ ಮುಗಿದೊಡನೆ ಶಾಲೆ ತಪ್ಪಿಸಿ ಒಡೆಯರ ಮನೆಯಲ್ಲಿ ಕೆಲಸಕ್ಕೆ (ಕೂಲಿಗೆ) ಇಡಬೇಕೆಂದು ದೊಡ್ಡಮ್ಮನ ಇಚ್ಛೆಯಾಗಿತ್ತು. ಆದರೆ ಶಾಲೆಯ ಮಾಸ್ತರು ದೊಡ್ಡಮ್ಮನನ್ನು ಮತ್ತು ಮಂಜಮ್ಮನನ್ನು ಕರೆದು ಯಶವಂತ ಬಹಳ ಬುದ್ಧಿವಂತನೆಂದೂ ಅವನನ್ನು ಶಾಲೆ ತಪ್ಪಿಸದೇ ಐದನೇ ತರಗತಿಗೆ ಕಳಿಸಬೇಕೆಂದೂ ಒತ್ತಾಯಿಸಿದ್ದರು.

ಮಾಸ್ತರ ಮಾತಿಗೆ ದೊಡ್ಡಮ್ಮ ಅಷ್ಟೊಂದು ತಲೆಕೊಡದಿದ್ದರೂ ಮಂಜಮ್ಮ ಮಾತ್ರ ಮಗನನ್ನು ಶಾಲೆಗೆ ಕಳಿಸಲೇಬೇಕೆಂದು ಹಟಮಾಡಿ ಕಳಿಸಿದ್ದಳು.

ಅಪ್ಪ ಸೊಪ್ಪಿನ ಹೊರೆಯನ್ನು ಬೇರೆ ಮನೆಗೆ ತೆಗೆದುಕೊಂಡು ಹೋದ. ಯಶವಂತ ಮನೆಗೆ ಹಸಿ ಹೊರೆ ತಂದ. ಮಂಜಮ್ಮ ಬೇರೆ ಕಡೆ ಕೆಲಸಕ್ಕೆ ಹೋಗಿದ್ದಳು.

ಸುಮಾರು ಹತ್ತು-ಹನ್ನೊಂದು ಗಂಟೆಯ ಸಮಯಕ್ಕೆ ಇಬ್ಬರು ಶಾಲೆಯ ಮಕ್ಕಳು ಬಂದು ಯಶವಂತನನ್ನು ಶಾಲೆಗೆ ಕರೆದುಕೊಂಡು ಹೋದರು. ಈಗ ಅವನಿಗೆ ಮರೆತುಹೋದ ಜೇಡದ ಬಲೆ ನೆನಪಾಗಿ ಹುರುಪಿನಿಂದಲೇ ನಡೆದ.

ಆದರೆ ಅಲ್ಲಿ ಕಂಡ ದೃಶ್ಯವೇ ಬೇರೆ. ಶಾಲೆಯ ಹೆಡ್‌ಮಾಸ್ತರರು ಅವರ ಜೊತೆ ಶಾಲೆಯ ಅಧ್ಯಕ್ಷರಾದ ಸೀತಾರಾಮ ಹೆಗಡೆ, ಸದಸ್ಯರಾದ ಮೂವರ ಹೊರತಾಗಿಯೂ, ನಾಲ್ಕಾರು ಜನ ಸೇರಿದ್ದರು. ಹತ್ತಾರು ಹುಡುಗರೂ ಇದ್ದರು.

ಯಶವಂತನನ್ನು ಪಂಚಾಯಿತಿ ಮಂಡಳಿಯ ಮಧ್ಯೆ ನಿಲ್ಲಿಸಲಾಯಿತು. ಯಶವಂತನಿಗೆ ಇದೆಲ್ಲ ವಿಚಿತ್ರವೆನ್ನಿಸಿತು.

ಯಶವಂತನನ್ನು ಅವರು ವಿಚಾರಿಸುತ್ತಿದ್ದರು. ಅವರು ವಿಚಾರಿಸುವ ರೀತಿ ಕಳ್ಳರನ್ನು ಪೊಲೀಸರು ವಿಚಾರಿಸಿಕೊಳ್ಳುವಂತೆ ಇತ್ತು.

ಅವರ ಪ್ರಶ್ನೆಯೆಂದರೆ, "ಶಾಲೆಯ ಗಡಿಯಾರವನ್ನು ಕದ್ದವರು ಯಾರು?"

ಹಳೆಯ ಕಾಲದ ಶಾಲೆ. ಶಾಲೆಯಲ್ಲಿ ಒಂದು ಗಡಿಯಾರವಿದ್ದಿರಲಿಲ್ಲ.

ಗಡಿಯಾರ ಇಲ್ಲದೇ ಶಾಲೆ ನಡೆಯುತ್ತಿತ್ತು. ಮಾಸ್ತರು ಕೂಡ್ರುವ ಮೇಲ್ಗಡೆ ಮಾಡಿಗೆ, ಒಂದು ಹಂಚು ತೆಗೆದು ಗಾಜಿನ ಹಲಗೆಯನ್ನು ಕೂಡ್ರಿಸಿದ್ದರು. ಅದರ ಮುಖಾಂತರ ಸೂರ್ಯನ ಕಿರಣ ಒಳಗೆ ಹಾದು ಗೋಡೆಯ ಮೇಲೆ ಬೀಳುತ್ತಿತ್ತು. ಆ ನೆರಳು ಗೋಡೆಯ ಯಾವ ಭಾಗದಲ್ಲಿ ಅಥವಾ ಎಷ್ಟು ಎತ್ತರದಲ್ಲಿ ಬೀಳುತ್ತದೆ ಎನ್ನುವುದರ ಮೇಲಿಂದಲೇ ವಿಶ್ರಾಂತಿ ಬಿಡುವ ವೇಳೆ,

ಶಾಲೆ ಬಿಡುವ ವೇಳೆ ಆಯಿತೆಂದು ತಿಳಿಯುತ್ತಿದ್ದರು. ನೆರಳು ಕಿಡಕಿಗಿಂತ ಮೇಲೆ ಹೋಯಿತೆಂದರೆ ಮಕ್ಕಳು ಶಿಕ್ಷಕರ ಪಾಠದ ಕಡೆಗಿಂತ ಗೋಡೆಯ ಮೇಲಿನ ನೆರಳಿನ ಕಡೆಗೇ ಹೆಚ್ಚು ಲಕ್ಷ್ಯ ಕೊಡುತ್ತಿದ್ದರು.

ವೇಳೆಯನ್ನು ತಿಳಿಯಲು ಇನ್ನೊಂದು ವಿಧಾನವೂ ಇತ್ತು. ಸೂರ್ಯನಿಗೆ ಎದುರಾಗಿ ನಿಂತು ನೆರಳಿನ ತುದಿಯನ್ನು ಗುರುತಿಸಿ, ಅವರದೇ ಹೆಜ್ಜೆಯಿಂದ ಅಳೆಯುವುದು. ಸೂರ್ಯನ ಚಲನೆಗೆ ಅನುಸರಿಸಿ ಹೆಜ್ಜೆಯ ಲೆಕ್ಕಾಚಾರ ಹೆಚ್ಚು ಕಡಿಮೆಯಾಗುತ್ತಿತ್ತು. ಇದನ್ನು ಕರಾರುವಾಕ್ಕಾಗಿ ಲೆಕ್ಕಾಚಾರ ಮಾಡುವವನೆಂದರೆ ಶಂಕರ ಅಡಿ.

ಶಂಕರ ಅಡಿ ಎಂದರೆ ಶಾಲೆಯಲ್ಲಿ ವಿಜ್ಞಾನಿಯೇ ಆಗಿದ್ದ. ಮಾಸ್ತರರು ಹಾಗೆ ಕರೆಯುತ್ತಿದ್ದರು. ಚಿಲಕದ ದುರಸ್ತಿ, ಕುರ್ಚಿಗೆ ಬೋಲ್ಟ್ ಹಾಕುವುದು, ಗಡಿಯಾರಕ್ಕೆ ಕೀಲಿ ಕೊಡುವುದು, ಎರಡು ಬೆಣಚುಕಲ್ಲು ತಿಕ್ಕಿ ಬೆಂಕಿ ಮಾಡುವುದು, ಸಾಯ್ಕಲ್‌ಬ್ರೇಕ್ ದುರಸ್ತಿ ಮಾಡುವುದು ಇತ್ಯಾದಿ. ಸ್ಕ್ರೂ ಡ್ರ್ಯಾವರ್ ಇತ್ಯಾದಿ ಕೆಲವು ಸಲಕರಣೆ ಅವನ ಪಾಟೀಚೀಲದಲ್ಲೇ ಇರುತ್ತಿತ್ತು. ಆತ ಏಳನೇ ತರಗತಿಯಲ್ಲಿ ಓದುತ್ತಿದ್ದ.

ಹೀಗೆ ಅನಿಶ್ಚಿತ ಲೆಕ್ಕಾಚಾರದಿಂದ ಶಾಲೆ ಸಾಗುತ್ತಿರುವುದು ಈಗ ಹೊಸದಾಗಿ ಆಯ್ಕೆಯಾದ ಅಭಿವೃದ್ಧಿ ಮಂಡಳಿಯ ಸದಸ್ಯರಿಗೆ ಸರಿಕಂಡಿರಲಿಲ್ಲ. ಆದ್ದರಿಂದ ಅವರವರೇ ಚಂದಾ ಹಾಕಿಕೊಂಡು ಶಾಲೆಗೆ ಒಂದು ಗೋಡೆ ಗಡಿಯಾರ ತಂದುಕೊಟ್ಟಿದ್ದರು.

ಆ ಗಡಿಯಾರ ಕಳೆದ ರವಿವಾರ ಕಳುವಾಗಿ ಹೋಗಿತ್ತು.

ಅದೊಂದು ವಿಚಿತ್ರವಾದ ಕಳುವು.

ಶಾಲೆಯ ಎರಡು ಖೋಲಿಗಳು. ಒಂದು ಬದಿಯ ಬಾಗಿಲಿಗೆ ಒಳಗಿಂದ ಮೀಡ ಇದೆ. ಮತ್ತೊಂದು ಕಡೆ ಹೊರಗೆ ಚಿಲಕ. ಒಳಗಿನ ಮೀಡ ಹಾಕಿ ಮತ್ತೊಂದು ಬಾಗಿಲಿಗೆ ಬೀಗ ಹಾಕುತ್ತಿದ್ದರು. ಒಳಗಿನ ಮೀಡಕ್ಕೆ ಕಬ್ಬಿಣದ ಹುಕ್ಕು (ಮೊಳೆಕೊಕ್ಕೆ) ಕೂಡ ಇತ್ತು. ಹೊರಗಿನ ಬೀಗ ಭದ್ರವಾದುದು, ಮಾವಿನಕುರ್ವೆ ಬೀಗ. ಹಾಗಿದ್ದರೂ ಕಳುವಾಗಿದೆ. ಬೀಗ ಹಾಕಿದಂತೇ ಇದೆ. ಇಮಾರತಿನ ಹೆಂಚನ್ನು ತೆಗೆದು ಕೂಡಿಸಿದಂತೆ ಎಲ್ಲಿಯೂ ಸಂಶಯ ಬರುವುದಿಲ್ಲ.

ಆದರೆ ಯಶವಂತ ಮತ್ತು ಶಂಕರ ಅಡಿ ರವಿವಾರ ಶಾಲೆಯ ಕಡೆಯಿಂದ ಮೇಲೆ ಕೆಳಗೆ ಓಡಾಡುತ್ತಿದ್ದರೆಂದು ಯಾರೋ ಹೇಳಿದರಂತೆ. ಶಂಕರ ಅಡಿಯನ್ನು ಕರೆದು ವಿಚಾರಿಸಲಾಗಿ ತನಗೆ ಗೊತ್ತಿಲ್ಲವೆಂದು ಹೇಳಿದರೂ ದೇವರ ಮುಂದೆ ನಿಂತು ಹೇಳು ನೋಡುವ ಎಂದು ಹೇಳಿದಾಗ ಗಡಿಯಾರ ಕದ್ದವನು ಯಶವಂತ ಎಂದನಂತೆ.

ಹೀಗಾಗಿ ಬೇಟೆ ಕಂಡ ನಾಯಿಯಂತೆ ವಿಚಾರಣೆಗೆ ಜನ ಸೇರಿದ್ದರು.

"ಗಡಿಯಾರ ಕದ್ದವರು ಯಾರು?"

"ನನಗೆ ಗೊತ್ತಿಲ್ಲ"

"ನಿನಗೆ ಗೊತ್ತು. ಹತ್ತು ರೂಪಾಯಿ ಕೊಡುತ್ತೇವೆ ಹೇಳು."

"ನನಗೆ ಗೊತ್ತಿಲ್ಲ."

"ಪೊಲೀಸರ ಹತ್ತಿರ ಕೊಡುತ್ತೇವೆ."

"ಕೊಡ್ರೋ ಎರ್ಡುೞ, ಏನ್ ನೋಡತ್ರಿ?"

ಆದರೆ ಹೆಡ್ ಮಾಸ್ತರರಿಗೆ ಮಾತ್ರ ಯಶವಂತನ ಮೇಲೆ ಸಂಶಯ ಇರಲಿಲ್ಲ. ಯಾಕೆಂದರೆ ಅವರು ತಿಳಿದರಂತೆ ಯಶವಂತ ಮುಗ್ಧ ಹುಡುಗ. ಸಂಭಾವಿತ ಕೂಡ. ಆದ್ದರಿಂದ ಅವರು "ತಡೆಯಿರಿ ತಡೆಯಿರಿ" ಎಂದರು.

ಆದರೆ ತಡೆಯಲಿಲ್ಲ. ಎರಡು ಜನ ಹೊರಗೆ ಶಾಲೆಯ ಬೇಲಿಯಲ್ಲಿದ್ದ ನುಕ್ಕಿಗಿಡದ ಬರಲು (ಬೆತ್ತ) ತಂದರು.

"ಅಂಗಿ ಕಳಚು" ಎಂದು ಬೊಬ್ಬಿರಿದರು. ಒತ್ತಾಯದಿಂದ ಅಂಗಿ ಕಳಚಿಸಿದರು.

ಇಬ್ಬರೂ ಒಂದೇ ಸಮನೆ "ರೊಂಯ್ ರೊಂಯ್" ಎಂದು ಮೊಕ ಮುಸುಡು ನೋಡದೆ ಬಡಿದರು. "ತಡೆಯಿರಿ ತಡೆಯಿರಿ" ಎಂದು ತಡೆಯಲು ಬಂದ ಹೆಡ್ ಮಾಸ್ತರರಿಗೂ ಪೆಟ್ಟು ಬಿತ್ತು.

ಹೊಡೆದ ಹೊಡೆತಕ್ಕೆ ಯಶವಂತನ ಬೆನ್ನು ರಕ್ತ ಚಿಮ್ಮಿತು. ಯಶವಂತ ನಿಂತಲ್ಲೇ ಉಚ್ಚಿ ಹೊಯ್ದುಕೊಂಡ.

ಇದನ್ನು ಹೊರಗೆ ಕಿಡಕಿಯಿಂದ ನೋಡುತ್ತಲೇ ಇದ್ದ ಶಂಕರ ಅಡಿ ಅಲ್ಲಿಂದಲೇ 'ಹೊಡೇ ಬೇಡ್ರೋ' ಎಂದು ಕೂಗಿಕೊಂಡು ಎಚ್ಚರತಪ್ಪಿ ಬಿದ್ದುಬಿಟ್ಟ.

ಇದನ್ನು ಕಂಡ ಜನ ಯಶವಂತನನ್ನು ಬಿಟ್ಟು ಆ ಕಡೆ ಹೋದರು.

ಅಷ್ಟರಲ್ಲಿ ಮನೆಗೆ ಬಂದ ಮಂಜಮ್ಮನಿಗೆ ಸುದ್ದಿ ತಲ್ಪಿಸಿದರು.

ಇದೇನೆಂದು ಗಾಬರಿಯಿಂದ ಶಾಲೆಗೆ ಓಡಿದಳು. ಯಶವಂತ ಒಳಗಡೆ ನಿಂತಿದ್ದಾನೆ. ಮತ್ತೆ ಈ ಜನ ಅವನನ್ನು ನೋಡಿಕೊಳ್ಳಲು ಹೋದರು.

ಮಂಜಮ್ಮ ಬಿರುಗಾಳಿಯಂತೆ ನುಗ್ಗಿದಳು. ಯಶವಂತನನ್ನು ತೆಕ್ಕೆ ಹಾಕಿಕೊಂಡಳು.

'ಬಡವರು ಸಿಕ್ಕಿದ್ರು ಅಂತ ಹೊಡಿತ್ರಾ? ನನಗೆ ಹೊಡೇರಿ, ಆ ಹಸುಳೆಗೆ ಹೊಡೆದರೆ ನಿಮ್ಮ ವಂಶ ನಾಶವಾಗಿ ಹೋಗ್ತದೆ" ಎಂದು ಆರ್ಭಟಿಸಿದಳು.

ಅವಳ ಆರ್ಭಟಕ್ಕೆ ಜನ ಹಿಂದೆ ಸರಿದರು. ಆದರೂ ಗುಂಪಿನಿಂದ ಯಾರೋ, "ಮಗನಿಗೆ ಚಲೋ ವಿದ್ಯೆ ಕಲಿಸಿದ್ದೆ. ಗಡಿಯಾರ ಕದ್ದವರು ಯಾರು ಕೇಳು. ಇಂಥಾದ್ದನ್ನು ಕುಡಿ ಇರುವಾಗಲೇ ಚಿವುಟಿ ಹಾಕಬೇಕು" ಎಂದರು.

"ಎಷ್ಟು ? ನಿಮ್ಮ ಗಡಿಯಾರದ ರೊಕ್ಕ ಎಷ್ಟು? ನಾ ಕೊಡ್ತೆ. ಮನೆ ಮನೆ ಬೇಡಿ ದುಡ್ಡು ಕೊಡ್ತೆ. ನನ್ನ ಮಗನನ್ನು ಮುಟ್ಟು ಅಧಿಕಾರ ನಿಮಗಿಲ್ಲ" ಎಂದು ಕಣ್ಣೀರು ಸುರಿಸುತ್ತ ಮಗನ ಕೈಹಿಡಿದು ಲಗುಬಗೆಯಿಂದ ನಡೆಸಿಕೊಂಡು ಮನೆಗೆ ನಡೆದಳು.

ಜನರೂ ನಡೆದರು.

"ದೋಸ್ತನಿಗೆ ಹೊಡೆಯುವುದನ್ನು ನೋಡೇ ಶಂಕರ ಅಡಿ ಕಿರಚ್‌ಕಂಡ" ಎಂದು ಜನ ಹೇಳಿಕೊಂಡರು. ಮಾಸ್ತರಿಗೆ ಮಾತ್ರ ಯಾಕೊ ಶಂಕರ ಅಡಿಯ ಮೇಲೇ ಸಂಶಯ ಹೆಚ್ಚಿತು.

ಆದರೆ ಆತ ಅಡಿಗಳ ಮನೆಯ ಮಗುವಲ್ಲವೇ?

ಯಶವಂತ ಎಂಟು ದಿನ ಹಸೆಯಿಂದ ಏಳಲಿಲ್ಲ. ಮಂಜಮ್ಮ ಹೊಡೆತದಿಂದ ಒಡೆದು ಹೋದ ಬೆನ್ನಿಗೆ ಉಪಚಾರ ಮಾಡಿದಳು.

ದೊಡ್ತಮ್ಮನೂ ಬೇಸರಗೊಂಡ. ಆದರೆ ಆತ ಅಪಮಾನಕ್ಕೆ ಒಳಗಾಗಿದ್ದ.

ಮನೆಗೆ ಹೋದ ಮ್ಹಾಸ್ತರು ಹೆಂಡ್ತಿಯೊಡನೆ ಶಾಲೆಯಲ್ಲಿ ನಡೆದ ಪ್ರಸಂಗವನ್ನು ಹೇಳಿಕೊಂಡು ಕಳವಳಿಸಿದರು.

"ಹಾಗ್ ನಿಮಗೆ ಅಡಿಯ ಮೇಲೆ ಸಂಶಯ ಬರಲು ಕಾರಣವೇನು?"

"ಅಡಿ ಯಾವಾಗಲೂ ಗಡಿಯಾರದ ಮೇಲೆ ಕಣ್ಣಿಡುತ್ತಿದ್ದ. ಆದನ್ನು ಮುಟ್ಟುವುದೆಂದರೆ ಅವನಿಗೆ ಎಲ್ಲಿಲ್ಲದ ಉತ್ಸಾಹ. ಅದರ ಬಗ್ಗೆ ನೂರಾರು ಪ್ರಶ್ನೆ ಕೇಳುತ್ತಲಿದ್ದ. ಮಕ್ಕಳ ಕುತೂಹಲವಪ್ಪ."

"ಅವರ ಅಪ್ಪನ ಕಡೆ ಹೇಳಿ."

"ಅಯ್ಯಪ್ಪ, ಅದು ಹೇಗೆ ಸಾಧ್ಯ! ಹಾಗೇನಾದರೂ ಆದರೆ ಜಾತಿಯ ಮರ್ಯಾದೆಯೇ ಹೋಗುತ್ತದೆ" ಎಂದು ಚೇರಮನ್ನರು ಹೇಳಿದರು.

"ಅದೊಂದು ಮಾತು ಎತ್ತಬೇಡಿ ಎಂದು ತಾಕೀತು ಮಾಡಿದ್ದಾರೆ."

ಯಶವಂತ ಆಗಾಗ 'ಅವ್ವಾ' ಎಂದು ನರಳುತ್ತಿದ್ದ. ಅವನ ನೋವು ಕಡಿಮೆ ಆದಂತೆ ಅಪಮಾನ ಜಾಸ್ತಿಯಾಗುತ್ತಿತ್ತು.

ತನಗೆ ಅಪಮಾನವಾದದ್ದು ಒಂದು ಕಡೆಯಾದರೆ ಅಪ್ಪ, ಅವ್ವ ಅಪಮಾನಗೊಂಡದ್ದು ಇನ್ನೊಂದು ಕಡೆ. "ನಿನ್ನಿಂದ ಮರ್ಯಾದಿ ಪೂರಾ ಹೋಯ್ತಲ್ಲೊ ಮಾರಿ. ಎಂಥ ಕೆಲ್ಸ ಮಾಡ್ದೆ? ಎಲ್ಲಿ ಹೋಯ್ತು ಗಡಿಯಾರ?" ಎಂದು ಅಪ್ಪ ಹೇಳಿದರೆ.

"ಏನಾಯ್ತು ಮಗ?" ಎಂದು ತಾಯಿ ಕೇಳಿದಳು.

"ನನಗೆ ಗೊತ್ತಿಲ್ಲ ಅವ್ವ; ನಾನು ಅಂಥಾ ಕೆಲ್ಸ ಮಾಡ್ಲಿಲ್ಲ."

"ಹೌದೊ ಮಗನೆ, ನೀ ಅಂಥವ ಅಲ್ಲ, ಅಲ್ದೆ ಗಡಿಯಾಳ ತಕಂಡ್ ನೀ ಎಂತಾ ಮಾಡ್ತೆ? ಅದೆಲ್ಲ ಸುಳ್ಳು ಹೇಳಿ ನಂಗೆ ತಿಳೀತದೆ. ಆದ್ರೆ ಏನು ಮಾಡೊದು ಬಡವರಿಗೆ ಬಾಯಿಲ್ಲ" ಎಂದು ಮರುಗಿದಳು.

ಯಶವಂತನಿಗೆ ಹೊಡೆತದ ಗಾಯವೇನೋ ಮಾಯುತ್ತ ಬಂತು.

ಆದರೆ ಹೇಗೆ ಶಾಲೆಗೆ ಹೋಗುವುದು? ಹೇಗೆ ಗೆಳೆಯರಿಗೆ ಮೋರೆ ತೋರಿಸುವುದು?

ಗೆಳೆಯರೆಲ್ಲ ಸುತ್ತ ಬಂದು ನಿಂತು "ಕಳ್ಳ ಕಳ್ಳ ಬಂದ ಕಳ್ಳ ಕಳ್ಳ ಕಳ್ಳ" ಎಂದು ಅರಚಿಕೊಂಡು ಚಪ್ಪಾಳೆ ಹೊಡೆದಂತಾಗಿ ಒಮ್ಮೆಲೆ ಚೀರಿಬಿಟ್ಟ ಯಶವಂತ. ಎಚ್ಚರಾದ ಮೇಲೆ ಕನಸು ಎಂದು ಅನ್ನಿಸಿತು.

ಎದ್ದವನಿಗೆ ಎನನ್ನಿಸಿತೋ ಶಾಲೆ ಬಿಟ್ಟ ಸಮಯ ನೋಡಿ ನೇರ ಶಾಲೆ ಹಿಂದಿನ ಗುಡ್ಡಕ್ಕೆ ಹೋದ. ಆಹಾ! ಇಡೀ ಹಿಂಡಿಗೆ ಹರಡಿಕೊಂಡಿದೆ ಬಲೆ!

"ಅವ್ವ ಒಂದೆಂಟ್ ದಿನ ಅಜ್ಜನ ಮನೆಗೆ ಹೋಗಿ ಉಳಕಂಡ ಬತ್ನೆ" ಎಂದು ತಾಯಿಯನ್ನು ಒಪ್ಪಿಸಿದ. ಅಪ್ಪ ಬೇಡ ಎಂದರೂ ಅಪ್ಪ-ಅವ್ವ ಇಲ್ಲದ ಸಮಯದಲ್ಲಿ ಮನೆಯಿಂದ ಹೊರಟ.

ಯಶವಂತ ಊರುಬಿಟ್ಟು ಹೋದ ಎಷ್ಟೋ ದಿವಸದ ನಂತರ ಹೆಡ್ ಮಾಸ್ತರರು ಮನೆಯಲ್ಲಿ ಹೆಂಡತಿಗೆ ಹೇಳಿದರು.

"ನನ್ನ ಊಹೇನೇ ಸರಿ ಆಯ್ತು!"

"ಏನದು?"

"ಶಾಲೆ ಗಡಿಯಾರ"

"ಅದ ನೀವು ಇನ್ನೂ ಮರೆಯಲೇ ಇಲ್ಲವಾ?"

"ಇಲ್ಲ: ಮರೆಯುವುದಕ್ಕಾಗುವುದಿಲ್ಲ. ಯಶವಂತ ಎಂಥ ಅಭಿಮಾನಿ ಹುಡುಗ ಗೊತ್ತಾ. ಅವನ ಅಪ್ಪ ಅವ್ವ ಹೇಗೂ ಸಹಿಸ್ಕೊಂಡಿದ್ದಾರೆ. ಗತಿ ಬೇರೆ ಏನುಂಟು?"

"ಈಗ ಯಾಕೆ ನೆನಪಿಗೆ ಬಂತು?"

"ಅದೇ ಈಗ ಜೋರು ಬೇಸಿಗೆ ಅಲ್ವಾ? ಎಷ್ಟೋ ಜನರ ಮನೆಯ ಬಾವಿಯಲ್ಲಿ ನೀರು ಒಣಗಿ ಹೋಗುತ್ತಲಿದೆ. ಅಡಿಗಳ ಮನೆ ಬಾವಿಯಲ್ಲೂ ನೀರು ಕಡಿಮೆಯಾಯಿತಂತೆ. ಅದಕ್ಕೆ ಅವರು ಬಾವಿಯಲ್ಲಿಯ ಅರಲು ಮಣ್ಣು ತೆಗೆಸಲು ಆಳುಗಳನ್ನು ನೇಮಿಸಿದ್ದರಂತೆ. ಅರಲು ತೆಗೆಯುವಾಗ ಒಂದು ಗಡಿಯಾರ ಸಿಕ್ಕಿತಂತೆ.

"ಹಾಂ!"

"ಹೌದು ಶಾಲೆಯ ಗಡಿಯಾರವೇ ಅದು ಎನ್ನುತ್ತಾರೆ."

"ಹೌದು ! ಅದು ಹೇಗೆ ಅಲ್ಲಿ!"

"ತಮ್ಮ ಮೇಲೆ ಆರೋಪ ಹೊರಿಸಲು ತಮಗೆ ಆಗದವರು ಯಾರೋ ಹೀಗೆ ಮಾಡಿದ್ದಾರೆ." ಎಂದು ಹೇಳಿದರಂತೆ ದೊಡ್ಡ ಅಡಿ.

"ಅದು ಯಾರ ಕೆಲಸವಪ್ಪ. ಎಂಥೆಂಥ ಜನ ಇರ್ತಾರೆ ಲೋಕದಲ್ಲಿ!"

"ನನಗೆ ಅನ್ನಿಸ್ತದೆ, ಆ ದಿನ ಶಂಕರ, ಅಡಿಗಳ ಮಗ ಯಶವಂತನಿಗೆ ಹೊಡೆದದ್ದು ನೋಡಿದನಲ್ಲ. ಏನೋ ಇವನನ್ನು ಕೇಳಿದಾಗ ಮೊದಲು ಬಾಯಿಗೆ ಬಂದ ಹೆಸರು ಯಶವಂತ, ಎಂದುಬಿಟ್ಟ. ಕೊನೆಗೆ ಪಶ್ಚಾತ್ತಾಪ ಆಗಿರಬೇಕು. ಹೊಡೆಯುವುದನ್ನೇ ನೋಡಿ ಅಲ್ಲೇ ಎಚ್ಚರತಪ್ಪಿ ಬಿದ್ದಿದ್ದನಲ್ಲ. ನಂತರ ತನ್ನ ಗುಟ್ಟು ಹೊರಬರುತ್ತದೆಂದು ಹೆದರಿ ಅವನೇ ರಾತ್ರಿ ಯಾವಾಗಲೋ ಬಾವಿಗೆ ಎಸೆದುಬಿಟ್ಟಿದ್ದಾನೆ."

"ಹಾಗೆ ಅಂತೀರಾ? ಅಂತಾ ಕಳ್ಳನಾ ಅವನು?"

"ಕಳ್ಳ ಅಂತಲ್ಲ. ಅವನಿಗೆ ಬೇಕಾಗಿತ್ತು ಅದು. ಅಪ್ಪನ ಭಯದಿಂದ ಮನೆಯ ಗಡಿಯಾರ ಪಡೆಯಲಾಗಲಿಲ್ಲ."

"ಮನೆ ಗಡಿಯಾರ?"

"ಹೌದು ಅವನಿಗೆ ಅದನ್ನು ಬಿಚ್ಚಿ ನೋಡಬೇಕಿತ್ತು. ಅವನೊಬ್ಬ ಮರಿ ವಿಜ್ಞಾನಿ" ಎಂದು ಹೆಡ್ ಮಾಸ್ತರರು ಮೌನವಾದರು.

❑

೨. ದೆವ್ವದ ಜೊತೆ ಮಾತುಕತೆ

ಅಜ್ಜನ ಮನೆಯಲ್ಲಿ ಎಲ್ಲಾ ಸುರಳೀತವೇ ಆಯಿತು. ಸ್ವತಃ ಅಪ್ಪನೇ ಶಾಲಾ ಸರ್ಟಿಫಿಕೇಟನ್ನು ತೆಗೆದುಕೊಂಡು ಹೋಗಿ ತಲ್ಪಿಸಿ ಬಂದಿದ್ದ. ಹೀಗಾಗಿ ಯಶವಂತನ ಶಾಲೆ ಮುಂದುವರೆಯಿತು.

ಅಜ್ಜನ ಮನೆಯಲ್ಲಿ ಮಾವ, ಅತ್ತೆ, ಅವರಿಗೆ ಇಬ್ಬರು ಮಕ್ಕಳಿದ್ದರು. ಒಂದು ಗಂಡು, ಇನ್ನೊಂದು ಹೆಣ್ಣು, ಗಂಡಿನ ಹೆಸರು ಸಾಂಬ. ಹುಡುಗಿಯ ಹೆಸರು ಪಾರ್ವತಿ. ಸಾಂಬ ಹಿರಿಯವ. ಅವನು ಯಶವಂತನಿಗಿಂತ ಒಂದು ವರ್ಷ ಹಿರಿಯವ. ಪಾರ್ವತಿ ಎರಡು ವರ್ಷ ಕಿರಿಯಳು. ಅವಳು ಮೂರನೇ ತರಗತಿಯಲ್ಲಿ ಓದುತ್ತಿದ್ದಳು.

ಯಶವಂತನಿಗೆ ಅತ್ಯಂತ ಪ್ರಿಯವಾದದ್ದು ಮಾವನ ಗಾಡಿ (ಎತ್ತಿನ ಚಕ್ಕಡಿ).

ಮಾವ ಗಾಡಿ ಹೊಡೆಯುತ್ತಿದ್ದ. ಆತನ ಎತ್ತು ಎರಡೂ ಬಹಳ ಸಭ್ಯವಾಗಿದ್ದವು. ಅವು ಗಿಡ್ಡವಾಗಿ ಇದ್ದವು. ಅಚ್ಚ ಬಿಳಿಯಾಗಿರಲಿಲ್ಲ. ಬಿಳಿ ಮೈಗೂದಲಿನ ಮಧ್ಯೆ ತೆಳ್ಳಗೆ ಕಪ್ಪು ಕೂದಲುಗಳಿದ್ದವು. ಒಂದು ಬಗೆಯಿಂದ ಧೂಳು ಹಿಡಿದ ಅಂಗಿಯ ಹಾಗೆ ಅವುಗಳ ಮೈದೊಗಲು ಇತ್ತು. ಎರಡು ಎತ್ತುಗಳೂ ಒಂದೇ ಮೈಬಣ್ಣದವು. ಎರಡರ ಬಾಲವೂ ಉದ್ದವಾಗಿದ್ದವು. ಬಾಲದ ತುದಿಗೆ ಚವರಿಯ ಹಾಗೆ ಕೂದಲಿನ ಗೊಂಡೆ. ಆ ಗೊಂಡೆಯ ಬುಡದಲ್ಲಿ ಸುರುಳಿ ಸುತ್ತಿದಂತೆ ಬಿಳಿಯ ಪಟ್ಟೆ. ಅದಕ್ಕೆ ತಾಗಿ, ಕೆಂಪೂ ಅಲ್ಲದ ಕಪ್ಪೂ ಅಲ್ಲದ ಮಧ್ಯದ ರೀತಿಯ ಅಂದರೆ ಮಾಸಲು ಬಣ್ಣದ ಪಟ್ಟೆ. ಇದು ಒಂದಾದರೆ ಎರಡನೆಯದು ನವಿಲಿನ ಗರಿಯ ಕಣ್ಣಿನ ಹಾಗೆ ಮುದ್ರೆಯುಳ್ಳ ಗೊಂಚಲು. ಅದು ಮೈಮೇಲೆ ನೊಣ ಕೂತಾಗ ತನ್ನ ಬಾಲವನ್ನು ಎತ್ತಿ ಹೊಡೆದು ಕೊಳ್ಳೋದನ್ನು ನೋಡೋದೇ ಒಂದು ಮಜ. ನೊರಜುಗಳೊ ಸಣ್ಣ ನೊಣವೋ ಕುಳಿತಾಗ ಈ ಎತ್ತುಗಳು ತಮ್ಮ ಚರ್ಮವನ್ನೇ ಕುಣಿಸುತ್ತವೆ. ಹಾಗೆ ತಾನೂ ತನ್ನ ಚರ್ಮ ಕುಣಿಸಬಹುದೋ ಎಂದು ಯಶವಂತ ಪ್ರಯತ್ನಿಸಿದ್ದಿದೆ. ಈ ಪ್ರಯತ್ನದಲ್ಲಿ ಅವನಿಗೆ ಸಾಧಿಸಿದ್ದೆಂದರೆ ಒಂದೇ ಹುಬ್ಬನ್ನು ಕುಣಿಸುವುದು. ಎಡದ ಹುಬ್ಬು ಹಾಗೇ ಇದ್ದು ಬಲದ ಹುಬ್ಬನ್ನು ಏರಿಸುವುದು ಅಥವಾ ಬಲದ ಹುಬ್ಬು ಹಾಗೆ ಇಟ್ಟು ಎಡದ ಹುಬ್ಬು ಏರಿಸುವುದು.

ಇದರಿಂದ ಯಶವಂತನ ಬಗ್ಗೆ ವಿಶೇಷ ಆಕರ್ಷಣೆಯಿಂದ ಶಾಲೆಯಲ್ಲಿ ಸಹ ಇವನ ಗೆಳೆಯರು ಸೇರಿ "ಯಶು ಯಶು ಹುಬ್ಬು ಹಾರಿಸು" ಎನ್ನುತ್ತಾರೆ.

"ನನಗೆ ಏನು ಕೊಡುತ್ತೀರಿ?"

"ಪೆನ್ಸಿಲ್."

"ಚಿತ್ರ" ಇತ್ಯಾದಿ ಹೇಳುತ್ತಾರೆ.

ಇದೆಲ್ಲಕ್ಕಿಂತ ಪಾರ್ವತಿಗೆ ಭಾವನ ಮೇಲೆ ಹೆಚ್ಚಿನ ಗೌರವ ಭಾವನೆ, ಯಾಕೆಂದರೆ ಅವಳು ಅನೇಕ ಸಲ ಹಾಗೆ ಒಂದೇ ಹುಬ್ಬು ಏರಿಸಲು ಪ್ರಯತ್ನಿಸಿದ್ದಿದೆ. ಆದರೆ ಅವಳಿಂದ ಅದು ಸಾಧಿಸಲಿಲ್ಲ. ಎಷ್ಟೇ ಪ್ರಯತ್ನಿಸಿದರೂ ಎರಡೂ ಹುಬ್ಬುಗಳು ಒಟ್ಟಿಗೆ ಮೇಲೇರುವವು. ತನ್ನಿಂದ ಆಗದ ಇದನ್ನು ಸಾಧಿಸಿದ ಯಶವಂತ ಅವಳಿಗೆ ದೊಡ್ಡವನೇ.

ಆ ಎತ್ತುಗಳ ಕೋಡುಗಳೂ ನೋಡಲು ಸೊಗಸು. ಒಂದು ಎತ್ತಿನ ಕೋಡುಗಳು ಕಂಸ ಆಕಾರದಲ್ಲಿ ಎರಡೂ ಕಡೆ ಒಳಗೆ ಬಾಗಿದ್ದವು. ಅದೂ ಚಿಕ್ಕದಾಗಿತ್ತು. ಅಂದರೆ ಸುಮಾರಾಗಿ ಬಿದಿಗೆ ಚಂದ್ರನಂತೆ ಅವು ಕಾಣುತ್ತಿದ್ದವು. ಮತ್ತೊಂದರ ಕೋಡುಗಳು ಎರಡೂ ಮೇಲೆ ಬಂದು ಹಿಂದಕ್ಕೆ ಬಾಗಿದ್ದವು. ಅವನ ಮಾವ ಆ ಕೋಡುಗಳನ್ನು ಕನ್ನಡಿ ಹರಳಿನಿಂದ ತೆಳ್ಳಗೆ ಕೆತ್ತಿ ಹೊಳೆಯುವಂತೆ ಮಾಡಿದ್ದ. ಒಂದು ಎತ್ತಿಗೆ ಮಾತ್ರ ಹಣೆಯ ಮೇಲೆ ಬಿಳಿಯ ಗೋಲ ಇತ್ತು. ಒಂದರ ಹೆಸರು ಕುಶ, ಮತ್ತೊಂದು ಲವ.

ಯಶವಂತನಿಗೆ ಗಾಡಿ ಎತ್ತಿನ ಮೇಲೆ ಬಲು ಪ್ರೀತಿ. ಅವು ಹೊರುತ್ತಿರಲಿಲ್ಲ. (ಕೋಡಿನಿಂದ ತಿವಿಯುತ್ತಿರಲಿಲ್ಲ) ಕೊರಳ ಕೆಳಗಡೆ ಕೈ ಇಟ್ಟು ಗಂಗೆತೊಗಲನ್ನು ತುರಿಸಿದರೆ ಸಾವಕಾಶ ತನ್ನ ಕೊರಳನ್ನು ಎತ್ತಿ ಎತ್ತಿ ಹೊರಚಾಚುತ್ತಿತ್ತು. ಹಾಗೆ ಗಂಗೆತೊಗಲನ್ನು ತುರಿಸಿದಾಗ ಅವುಗಳಿಗೆ ನೊಚ್ಚಗೆ ಆಗುತ್ತಿತ್ತೆಂದು ತೋರುತ್ತದೆ. ಬಹಳ ಸಂತೋಷ ಅವಕ್ಕೆ. ಆದ್ದರಿಂದ ಅವುಗಳ ಸ್ನೇಹವನ್ನು ಯಶವಂತ ಸುಲಭವಾಗಿ ಗಳಿಸಿಕೊಂಡಿದ್ದ. ಕೊರಳಲ್ಲಿ ಹತ್ತಿಕೊಂಡ ಉಣಗನ್ನು ತೆಗೆದಾಗಲೂ ಅವಕ್ಕೆ ಬಲು ಖುಷಿ. ಅವು ಎಷ್ಟು ಸಭ್ಯವೆಂದರೆ ಕೆಳಗೆ ಹೊಟ್ಟೆಯಡಿಗೂ ಹಿಂದಿನ ಕಾಲ ಸಂದಿಯಲ್ಲಿ ಕೈಹಾಕಿದರೂ ಸಹ ಒದೆಯುತ್ತಿರಲಿಲ್ಲ. ಅವು ಗಾಡಿ ಎಳೆಯುವದಾದ್ದರಿಂದ ಗಾಡಿಯಲ್ಲಿ ಸಾಗಿಸುವ ಹುಲ್ಲು, ಗಾಲಿಗೆ ಹಾಕುವ ಡಾಂಬರ ಎಣ್ಣೆ ಇತ್ಯಾದಿಗಳ ಸಮ್ಮಿಶ್ರಣದ ಸೋಂಕಿನಿಂದ ಅವುಗಳ ಮೈ ವಾಸನೆ ಬರುತ್ತಿತ್ತು. ಅದು ತುಂಬ ಆಪ್ಯಾಯಮಾನವಾಗಿರುತ್ತಿತ್ತು. ಅವುಗಳ ಕೊರಳಿಗೆ ಒಂದೊಂದು ಗೆಜ್ಜೆ ಸರವಿತ್ತು. ಎತ್ತು ನಡೆದಾಗ ಅಥವಾ ಕೊರಳ ತಿರುಗಿಸಿದಾಗ ಅದು ಗಿಲ್ ಗಿಲ್ ಎಂಬ ಸದ್ದು ಮಾಡುತ್ತಿತ್ತು.

ಯಶವಂತನಿಗೆ ಶಾಲೆಯಿಂದ ಬಂದ ಸಮಯದಲ್ಲೆಲ್ಲ ಗಾಡಿ ಎತ್ತಿನ ಹತ್ತಿರವೇ ಸುಳಿದಾಟ.

ಅವನ ಮಾವ ನಿಂಗಪ್ಪ ಎತ್ತಿನ ಮೈ ತೊಳಿಸಲು ಹಳ್ಳಕ್ಕೆ ಒಯ್ಯುತ್ತಿದ್ದ. ಆಗೆಲ್ಲ ಯಶವಂತ ತಾನೂ ಹೋಗುತ್ತಿದ್ದ ಅಥವಾ "ಯಶೂ ಬಾರೋ ಎತ್ತ್ ಮೀಸಿಕೊಂಡು ಬರುವ" ಎಂದು ಕರೆಯುತ್ತಿದ್ದ. ಇಂಥ ಆಹ್ವಾನವನ್ನು ಯಶವಂತ ಬಿಡಲುಂಟೆ?

ಮಾವ ಒಂದು ಎತ್ತಿನ ಮೈ ತಿಕ್ಕಿದರೆ ಯಶವಂತ ಒಂದು ಎತ್ತಿನ ಮೈ ತಿಕ್ಕುತ್ತಿದ್ದ. ಎತ್ತಿನ ಮೈ

ತಿಕ್ಕಲೆಂದೇ ಕತ್ತದ ಹುರಿಯಿಂದ ಮಾಡಿದ ಕೈಕಲ್ಲಿ ಇರುತ್ತದೆ. ಅದರಿಂದ ಮೈ ತಿಕ್ಕಿದರೆ ಕಸರು ಚೆನ್ನಾಗಿ ಹೋಗುತ್ತದೆ ಮಾತ್ರವಲ್ಲ, ಎತ್ತುಗಳಿಗೆ ಮೈ ತುರಿಸಿದಂತಾಗಿ ಸಭ್ಯವಾಗಿ ನಿಲ್ಲುತ್ತವೆ. ಸಂಜೆ ಎತ್ತಿಗೆ 'ದಾಣಿ' ಕೊಡುವಾಗ ಮಕ್ಕಳೆಲ್ಲ ಸುತ್ತ ಬರುತ್ತಿದ್ದರು.

ಡಬ್ಬಿಯಲ್ಲಿ ಹುರುಳಿ ಬೇಯಿಸುತ್ತಿದ್ದರು. ಆ ಡಬ್ಬಿಗೆ ಒಂದು ಕಡೆ ಚಿಕ್ಕ ಚಿಕ್ಕ ರಂಧ್ರವನ್ನು ಮಾಡಿರುತ್ತಾರೆ. ಬೆಂದ ನಂತರ ಅದನ್ನು ಬಾಗಿಸುತ್ತಾರೆ. ಬಾಗಿಸಿ ಎಸರನ್ನು ಬಸಿದ ಮೇಲೆ ಒಂದು ಗೋಣಿಯ ಮೇಲೆ ರಾಶಿ ಹಾಕುತ್ತಿದ್ದರು. ಅದು ತಣಿಯುತ್ತಿದ್ದಂತೆ ಅದಕ್ಕೆ ತೆಂಗಿನಕಾಯಿ ಹೆರೆದ ಸುಳಿಯನ್ನು ಹಾಕಿ ಕಲಸುತ್ತಿದ್ದರು. ಆಗ ಹುರುಳಿ, ಘಮ ಘಮ ಎಂದು ವಾಸನೆ ಬರುತ್ತಿತ್ತು. ಆಗ ಯಶವಂತ ಮತ್ತು ಅವನ ಸಂಗಡ ಸಾಂಬ ಮತ್ತು ಪಾರ್ವತಿ ಒಂದೊಂದು ತಾಟನ್ನು ಹಿಡಿದುಕೊಂಡು ನಿಂತಿರುತ್ತಿದ್ದರು. ನಿಂಗಪ್ಪ ಮಕ್ಕಳಿಗೆ ಒಂದೊಂದು ಮುಷ್ಟಿ ಹುರುಳಿದಾಣಿ ಕೊಡುತ್ತಿದ್ದ. ಅದನ್ನು ಬಹಳ ಖುಷಿಯಿಂದ ಮೆಲ್ಲುತ್ತ ಉಳಿದವರು ಹಿಂದಕ್ಕೆ ಹೋಗುತ್ತಿದ್ದರು. ಯಶವಂತ ಮಾತ್ರ ಅಲ್ಲಿಯೇ ಕುಳಿತಿರುತ್ತಿದ್ದ. ಮಾವ ಹಾಗೆ ಕಲಸಿದ ಹುರುಳಿಯೊಡನೆ ಹತ್ತಿ ಕಾಳನ್ನು ಬೆರೆಸುತ್ತಿದ್ದ. ಹಾಗೆ ಬೆರೆಸಿ ಎರಡು ಡಬ್ಬಿ ಕಡಿ (ಅರ್ಧ ಕತ್ತರಿಸಿದ ಡಬ್ಬಿ)ಯಲ್ಲಿ ಆ 'ದಾಣಿ'ಯನ್ನು ಪಾಲು ಮಾಡಿ ಹಾಕುತ್ತಿದ್ದ. ಒಂದನ್ನು ತಾನು ಎತ್ತಿಕೊಂಡು ಇನ್ನೊಂದನ್ನು ಯಶವಂತನ ಕೈಗೆ ಕೊಡುತ್ತಿದ್ದ. ಒಂದೇ ಹೊತ್ತಿಗೆ ಎರಡೂ ಎತ್ತುಗಳ ಮುಂದೆ ಇಡುತ್ತಿದ್ದರು.

ಯಶವಂತನಿಗೆ ತಾನೇ ಗಾಡಿ ಯಜಮಾನ ಎನ್ನುವಷ್ಟು ಹೆಮ್ಮೆ. ಎಷ್ಟೋ ಸಲ ಎತ್ತುಗಳು ಕೆದಕಿ ಕೆದಕಿ ದಾಣಿ ತಿನ್ನುವಾಗ ಕುಣಿವ ಕೊರಳಿನಿಂದ 'ಗಿಲ್ ಗಿಲ್' ಗುಡುವ ಗೆಜ್ಜೆಯ ನಾದವನ್ನು ಆಲಿಸುತ್ತ ನಿಂತಿರುತ್ತಿದ್ದ. ಎತ್ತುಗಳು ದಾಣಿ ತಿನ್ನುವಾಗ ಮೂಜು ಒತ್ತುವುದರಿಂದ ದಬ್ಬಿಯ ಮೂಲೆ ಗಟ್ಟಿಯಾಗಿ ಹಿಡಿದುಕೊಂಡು ಬಿಟ್ಟಿರುತ್ತಿತ್ತು. ಎತ್ತು ತನ್ನ ನಾಲಿಗೆಯನ್ನು ಗಟ್ಟಿಯಾಗಿ ಚಾಚಿದಾಗ ಡಬ್ಬಿಯೋ ಸರಿದಾಡಿ ಅದಕ್ಕೆ ದಾಣಿ ಸಿಕ್ಕುತ್ತಿರಲಿಲ್ಲ. ಆಗೆಲ್ಲ ಯಶವಂತ ತನ್ನ ಕೈಯನ್ನು ಅದರಲ್ಲಿ ಹಾಕಿ ಕೆದರಿ ಕೊಡುತ್ತಿದ್ದ.

ಹೀಗೆ ಎತ್ತುಗಳು ದಾಣಿ ತಿಂದಾದ ಮೇಲೆ ಆ ಪಾತ್ರೆಯನ್ನು (ಡಬ್ಬಿ) ತೆಗೆದುಕೊಂಡು ಬರುತ್ತಿದ್ದ. ಎರಡು ಕಟ್ಟು ಹುಲ್ಲನ್ನು ಬಿಚ್ಚಿ ದಾವಣಿಗೆಯಲ್ಲಿ ಹಾಕಿ ಬರುತ್ತಿದ್ದ. ಇದು ಅವನಿಗೆ ಹೇಗೆ ಪ್ರಿಯವಾದದೊ ಹಾಗೆಯೇ ಮಾವ ನಿಂಗಪ್ಪನಿಗೂ ಪ್ರಿಯ. ಯಾಕೆಂದರೆ ಆ ಹುಡುಗ ಆ ಕೆಲಸ ಮಾಡದಿದ್ದರೆ ಅದನ್ನು ನಿಂಗಪ್ಪನೇ ಮಾಡಿಕೊಳ್ಳಬೇಕಾಗುತ್ತಿತ್ತು.

ಹುರುಳಿ ತಿನ್ನಿಸುವುದೊಂದನ್ನು ಬಿಟ್ಟರೆ ಸಾಂಬ ಮತ್ತೆ ಎತ್ತುಗಳ ಹತ್ತಿರ ಬರುತ್ತಿರಲಿಲ್ಲ. ಹಾಗಂತ ಅವನು ಎತ್ತನ್ನು ಪ್ರೀತಿಸದವನಲ್ಲ.

ಒಂದು ಸಲ ಆತ 'ಕುಶ'ನ ಮೈ ತಿಕ್ಕುತ್ತ ತಿಕ್ಕುತ್ತ ತೊಡೆಯನ್ನು ಮುಟ್ಟಿದಾಗ ಒದೆದು ಬಿಟ್ಟಿತಂತೆ. ಆ ಒದೆತ ಸಾಂಬನ ಸೊಂಟಕ್ಕೇ ತಾಗಿತು. ಸಾಂಬ 'ಅಯ್ಯಯ್ಯೋ ಸತ್ತೇ" ಎಂದು ಕೂಗಿದ.

ಕೂಗಿದ್ದೆಂದರೆ ಹಾಗೇ ಕೂಗಿದ್ದಲ್ಲ: ಬಿದ್ದು ಒದ್ದಾಡುತ್ತ ಕೂಗಿದ. ಅಂಗಳದಲ್ಲಿ ಏನೋ ಕೆಲಸ ಮಾಡುತ್ತಿದ್ದ ನಿಂಗಪ್ಪ ಓಡಿ ಬಂದು ಎತ್ತಿಕೊಂಡ.

"ನೋಡಿದ್ಯಾ, ಗಾಡಿ ಎತ್ತಿನ ಬುಡದಲ್ಲಿ ಹೋಗಬೇಡ ಎಂದಿದ್ದೆನಲ್ಲ?" ಎಂದು ಬೈದಂತೆಯೂ ಪಶ್ಚಾತ್ತಾಪ ಎಂಬಂತೆಯೂ ಹೇಳಿ "ಕುಶ ಹರಾಮಕೋರ" ಎಂದು ಎತ್ತನ್ನು ಬಯ್ದು ಮನೆಗೆ ಕರೆತಂದ. ಆಮೇಲೆ ಸಾಂಬನ ಸೊಂಟಕ್ಕೆ ಚೆನ್ನಾಗಿ ಕಾದ ನೀರನ್ನು ಹಾಕಿ ಮೆಣಸಿನ ಕಾಳಿನ ಲೇಪ ಮಾಡಿ ಉಪಚರಿಸಿದಳಂತೆ ಅವನ ತಾಯಿ ಮಂಕಾಳಿ. ಸಾಂಬ ಸರಿಯಾಗಿ ತಿರುಗಾಡು ವಂತಾಗಲು ಒಂದು ವಾರವೇ ಬೇಕಾಯಿತಂತೆ.

ಅದಕ್ಕೂ ಮೇಲೆ ಆತ ಎತ್ತುಗಳ ಸಹವಾಸ ಬಿಟ್ಟುಬಿಟ್ಟ. 'ಹುರುಳಿ ದಾಣಿ'ಗೆ ಮಾತ್ರ ಹಾಜರ್ ಇರುತ್ತಿದ್ದ.

ಯಶವಂತನಿಗೆ ಅಂಥ ಅನುಭವವೇನೂ ಆಗಲಿಲ್ಲ. 'ಯಾಕೆ ಎತ್ತಿನ ಹತ್ತಿರ ಬರಲು ಹೆದರುತ್ತೀ' ಎಂದು ಕೇಳಿದಾಗ ಪಾರ್ವತಿ "ಅದೊಂದು ದೊಡ್ಡಕತೆ ಅಲ್ವನ ಸಾಂಬ?" ಎಂದು ಪಾರ್ವತಿಯೇ ಹೇಳಿ ನಗೆಯಾಡಿದ್ದಾಳೆ.

ನಿಂಗಪ್ಪ ಈಗೀಗ ಎತ್ತಿನ ಕೆಲಸವನ್ನು ಯಶವಂತನ ಪಾಲಿಗೇ ಬಿಟ್ಟಿದ್ದಾನೆ. ಅದರಿಂದ ಯಶವಂತನಿಗೆ ತುಂಬ ಸಂತೋಷವಾಗಿದೆ. ಅವನೇ ಅರ್ಧ ಯಜಮಾನ ಎಂದರೂ ಸರಿ. ಎತ್ತುಗಳು ಅವನ ಮಾತನ್ನು ಕೇಳುವುದನ್ನು ನೋಡಿ ಪಾರ್ವತಿಗೂ, ಅತ್ತೆ ಮಂಕಾಳಿಗೂ ಆಶ್ಚರ್ಯವೇ.

ಈಗ ಯಶವಂತನ ಮನಸ್ಸಿನಲ್ಲಿ ತಾನೊಬ್ಬ ಗಾಡಿಕಾರ ಆಗಬೇಕೆಂದು ತೋರುತ್ತದೆ. ಮೊದಲಾಗಿದ್ದರೆ ಆತನಿಗೆ ಬಸ್ ಡ್ರ್ಯಾವರ್ ಆಗಬೇಕೆಂದು ಇತ್ತು.

ಅವನ ಊರಿಗೆ ಒಂದು ಬಸ್ಸು ಬರುತ್ತಿತ್ತು. ಅದು ದಿನಕ್ಕೆ ನಾಲ್ಕು ಸಲ ಓಡಾಡುತ್ತಿತ್ತು. ಅದು ಅರ್ಧ ಕಿಲೋಮೀಟರ್ ಇರುವಾಗಲೇ ಡುರ್ ಎಂದು ಸದ್ದು ಬರುತ್ತಿತ್ತು. ಅಲ್ಲದೆ ಪೋಂಯ್ ಎಂದ ಹಾರ್ನ್ ಸದ್ದು, ಬಲು ಖುಷಿ ಕೊಡುತ್ತಿತ್ತು.. ಆಗೆಲ್ಲ ಶಾಲಾ ಮಕ್ಕಳ ಕಿವಿ ನೆಟ್ಟಗಾಗುತ್ತಿದ್ದವು. "ಬಸ್ ಬಂತು ಬಸ್ ಬಂತು" ಎಂದು ಕೂಗುತ್ತಿದ್ದರು.

"ಸುಮ್ಮನಿರ್ರೋ. ಬಸ್ ಬಂದರೆ ಹೋಗ್ತದೆ ಅದರಷ್ಟಕ್ಕೆ, ನಿಮಗೇನು?" ಎಂದು ಮಾಸ್ತರು ಮೇಜಿಗೆ ಬೆತ್ತ ಬಡಿದು ಹೇಳುತ್ತಿದ್ದರು.

ಯಶವಂತನಿಗೆ ಅನ್ನಿಸುತ್ತಿತ್ತು.

......ಹಿಂದೆಲ್ಲ ಜನ ಕುಳಿತಿರುತ್ತಾರೆ. ಕಂಡಕ್ಟರ್ ರೈಟ್ ಎಂದೊಡನೆ ಡ್ರ್ಯಾವರ್ ಚಾಲೂ ಮಾಡುತ್ತಾನೆ. ಅಷ್ಟು ಜನರನ್ನು ಅವನೊಬ್ಬನೇ ಒಯ್ಯುತ್ತಾನೆ. ಡ್ರ್ಯಾವರ್ ಆದರೆ ಪುಕ್ಕಟೆಯಾಗಿ

ಎಷ್ಟೊಂದು ಊರು ತಿರುಗಬಹುದು. ಆದರೆ ಈಗ ಅನ್ನಿಸುತ್ತದೆ. ಬಸ್ಸಿನ ಮೇಲೆ ಕುಳಿತು ಚಾಲು ಮಾಡಿದರಾಯಿತು. ಬಂದು ಮಾಡಿ ಇಳಿದರಾಯಿತು. ಮತ್ತೇನಿದೆ ಮಜಾ? ಈ ಎತ್ತೇನು, ಅದರ ಮೈ ತೊಳೆವುದೇನು? ದಾಣಿ ಕೊಡುವುದೇನು, ಅದು ಗಾಡಿ ಓಡಿಸುವಾಗ ಗಿಲ್ ಗಿಲ್ ಆಗುವ ಸದ್ದೇನು, ಕೊರಳು ತುರಿಸಿದರೆ ತೋರುವ ಸ್ನೇಹವೇನು!

ಈಗ ಅವನಿಗೆ ಗಾಡಿಕಾರ ಆಗುವುದೇ ಮೇಲು ಎನ್ನಿಸುತ್ತಿದೆ.

ಅವನ ಅತ್ತೆ, ಮಂಕಾಳಿಯೂ ತವಾಷೆ ಮಾಡುತ್ತಿದ್ದಳು. "ಒಟ್ಟು ಯಶ್ವಂತ ಗಾಡಿ ಹೊಡೆಯೂದೆ ಚಲೋದಾಂಗ್ ಕಾಣ್ತದೆ."

ಆದರೆ ಶಾಲೆಯಲ್ಲಿ ಯಶವಂತ ಹಿಂದೇನೂ ಬೀಳುತ್ತಿರಲಿಲ್ಲ. ಆಟದಲ್ಲೂ ಪಾಠದಲ್ಲೂ ಅವನು ಸಕ್ರಿಯವಾಗಿ ಭಾಗವಹಿಸುತ್ತಿದ್ದ. ಆದರೆ ಮನೆಗೆ ಬಂದನೋ ಅವನಾಯಿತು ಅವನ ಗಾಡಿ ಎತ್ತಾಯಿತು.

ನಿಂಗಪ್ಪ ಬೇರೆ ಕಡೆ ಗಾಡಿ ಹೊಡೆದುಕೊಂಡು ಹೋದಾಗ ಅಂದರೆ ಮನೆಯಲ್ಲಿ ಎತ್ತುಗಳು ಇಲ್ಲದಾಗ ಆತನಿಗೆ ತುಂಬಾ ಬೇಜಾರು ಆಗುತ್ತಿತ್ತು.

ಆತನಿಗೆ ಎತ್ತಿನ ಕೆಲಸದ ಜೊತೆಗೆ ಮನೆಯ ಕೆಲಸವನ್ನು ಮಾಡಬೇಕಾಗುತ್ತಿತ್ತು. ಮುಂಜಾನೆ ಮನೆಯಿಂದ ಹಾಲನ್ನು ಒಯ್ದು ಅಂಗಡಿಗೆ ಕೊಡುವುದು ಯಶವಂತನ ಕೆಲಸವೇ ಆಗಿತ್ತು. ಅಂಗಡಿಗೆ ಹೋಗಿ ಚಿಕ್ಕ ಪುಟ್ಟ ಸಾಮಾನು ತರಬೇಕಾಗುತ್ತಿತ್ತು. ಶಾಲೆಗೆ ಹೋಗುವಾಗ ಸಾಂಬನ ಸಂಗಡ ಹೋಗಬೇಕಾಗುತ್ತಿತ್ತು ಮತ್ತು ಅವನ ದೇಖರೇಕೆ ನೋಡಿಕೊಳ್ಳಬೇಕಾಗುತ್ತಿತ್ತು. ಪಾರ್ವತಿ ಇನ್ನು ಚಿಕ್ಕ ಹುಡುಗಿಯಾಗಿದ್ದು ಅವಳನ್ನು ಶಾಲೆಗೆ ಕರೆದುಕೊಂಡು ಹೋಗುವುದು, ಕರೆದುಕೊಂಡು ಬರುವುದು ಅವನ ಕೆಲಸವಾಗಿತ್ತು.

"ಯಶುಭಾವ ಮನೆಯಲ್ಲಿ ಏನೂ ಓದದಿದ್ದರೂ ಒಂದನೆ ನಂಬರ್ ಬಂದವನೆ. ಅಣ್ಣ ಎಷ್ಟು ಓದಿದರೂ ತಲೆಗೇ ಹತ್ತೂದಿಲ್ಲ" ಎಂದು ತಾಯಿಯ ಎದುರು ಚಪ್ಪಾಳೆ ಹೊಡೆದು ಕುಣಿಯುತ್ತಿದ್ದಳು ಪಾರ್ವತಿ. ಆಗೆಲ್ಲ ತಾಯಿ ಮಂಕಾಳಿ....

"ಸುಮ್ಮನೆ ಉಳಿಯೇ, ಭಾವನ ಹೊತ್ಕೊಂಡು ಕುಣಿಬೇಡ. ನನ್ಮಗ ದಡ್ಡ ಆದರೆ ಆಗಲಿ" ಎಂದು ಹೆದರಿಸುತ್ತಿದ್ದಳು. ಆಗೆಲ್ಲ ಪಾರ್ವತಿಗೆ ತಾಯಿಯ ಪಕ್ಷಪಾತ ಹಿಡಿಸದೇ ಬೇಸರವಾಗುತ್ತಿತ್ತು. ಆದರೆ ಯಶುಭಾವನ ಮೇಲಿನ ಅಭಿಮಾನ ಮಾತ್ರ ಕಡಿಮೆ ಆಗುತ್ತಿರಲಿಲ್ಲ.

ಅವಳಿಗೆ ಅವನಲ್ಲಿ ದೊಡ್ಡ ಅಪೇಕ್ಷೆಯೆಂದರೆ ಅವನು ಹೇಳುವ ಒಗಟುಗಳು.

"ಯಶುಭಾವಗೆ ಎಷ್ಟೆಲ್ಲಾ ಒಗಟು ಬರುತ್ತದೆ" ಎಂದು ಅವಳಿಗೆ ಹೆಮ್ಮೆ.

ಅದನ್ನು ಅವಳು ತನ್ನ ಅಣ್ಣ ಸಾಂಬನಿಗೆ ಹಾಕುತ್ತಿದ್ದಳು. ಅವನಿಂದ ಉತ್ತರ ಬರದಾಗ ತಾಯಿಗೆ ಕೇಳುತ್ತಿದ್ದಳು.

"ಅವ್ವ ಅವ್ವ ಯಾರೂ ಹತ್ತದಿದ್ದ ಮರನ್ನ ನನ್ನ ಅಜ್ಜ ಹತ್ತುತ್ತಾನೆ. ಅದು ಏನು?"

"ನಂಗೆ ತಿಳಿಯದೆ!"

"ಹೋ ಹೋ ಅಣ್ಣ ನೀ ಹೇಳು!"

"ಹೂಂ. ನಂಗೊತ್ತಿಲ್ಲ."

"ಹೋ ಹೋ ಸೋತ!"

"ನೀ ಹೇಳು."

"ಚೌಳಿ."

"ಚೌಳಿ? ಯಾರ ಹೇಳಿದ್ರೆ ನಿಂಗೆ?"

"ಯಶುಭಾವ."

"ಯಶುಭಾವ ಸತ್ತೇ ಹೋಗ್ಲಿ" ಎಂದು ಸಾಂಬ ಶಾಪ ಹಾಕುತ್ತಿದ್ದ.

ಇದನ್ನು ಕೇಳಿದರೂ ತಾಯಿ ಏನೂ ಹೇಳುತ್ತಿಲ್ಲ. ಅಣ್ಣನನ್ನು ಹೆದರಿಸುತ್ತಿಲ್ಲ ಎಂದು ಪಾರ್ವತಿಗೆ ದುಃಖ.

ಹಾಗಾದರೆ ಮತ್ತೊಂದು ಹೇಳ್ತೆ ಕೇಳು. "ಕತ್ತಲ ಕೋಣೇಲಿ ಕತ್ತಿ ಬೀಸ್ತದೆ, ಅದೇನು?"

"ಹೋಗೆ ಅತ್ತಲಗೆ, ದೊಡ್ಡ ಚಾಕಣಿ."

"ನೀ ಹೇಳು ಜಾಣೆ" ಎಂದು ಸಾಂಬ ಹೇಳಿದ.

"ದನ ಕರು."

"ಅದ ಹೇಗೆ?"

"ರಾತ್ರಿ ಕತ್ತಲೇಲಿ ಕೊಟ್ಟಿಗೇಲಿ ಬಾಲ ಬೀಸುದಿಲ್ವಾ? ಅದೇಯ" ಎನ್ನುತ್ತಾಳೆ.

ಮೊದಮೊದಲು ತಾಯಿ ಯಶುಭಾವನನ್ನು ಹೊಗಳುತ್ತಿದ್ದಳು. ಈಗಿತ್ತಲಾಗಿ ಅವಳು ಹಾಗೆ ಮಾಡುತ್ತಿಲ್ಲ. ಬದಲಾಗಿ ಅವನಿಗೆ ಹೆಚ್ಚು ಹೆಚ್ಚು ಕೆಲಸ ಕೊಡುತ್ತಿದ್ದಳು. ಇದು ಪಾರ್ವತಿಗೆ ಒಡೆಯಲಾರದ ಒಗಟಾಗಿತ್ತು.

ಆದರೂ ಅವಳ ಮನಸ್ಸೇನೂ ಕೆಡುಕನ್ನು ಎಣಿಸುತ್ತಿರಲಿಲ್ಲ. ತನ್ನ ಶಾಲೆಯ ಅಭ್ಯಾಸವನ್ನು ಮುಗಿಸಿದೊಡನೆ ಯಶುಭಾವನ ಹತ್ತಿರ ಹೋಗುತ್ತಿದ್ದಳು.

"ಯಶುಭಾವ ಒಂದು ಒಗಟು"

"ಅಕ್ಕನ ಮನೆಗೆ ತಂಗಿ ಹೋಗೂದಿಲ್ಲ ತಂಗೀ ಮನೆಗೆ ಅಕ್ಕ ಹೋಗೂದಿಲ್ಲ. ಅದೆಂತದು?"

"ಎಂತದು?"

"ನೀನೇ ಹೇಳ್ಬೇಕು. ಎಲ್ಲಾ ನಾ ಹೇಳೂದಾದ್ರೆ ನೀನು ಅನ್ನ ಉಂಬೂದು ಯಾಕೆ?"

"ಕಾಲಿಗೆ ಹಾಕು ಜೋಡು-ಚಪ್ಪಲ್ಲು."

"ಅರೆ : ಹೌದಲ್ಲೋ!"

"ನಡಿ ಸುಮ್ಮನೆ."

"ಇನ್ನೊಂದು......."

"ಇನ್ನೊಂದಿಲ್ಲ. ಮತ್ತೊಂದಿಲ್ಲ."

"ಇನ್ನೊಂದೆ."

"ಒಂದು ಹಾಡ್ತದೆ, ಒಂದು ಓಡ್ತದೆ, ಒಂದು ನಿಂತಕಂಡ್ ನೋಡ್ತದೆ. ಅದೇನು?"

"ಹೋ, ನನಗೆ ಗೊತ್ತದೆ."

"ಏನು ಹೇಳು."

"ಹೊಳೆ ಹರೀಬೇಕಾದರೆ ಜುಳು ಜುಳು ಹಾಡ್ತದೆ, ದೋಣಿ ನೀರ್ ಮೇಲೆ ಓಡ್ತದೆ. ಹೊಳೆ ಮಧ್ಯದ ಕಲ್ಲು ನಿಂತಕಂಡ್ ನೋಡ್ತದೆ."

"ಸರಿ ಹುಶ್ಯಾರ್, ಹಂಗಾರೆ ಮತ್ತೊಂದು ಹೇಳ್ತೆ."

"ಅಕ್ಕನ ಮನೆಗೆ ತಂಗಿ ಹೋಗ್ತದೆ. ಆದರೆ ತಂಗಿ ಮನೆಗೆ ಅಕ್ಕಾ ಬರೂದಿಲ್ಲ. ಅದೇನು?"

"ಓ! ಅದು ಚಪ್ಪಲ್ಲು."

"ಛೇ ಹೋಗೆ. ಚಪ್ಪಲ್ ಅಕ್ಕನ ಮನೆಗೆ ತಂಗಿ ಹೋಗೂದಿಲ್ಲ. ತಂಗಿ ಮನೆಗೆ ಅಕ್ಕ ಬರೂದಿಲ್ಲ. ಇದ ಹಾಗಾ?"

"ಹಂಗಾರ ಯಂತಾದು?"

"ಅದೇ ನೀನೇ ಹೇಳಬೇಕು. ಇಲ್ಲದಿದ್ದರೆ ನನಗೆ ಬರೂದಿಲ್ಲ ಅಂತ ನೆಲಕ್ಕೆ ಮೂಗು ಹೊಸೆಬೇಕು."

"ಆಯ್ತು ಇಕಾ, ಮೂಗು........."

"ತಡೆ ತಡೆ ಹಾಗೆ ನೆಲಕ್ಕೆ ಮೂಗು ಹೊಸದರೆ ಮೂಗು ಸುಲಿದು ಹೋಗಿ, ಮೊಂಡಾಗಿ ಇದೆಂಥ ಮೊಂಡ ಮೂಗಿನ ಹುಡುಗಿ ಅಂತ ಯಾರೂ ಮದ್ವೆ ಆಗೂದಿಲ್ಲ."

"ಇಸ್ಸಿ ಹಾಂಗೆಲ್ಲ ಹೇಳಿದರೆ ಅವ್ವನ ಕೂಡ ಹೇಳ್ತೆ, ಹಾಂ?"

"ಅವ್ವನ ಕೂಡ ಹೇಳು ಅವ್ವನ ಅಪ್ಪನ ಕೂಡ ಹೇಳು, ಮೂಗು ಮಾತ್ರ ಸರಿ ಆಗೂದಿಲ್ಲ."

"ಅದಿರಲಿ. ಈಗ ಒಗಟಿನ ಉತ್ತರ ಹೇಳು."

"ಇಲ್ಲ ನನಗೆ ಈಗ ನಿದ್ರೆ ಬರ್ತದೆ."

"ಇದೊಂದು ಹೇಳು."

"ಅದು ಕೊಳಗ ಮತ್ತು ಸಿದ್ದೆ."

"ಅದು ಹೇಗೆ?"

'ಕೊಳಗಕ್ಕೆ ದೊಡ್ಡ ಬಾಯಿ ಅದರಲ್ಲಿ ಸಿದ್ದೆಯನ್ನು ಹಾಕಲು ಬರ್ತದೆ. ಆದರೆ ಸಿದ್ದೆ ಬಾಯಿ ಸಣ್ಣದು. ಕೊಳಗ ಹಿಡಿಯೋದಿಲ್ಲ."

"ಹೌದೌದು" ಎಂದು ಪಾರ್ವತಿ ಎದ್ದು ಓಡುವಳು.

ಹೀಗಿರುತ್ತ ಒಂದು ಘಟನೆ ನಡೆಯಿತು.

ಸಾಂಬ ಶಾಲೆಯಿಂದ ಅಳುತ್ತಲೇ ಮನೆಗೆ ಬಂದಿದ್ದ. ಅವನ ಮೊಣಕಾಲು ಒಡೆದು ರಕ್ತ ಸೋರುತ್ತಿತ್ತು. ಕೈ ಹಸ್ತ ಸುಲಿದು ಹೋಗಿತ್ತು. ಅಂಗಿ ಚೆಡ್ಡಿಗೆ ಮಣ್ಣು ಲೇಪಿಸಿಕೊಂಡಿತ್ತು.

ಹೀಗೆ ಕೂಗುತ್ತಲೇ ಬರುತ್ತಿರುವ ಮಗನನ್ನು ಮಂಕಾಳಿ ನೋಡಿದಳು.

"ಎಂತಾ ಆಗೋಯ್ತು ಮಗ್ನೇ" ಎಂದು ಕರೆತಂದಳು.

ಅಷ್ಟರಲ್ಲಿ ಯಶವಂತನೂ ಓಡೋಡಿ ಬಂದ. "ಇದೆ ಏನಾಯ್ತು ಅಂವ್ಗೆ ಯಶವಂತ; ಇದೇಯನ ನೀನು ಅವನ ನೋಡ್ಕೊಳ್ಳೂದು?" ಎಂದು ಎತ್ತರಿಸಿದ ಧ್ವನಿಯಲ್ಲಿ ಕೇಳಿದಳು.

"ಅವನೆ ನನ್ನ ದೂಡ ಹಾಕದ ಕಬಡ್ಡಿ ಆಡ್ಬೇಕಾದ್ರೆ" ಎಂದು ಸಾಂಬ ರಾಗ ಎಳೆದ.

"ಹೌದೇನಾ ಚಾಂಡಾಲಾ? ನಿನಗೆ ಅನ್ನ ಹಾಕಿದ್ದು ಹೆಚ್ಚಾಯ್ತು" ಎಂದು ಮುಷ್ಟಿ ಕಟ್ಟಿ ಹೊಡೆಯಲು ಮುಂದಾದಳು. ಅಷ್ಟರಲ್ಲಿ ಹಿಂದೆ ಸರಿದು ಯಶವಂತ ಹೇಳಿದ.

"ಇಲ್ಲಿ ಕೇಳು. ನಾ ಏನ ಮಾಡಲಿ, ನಾ ಏನು ಇವನ ಹತ್ತಿರ ಆಡಲು ಬಾ ಅನ್ನಲಿಲ್ಲ. ಅದರಲ್ಲೂ ಅವ ಮತ್ತೊಂದು ಪಕ್ಷವಾಗಿತ್ತು. ಕಬಡ್ಡಿ ಹಾಕ್ಕೊಂದು ಬಂದ. ಅವರ ಪಾರ್ಟಿಯವರೇ ಗೆಲ್ತಾ ಇದ್ದರು. ನಮ್ಮ ಪಾರ್ಟಿಲಿ ನಾನೊಬ್ಬನೇ ಇದ್ದೆ. ಹಿಂದೆ ಮುಂದೆ ನೋಡಲಿಲ್ಲ. ಹೋಗಿ ಗೆಂಚಕಿ ಹಾಕ್ದೆ. ತಪ್ಪಸಕಂಡ್ ಓಡೂಕ ಮಾಡಿದ. ಕೂಡ್ಲೆ ನೋಡು ಕಾಲ್ ಹಿಡಿದು ಎಳ್ದೆ. ಗೆರೆ ಮುಟ್ಟುಬಿಡ್ತ ಅಂತ ಹಿಂದಕ್ಕೆ ಎಳ್ದೆ. ಕಾಲೆಲ್ಲ ಸೊಲ್ದ ಹೋಯ್ತು. ನಾ ಏನ್ ಮಾಡಲಿ" ಎಂದು ಅವ ಭಾವಸಹಿತ ಹೇಳಿದ. ಆತ ಹೇಳುವಾಗ ಆಟವನ್ನು ಮತ್ತೊಮ್ಮೆ ಅನುಭೋಗಿಸುವನೋ ಎನ್ನುವಂತಿತ್ತು.

ಅದನ್ನು ಕೇಳಿದ ಮಂಕಾಳಿ.

"ದರಿದ್ರ ಹುಡ್ಗ, ಇಲ್ಲಿ ಮನೆ ಹಾಳ್ ಮಾಡೂಕ ಬಂದಿದ್ಯಾ. ನಿನಗೆ ಅನ್ನ ಹಾಕೂದಿಲ್ಲ" ಎಂದು ಏನೇನೋ ಕಿರುಚುತ್ತಿರಬೇಕಾದರೆ, ಅಷ್ಟೇ ಮುಗ್ಧವಾಗಿ,

"ಇಲ್ಲ ಅತ್ತೆ. ಒಂದು ಸಲ ತಪ್ಪಿಸಿಕೊಂಡು ಹೋಗಲಿ ಅಂತ ಕೈ ಸಡಿಲ ಮಾಡ್ದೆ. ಇವ ಜಬ್ಬ ಹೋರಿ. ಅವಗೆ ತಲೆನೂ ಇಲ್ಲ ಮೈಯ್ಯೂ ಇಲ್ಲ ಅತ್ತೆ. ಅವಗೇ ಹಾಕು ಊಟ. ಬಗೇಲಿ ಬೆಳೀಲಿ. ನಾ ಏನು ಆ ನಾಲ್ಕನೇತಿ ಗೋಯ್ದ ಹಿಡಿದ್ರೂ ತಪ್ಪಿಸಿಕೊಳ್ಳೂಕ ಆಗ್ತಿಲ್ಲ ಇವನ ಹತ್ತಿರ" ಎಂದ. ಹಾಗೆ ಹೇಳುವಾಗ ಅವನ ಮನಸ್ಸಿನಲ್ಲಾಗಲಿ ಅಭಿವ್ಯಕ್ತಿಯಲ್ಲಾಗಲಿ ವ್ಯಂಗ್ಯವಿದ್ದಿರಲಿಲ್ಲ. ಅದನ್ನು ಹಾರ್ದಿಕವಾಗೇ ಹೇಳಿದ್ದ.

ಇದನ್ನು ಕೇಳಿದ ಮಂಕಾಳಿ ನಿಜವಾಗಿ ಮಹಾಕಾಳಿಯಾದಳು.

"ಹಾದಿ ಮೇಲೆ ಬಿದ್ದವನೆ, ಮನೆ ಬಿಟ್ಟ ಬಿಕಾರಿ ನನ್ನ ಮಗನ ಮೇಲೆ ಹೇಳ್ವಷ್ಟು ಆದ್ಯ" ಎಂದು ಸಿಟ್ಟಿನಿಂದ ಯಶವಂತನ ಕ್ರಾಪಿನ ಕೂದಲನ್ನು ಹಿಡಿದು ಜಗ್ಗಿದಳು.

"ಅಯ್ಯೋ ಬಿಡೇ" ಎಂದು ಯಶವಂತ ಕೂಗಿಕೊಂಡ.

ಮಂಕಾಳಿ ಮಗನ ಕಾಲನ್ನು ತೊಳೆದು ಎಣ್ಣೆ ಬಳಿದಳು.

ಸಾಂಬ "ಕಾಲು ಸೆರಿಕಿ ಬರ್ತದೆ" ಅಂದುಕೊಳ್ಳುತ್ತ ಅಭ್ಯಾಸ ಮಾಡುವುದನ್ನು ಬಿಟ್ಟು ಆರಾಮಾಗಿ ಮಲಗಿದ.

"ಇಂದ್ ನಿಂಗೆ ಅನ್ನ ಹಾಕಿದರೆ ನಾನು ಅಪ್ಪ ಅಬ್ಬೆಗೆ ಹುಟ್ಟಿದವಳಲ್ಲ" ಎಂದು ಗರ್ಜಿಸಿದ ಮಂಕಾಳಿ ಆ ದಿನ ರಾತ್ರಿ ಯಶವಂತನಿಗೆ ಊಟವನ್ನೇ ಹಾಕಲಿಲ್ಲ.

ಇದನ್ನೆಲ್ಲ ನೋಡಿದ ಪಾರ್ವತಿ ಅವ್ವನೊಡನೆ ಮಾತಾಡಲು ಹೆದರಿಕೊಂಡು ಮೌನವಾಗಿಯೇ ಇದ್ದಳು. ಅವಳಿಗೆ ಉಣ್ಣಲು ಬಡಿಸಿದಾಗ ತಾನು ಉಣ್ಣುವುದಿಲ್ಲ ಎಂದಳು.

"ಏನು ಉಂಬೂದಿಲ್ಲ ಅಂತ್ಯಾ? ಆ ರಾಕ್ಷಸಗೆ ಅನ್ನ ಹಾಕಲಿಲ್ಲ ಅಂತ ನೀನು ಉಂಬುದಿಲ್ಲ ಅಂತ್ಯಾ ಮಗ್ವೆ" ಎಂದು ಅವಳ ಬೆನ್ ಮೇಲೆ ಒಂದು ಗುದ್ದಿದಳು. ಅವಳನ್ನು ರಟ್ಟೆ ಹಿಡಿದು ಎಳದುಕೊಂಡು ಬಂದು ಬಟ್ಟಲ ಎದುರು ಕೂಡ್ರಿಸಿದಳು.

"ಊಟ ಮಾಡಿದರೆ ಆಯ್ತು, ಇಲ್ಲದಿದ್ದರೆ ಗಂಟ್ಲಿಗೆ ಹಾಕಿ ತುರಕ್ತೆ" ಎಂದಳು.

ಪಾರ್ವತಿ ಅವ್ವನಿಗೆ ಹೆದರಿಯೇ ಊಟ ಮಾಡಿದಳು.

ಅದಾದ ಮೇಲೆ ಏನು ತೋರಿತೋ ಒಂದು ಬಟ್ಟಲಲ್ಲಿ ಬಡಿಸಿ.

"ಬಾರೋ ಉಣ್ಣು ಪಿಶಾಚಿ" ಎಂದಳು.

"ಇಲ್ಲ ನಾನು ಉಣ್ಣದೇ ಇಲ್ಲ" ಎಂದು ಹಠಮಾಡಿ ಮಲಗಿದ ಯಶವಂತ.

ಮಾರನೇ ದಿನ ಯಶವಂತನ ಮಾವ ಗಾಡಿ ಹೊಡೆದುಕೊಂಡು ಬಂದ.

ಬಂದು ಒಳ ಹೊಕ್ಕಿದ್ದೇ "ನೋಡಿ ನೋಡಿ ಆ ಬೀದಿ ಮೇಲೆ ಬಿದ್ದ ಬಿಕಾರಿ ಮಾಡಿದ್ದ ಸಾಂಬನ ಕಾಲು ನೋಡಿ" ಎಂದು ಎಲ್ಲಾ ವಿವರ ಹೇಳಿದಳು. ಅವನಿಗೂ ಯಶವಂತನ ಮೇಲೆ ಸಿಟ್ಟು ಬಂತು. ಆದರೆ ಅವನನ್ನು ಬೈಯ್ದರೆ ಆತ ಹಠಮಾಡಿ ಮನೆಗೆ ಹೊರಟು ನಡೆದರೆ ತನಗೆ ಎರಡು ರೀತಿಯ ಅಪಾಯ. ಒಂದನೆಯದಾಗಿ ಅಕ್ಕನ ಮಗನಿಗೆ ಅನ್ನ ಹಾಕಲು ಆಗದೆ ನೆಪ ಹೇಳಿ ತಿರುಗಿ ಕಳಿಸಿದ ಎಂದು. ಅದಕ್ಕಿಂತ ಮುಖ್ಯ ಅವನಿಗೆ ಯಶವಂತನ ಸಹಾಯ ಬೇಕಿತ್ತು. ಈಗ ಆತ ಎತ್ತುಗಳ ಜವಾಬ್ದಾರಿಯನ್ನು ಅವನಿಗೇ ವಹಿಸಿದ ಹಾಗಿದೆ. ಇನ್ನೊಂದು ವರ್ಷ ಹೋದರೆ ಅವನಿಗೂ ಗಾಡಿ ಹೊಡೆಯಲು ಕಲಿಸಿಬಿಟ್ಟರಾಯಿತು. ಇಲ್ಲದಿದ್ದರೆ ಪ್ರತಿಸಲ ಬೇರೆಯ ಆಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಇಷ್ಟೆಲ್ಲ ಒಂದು ಗಳಿಗೆ ಗ್ರಹಿಸಿದ ನಿಂಗಪ್ಪ.

"ಸುಮ್ಮನುಳಿಯೇ ನೀನು. ಬಂದ ಕೂಡ್ಲೆ ದೊಡ್ಡ ಪುರಾಣ ತೆಗೆದ್ಲು, ಮನೆಗೆ ಬಂದರೆ ಸತ್ತ್ಯೋ ಇದ್ಯೋ ಕೇಳೂ ಹಂಗಿಲ್ಲ. ಆಸರ ಬೇಕಾ ಹೇಗೆ ಕೇಳೂಕು ಹೊತ್ತಿಲ್ಲ. ಎಂಥ ಹೆಣ್ಣೋ ನೀನು" ಎಂದ.

ಸಿಟ್ಟಿನ ಮಧ್ಯೆಯೂ ತಾನೂ ಸಣ್ಣ ತಪ್ಪು ಮಾಡಿದೆ ಎಂದು ಅವಳಿಗೆ ಅನ್ನಿಸದೇ ಹೋಗಲಿಲ್ಲ.

"ಇಲ್ಲ ಅಪ್ಪ, ಅವರು ಕಬಡ್ಡಿ ಆಡ್ತಿದ್ರಲ್ಲ ಯಶುಭಾವ ಇವನ ಹಿಡ್ದ. ಇವ ತಪ್ಪಿಸ್ಕೋಬೇಕಾದ್ರೆ ಬಿದ್ದ. ಯಾರೇನು ಮಾಡೂರು ಇವಂದೇ ತಪ್ಪು" ಎಂದುಬಿಟ್ಟಳು ಪಾರ್ವತಿ.

“ಹೌದೇನೊ ನೀ ಯಾಕೆ ಆಡೂಕ ಹೋಗಿದ್ಯಾ ಜೀವಿಲ್ಲದವ. ಸುಮ್ಮನ ಕೂತ್ಗಬೇಕಾಗಿತ್ತು. ಇವಳ್ ದೊಡ್ಡ್ ಮಗನ ಹೊತ್ಗೊ ಬಂದ ಬಿಟ್ಲು” ಎಂದು ಹೆಂಡತಿಗೆ ಹೆದರಿಸಿ.

“ಏನ್ ಅದು ಯಶವಂತ, ಇನ್ ಹಾಗ್ ಮಾಡ್ಬೇಡ. ಹೋಗು ಆ ಎತ್ತಗ ಕುಡೂಕೆ ನೀರು ಕೊಡು: ಎರಡು ಕಟ್ಟು ಹುಲ್ಲು ಬಿಚ್ಚಿ ಹಾಕು” ಎಂದ.

ಯಶವಂತ ತನ್ನೆಲ್ಲ ದುಃಖ ಮರೆತು ‘ಕುಶಲವ’ರಿದ್ದಲ್ಲಿ ಓಡಿದ.

ಈ ಘಟನೆಯ ನಂತರ ಮಂಕಾಳಿ ಯಶವಂತನನ್ನು ದ್ವೇಷಿಸತೊಡಗಿದಳು.

ಮನೆ ಕೆಲಸವನ್ನೆಲ್ಲ ಹೇಳತೊಡಗಿದಳು.

“ಅವನ್ನ ನನ್ನ ಮುಂದೆ ತಾರೀಫ್ ಮಾಡಿದ್ರೆ ನಿನ್ನ ಸಿಗಿದು ಹಾಕಿಬಿಡ್ತೆ ಮಗ್ವೆ” ಎಂದು ಮಗಳನ್ನು ಹೆದರಿಸಿದ್ದಳು. ಅವನ ಹತ್ತಿರ ಅವಳು ಸುಳಿದರೂ ರೇಗುತ್ತಿದ್ದಳು.

ಆದರೆ ಎತ್ತುಗಳಿಗೆ ‘ದಾಣಿ’ ಕೊಡುವಾಗ ಮಾತ್ರ ಅವರೆಲ್ಲ ಒಟ್ಟಿಗೇ ಸೇರುತ್ತಿದ್ದರು. ಆಗಲೇ ಪಾರ್ವತಿ “ಯಶುಭಾವ ಒಂದು ಒಗಟು ಹೇಳು” ಎನ್ನುತ್ತಿದ್ದಳು.

“ಯಾರೂ ಇಳಿಯದಿದ್ದ ಬಾವಿಯನ್ನು ನನ್ನ ಅಜ್ಜ ಇಳಿದ ಅದೇನು?”

“ಹಾವು.”

“ಅಲ್ಲ.”

“ಮೀನು.”

“ಅಲ್ಲ.”

“ನೀರು.”

“ಅಲ್ಲ.”

“ಹೇಳು ಹಾಗಾದರೆ?”

“ಬಾವಿ ಹಗ್ಗ.”

“ಮತ್ತೊಂದು ಹೇಳು.”

“ನನ್ನ ಅಜ್ಜ ರುಮಾಲು ಸುತ್ತೇ ಸುತ್ತತ. ಸುತ್ತೇ ಸುತ್ತುತ. ಎಷ್ಟು ಸುತ್ತಿದ್ರೂ ರುಮಾಲ ಉದ್ದ ಮುಗಿಯೋದೇ ಇಲ್ಲ. ಅದೇನು?”

"ಅದೇನು?"

"ನಿನ್ನ ಅಣ್ಣ ಬೃಹಸ್ಪತಿಯನ್ನು ಕೇಳು."

"ಇಲ್ಲ ನೀನೇ ಹೇಳು."

"ರಸ್ತೆ."

"ಮತ್ತೊಂದು."

"ಈಗ ಸಾಕು; ನನಗೆ ಎತ್ತಿನ ಮೈ ಉಜ್ಜಬೇಕು?"

"ಯಶ್ವಂತ ಇಂದು ಗಾಡಿ ಸವಾರಿಗೆ ಬರ್ತಿಯಾ?"

ಯಶವಂತನಿಗೆ ಆಶ್ಚರ್ಯವೋ ಆಶ್ಚರ್ಯ! ಅದರ ಜೊತೆ ಸಂತೋಷ. ಯಾವುದನ್ನು ಬಹಳ ದಿನಗಳಿಂದ ಕನಸು ಕಾಣುತ್ತಿದ್ದನೋ ಅದೇ ಅವನ ಎದುರು ಬಂದಿತ್ತು.

ಹಾಗಂತ ಆತ ಗಾಡಿ ಹತ್ತದವನೇ ಅಲ್ಲ ಎನ್ನುವಂತಿಲ್ಲ. ಎಲ್ಲೋ ಸಣ್ಣ ಪುಟ್ಟ ತಿರುಗಾಟ ಮಾಡಿದ್ದಿದೆ. ಅದು ಮಾವನಿಗೆ ದುಂಬಾಲು ಬಿದ್ದು. ಈಗ ಮಾವನೇ ಸವಾರಿಗೆ ಕರೆಯುವುದೆಂದರೇನು?

"ಸಂಜೆ ಹೋಗುವ ಕುಮಟೆಗೆ" ಎಂದುಬಿಟ್ಟ ಮಾವ.

ಸಾಂಬನ ಮುಂದೆ ಮತ್ತು ಅತ್ತೆಯ ಮುಂದೆ ಯಶವಂತ ಒಮ್ಮೆಲೇ ಬೆಳೆದು ದೊಡ್ಡವನಾಗಿಬಿಟ್ಟ! ಕುಮಟೆಗೆ ಹೋಗುವುದೆಂದರೆ ಊರಿನಲ್ಲಿಯ ತೋಟದ ಮಾಲಿಕರ ಅಡಿಕೆ ಅಥವಾ ತೆಂಗಿನ ಕಾಯಿ ಚೀಲವನ್ನು ಗಾಡಿಯ ಮೇಲೆ ಹಾಕಿಕೊಂಡು ಕುಮಟೆಯ ಮಾರ್ಕೆಟ್‌ಗೆ ಹೋಗುವುದು.

ಕುಮಟೆಗೆ ಹೋಗಿ ತಲ್ಪಲು ಸುಮಾರು ಆರು ಏಳು ತಾಸುಗಳೇ ಬೇಕಾಗುತ್ತದೆ. ರಾತ್ರಿ ಹತ್ತುಗಂಟೆ ಸುಮಾರಿಗೆ ಹೊರಟರೆ ಸುಮಾರು ಬೆಳಗಾಗುವುದರೊಳಗೆ ಮಾರ್ಕೆಟನ್ನು ತಲ್ಪಿದರೆ ಆಯಿತು. ಆ ದಿನ ಅಲ್ಲೇ ಇದ್ದು ಮತ್ತೆ ರಾತ್ರಿ ಅಲ್ಲಿಂದ ಹೊರಡಬೇಕು. ರಾತ್ರಿ ಬರುವಾಗ ಹಿಂಡಿ, ಹತ್ತಿಕಾಳು ಅಥವಾ ಮನೆಗೆ ಬೇಕಾಗುವ ಜಿನಸುಗಳನ್ನು ಯಾರಾದರೂ ಬಾಡಿಗೆಗೆ ಆಮಂತ್ರಿಸಿದರೆ ಅವನ್ನು ತುಂಬಿಕೊಂಡು ಬರುವುದು ವಾಡಿಕೆ.

ರಾತ್ರಿ ಯಶವಂತ ಬಹಳ ಉತ್ಸಾಹದಿಂದ ಹೊರಟ. ಹೊರಡುವಾಗ ಸಾಂಬನೂ ಪಾರ್ವತಿಯೂ ಎತ್ತನ್ನು ದಾಟಿಸುವ ಸರಗೋಲ್ ತನಕವೂ ಬಂದಿದ್ದರು. ಯಶವಂತ ಯಜಮಾನನ ಹಾಗೆ ಸಾಂಬ ಮತ್ತು ಪಾರ್ವತಿಯರ ಕಡೆ ಘನ ಗಾಂಭೀರ್ಯದಿಂದ ದೃಷ್ಟಿ ಹಾಯಿಸಿ ನಡೆದ.

ಯಶವಂತ ಮೊದಲೇ ಗಾಡಿ ಹತ್ತಿಕೊಂಡು ಕುಳಿತಿದ್ದ. ಗಾಡಿ ನಡೆವಾಗ ಎತ್ತುಗಳ ಕೊರಳ ಗೆಜ್ಜೆಯ ಸರ ಗಿಲ್ ಗಿಲ್ ಎಂದು ನಾದ ನುಡಿಸುತ್ತಿತ್ತು. ರಸ್ತೆಯ ಏರು ಇಳಿಗೆ ಗಾಡಿಯ ಚಕ್ರ ಮೇಲೂ ಕೆಳಗೂ ಆಗುತ್ತಿತ್ತು. ಆದ್ದರಿಂದ ಗಾಡಿ ಆ ಕಡೆ ಈ ಕಡೆ ಆಲುಗಾಡುತ್ತಿತ್ತು. ಒಮ್ಮೆ ಎಡಕ್ಕೆ ಒಮ್ಮೆ ಬಲಕ್ಕೆ ಏರುತ್ತಿತ್ತು ಇಳಿಯುತ್ತಿತ್ತು. ಚಕ್ರದ ಕಬ್ಬಿಣದ ಹಳಿ ಸಿಕ್ಕಿದ ಕಲ್ಲುಗಳು ಚರ್ ಚರ್ ಎಂದು ಹುಡಿಯಾಗುತ್ತಿದ್ದವು. ನಿಂಗಪ್ಪ ಯಾವುದೋ ಒಂದು ಯಕ್ಷಗಾನ ಪದವನ್ನು ಹಾಡುತ್ತಿದ್ದ.

ಅದು ಹುಣ್ಣಿಮೆಯ ರಾತ್ರಿ. ನೀಲವಾದ ಆಕಾಶ ಅತಿ ವಿಶಾಲವಾಗಿ ಕ್ಷಿತಿಜದವರೆಗೂ ಚಾಚಿತ್ತು. ದೂರದೂರದಲ್ಲಿ ಒಂದೊಂದು ನಕ್ಷತ್ರ ಮಿಣುಕುತ್ತಿದ್ದವು. ಗುಡ್ಡ ಬೆಟ್ಟಗಳೆಲ್ಲ ಬೆಳದಿಂಗಳ ಬಣ್ಣದಲ್ಲಿ ಬಿಡಿಸಿಟ್ಟ ಮನೋಹರವಾದ ಚಿತ್ರದಂತಿದ್ದವು. ಮೆಲ್ಲನೆ ಗಾಳಿ ಬೀಸುತ್ತಿತ್ತು. ಅದು ತಂಪಾಗಿ ಹಿತವಾಗಿತ್ತು. ಆ ಹಿತಕ್ಕೆ ಮೆಲ್ಲನೆ ಮರಗಳು ತಮ್ಮ ಮೈ ಒಡ್ಡಿದಂತೆ ತಲೆ ತೂಗುತ್ತಲಿದ್ದವು. ಎಲ್ಲೋ ದೂರ ಮರಗಳ ಪೊದೆಯಿಂದ ಹಕ್ಕಿಗಳು ಆಗ ಈಗ ನಾದಗೈಯ್ಯುವುದು ಕೇಳಿಬರುತ್ತಿತ್ತು.

"ಛೇ, ಅದು ಯಾವ ಹಕ್ಕಿ" ಎಂದು ಯಶವಂತ ಗ್ರಹಿಸುತ್ತಾನೆ. ತನಗೆ ಅನೇಕ ಹಕ್ಕಿಗಳ ಪರಿಚಯವಿದೆ. ಶಾಲೆಯ ಪಠ್ಯಪುಸ್ತಕದಲ್ಲಿ ಬಂದಿದ್ದವು. ಅಂತಹುದೇ ಹಕ್ಕಿಗಳನ್ನು ಆತ ನೋಡಿದ್ದಿದೆ.

ಅವನ ಮನೆಯ ಮುಂದಿನ ಕಾಸಗನ ಮರಕ್ಕೆ ಪ್ರತಿ ಚಳಿಗಾಲದಲ್ಲಿ ಗಿಳಿಗಳ ಹಿಂಡೇ ಬರುತ್ತಿತ್ತು. ಮುಂಜಾನೆ ಸರಿಯಾಗಿ ಏಳೂವರೆ ಹೊತ್ತಿಗೆ ಅವುಗಳ ಮೂರು ನಾಲ್ಕು ಗುಂಪು ಹಾರಿ ಬರುತ್ತಿತ್ತು. ಕೀಂಇ ಚೀಂಇ ಎಂದು ಅವು ಕೂಗುತ್ತಿದ್ದವು. ಏನೊ ಮಾತಾಡಿಕೊಳ್ಳುತ್ತಿದ್ದವೊ ಏನೋ. ಅದರ ಮಾತುಗಳು ಮಾತ್ರ ಇಂಪಾದದ್ದು. ಅದಕ್ಕೆಂದೇ ಅದಕ್ಕೆ 'ಕೀರವಾಣಿ' ಎಂದೊ ಅವುಗಳ ಕೂಗು ಗಿಲ್ ಗಿಲ್ ಆಗುವುದರಿಂದ ಗಿಳಿ ಎಂದೊ ಕರೆಯುತ್ತಿರಬಹುದು. ಅದನ್ನು ನೋಡುವುದನ್ನು ತಾನು ಎಂದೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಉರುಟ ತಲೆ ಕೆಂಪು ಚುಂಚು ಕೆಲವಕ್ಕೆ ಕೆಂಪೂ ಇಲ್ಲ. ಆದರೆ ಮೈ ತುಂಬ ಹಸಿರು ಸೊಗಸು. ಕೋಗಿಲೆ ಹಾಡುವುದನ್ನು ಆತ ಕೇಳಿದ್ದ. ಒಂದು ಸಲವಷ್ಟೇ ಆತ ಕೋಗಿಲೆಯನ್ನು ನೋಡಿದ್ದ. ಕಪ್ಪಾದ ಚಿಕ್ಕ ಹಕ್ಕಿ ರೆಕ್ಕೆಯ ಮೇಲೆ ಮಸುಕು ಮಸುಕಾದ ಬಿಳಿಯ ಚುಕ್ಕಿಗಳಿರುತ್ತವೆ. ಕಣ್ಣ ಸುತ್ತಲೂ ಬಿಳಿ ಚುಕ್ಕೆಗಳೆ. ಅದು ಗಂಡು ಪಕ್ಷಿಯಂತೆ. ಅದೇ ಹಾಡುವುದು. ಅದನ್ನು ಮಾಸ್ತರರು ಹೊಗಳುತ್ತಿದ್ದರು. ಇವರೆಲ್ಲ ಕೋಗಿಲೆಯನ್ನು ಇಷ್ಟೆಲ್ಲಾ ಹೊಗಳುತ್ತಾರೆ. ಆದರೆ ತನಗೆ ಮಾತ್ರ ಕಾಕಚೌಳ ಹಕ್ಕಿಯೇ ಹೆಚ್ಚು ಸೇರುತ್ತಿದೆಯಪ್ಪ. ಎಷ್ಟು ಚೆನ್ನಾಗಿ ಸಿಳ್ಳು ಹಾಕುತ್ತದೆ. ಸಿಳ್ಳಿನಲ್ಲೇ ಹಾಡುತ್ತದೆ. ತಾನು ಎಷ್ಟು ಸಲ ಹಾಗೆ ಸಿಳ್ಳು ಹಾಕಲು ಪ್ರಯತ್ನಿಸಲಿಲ್ಲ. ಅದು ಕೂಡ ಸಣ್ಣ ಹಕ್ಕಿ. ಕಪ್ಪು ಬಣ್ಣ. ಅದರ ಬಾಲ ಸೀಳಾಗಿದೆ. ಅದೇ ಇರಬೇಕೆಂದು ತೋರುತ್ತದೆ ಕಾಜಾಣ ಎಂದರೆ. ಯಾವುದೋ ಪುಸ್ತಕದ ಮುಖಪುಟದ ಮೇಲೆ ನೋಡಿದ ನೆನಪು.

ಯಶವಂತನಿಗೆ ತನ್ನಷ್ಟಕ್ಕೇ ನಗೆ ಬಂತು. ಎಂಥೆಂಥ ಜಾತಿ ಹಕ್ಕಿಗಳಿರುತ್ತವಪ್ಪ! ಹಲ್ಲುಕಿಸ್ಗನ ಹಕ್ಕಿ. ಅದು ತನ್ನ ಶಾಲೆಯ ಹಿಂದಿನ ಬೆಟ್ಟದಲ್ಲಿ ಅನೇಕ ಇದ್ದವು. ತಾನೇ ನೋಡಿದ್ದೇನೆ. ಅದರ ಚುಂಚು ಸುಮಾರು ಅದರ ದೇಹದಷ್ಟೇ ಉದ್ದ. ಮುಂದೆ ಬಾಗಿರುತ್ತದೆ. 'ಕಂಯಿ ಕುಂಯಿ' ಎಂದು ಕೂಗುತ್ತದೆ. ಮೈಬಣ್ಣ ಆಕರ್ಷಕವಲ್ಲದಿದ್ದರೂ ಅಸಹ್ಯವೇನೂ ಅಲ್ಲ. ಪಕ್ಕವನ್ನು ಬಿಡಿಸಿದಾಗ ಪಕ್ಕದ ತುದಿಗೆ ಬಿಳಿ ಗೆರೆಗಳಿದ್ದು ಚೆಂದ ಕಾಣುತ್ತದೆ. ಅಕೋ ಕಾಡುಕೋಳಿ ಕೂಗುತ್ತದೆ. ಅದರ ಕೂಗನ್ನು ತಾವು 'ಕೆಕ್ಕಾರ್ ಕೆರೆಕಟ್ ಕೆಕ್ಕಾರ್ ಕೆರೆಕಟ್' ಎಂದು ಅಣಕಿಸುತ್ತಿದ್ದೆವು. ಅಲ್ಲ, ಅದಕ್ಕೆ ಎಷ್ಟು ಧೈರ್ಯ! ನರಿ ಇದನ್ನು ಕಂಡರೆ ಹಿಡಿಯದೇ ಇರುತ್ತದೆಯೇ? ಆದರೂ 'ತಾನಲ್ಲಿದ್ದೇನೆ ಹಿಡಿಯುವುದಾದರೆ ಹಿಡಿ' ಎಂದು ಅಹಂಕಾರ ಅದಕ್ಕೆ. ಆ ನವಿಲಿನ ಕೂಗೇನೂ ತನಗೆ ಸೇರುವುದಿಲ್ಲಪ್ಪ. ನೋಡಲೇನೊ ಚೆಂದ. ಆದರೆ ಕೂಗುವಾಗ 'ಗೇಂಯೂ ಗೇಂಯೂ' ಎಂದು ಕೂಗುತ್ತದೆ.

ಒಂದು ಚಿಕ್ಕ ಮುಗಿಲು ಚಂದ್ರನಿಗೆ ಅಡ್ಡಾಯಿತು. ಪ್ರಕಾಶ ಮಂದವಾಯಿತು. ಅದರ ನೆರಳು ದೂರದ ಗುಡ್ಡದ ಮೇಲೆ ಬಿದ್ದು ಸಾಗುತ್ತಿತ್ತು. ಯಶವಂತನಿಗೆ ರೋಮಾಂಚನವಾಯಿತು. ಬೆಳದಿಂಗಳ ಕಡಲಲ್ಲಿ ತೇಲುವ ಹಡಗು ಎಂದುಕೊಂಡನಾತ.

ಮುಗಿಲು ಕಳೆದು ಮತ್ತೆ ಬೆಳಗಿತು ಬಾನು. ಬಾನಲ್ಲಿ ತೇಲುವ ಚಿನ್ನದ ಕಂದ ಚಂದಿರ ಎಂದುಕೊಂಡ. ಅಷ್ಟರಲ್ಲಿ ಯಾವುದೋ ಒಂದು ಹಕ್ಕಿ ಚೇಂವ್ ಎಂದು ಆಕಾಶದಲ್ಲಿ ಹಾರಿಹೋಯಿತು. ಎಲಾ! ಈ ಹಕ್ಕಿಗೆ ಎಷ್ಟು ಖುಷಿ. ಬೆಳದಿಂಗಳ ಕೊಳದಲ್ಲಿ ಈಸುತ್ತಿದೆಯಲ್ಲ!

ಯಶವಂತನು ತಾನೂನು ಹಕ್ಕಿಯಂತೆ ಹಾರುತ್ತಿದ್ದೇನೆ ಅಂದುಕೊಂಡ. ಶೀತಲವಾದ ಬೆಳದಿಂಗಳಿಗೆ ತನ್ನ ರೆಕ್ಕೆ ತೆರೆದಿದ್ದೇನೆ. ಬೀಸಿದ ರೆಕ್ಕೆಯಿಂದ ತೇಲುತ್ತೇನೆ. ತೇಲಿ ತೇಲಿ ಆ ಗುಡ್ಡದ ತುದಿಯ ಒಂದು ಮರದ ಮೇಲೆ ಹೋಗಿ ಕೂಡ್ರುತ್ತೇನೆ. ಸ್ವತಃ ಚಂದ್ರ ಈಸಾಡಿದಂತೆ ಆತನಿಗೆ ಕಂಡ. 'ಚಂದಿರನೇತಕೆ ಓಡುವನಮ್ಮ' ಎಂಬ ಕವಿತೆ ನೆನಪಾಯಿತು.

ಯಶವಂತ ಎಷ್ಟೊ ಹೊತ್ತು ಹೀಗೆ ಕನಸು ಕಾಣುತ್ತಲೇ ಇದ್ದ. ಬೆಳದಿಂಗಳಲ್ಲಿ ಮುಳುಗಿಹೋಗಿ ನಿಬ್ಬೆರಗಾಗಿದ್ದ ಪ್ರಕೃತಿಯಲ್ಲಿ ಆತ ಲೀನವಾಗಿ ಹೋಗಿದ್ದ. ಅವನ ಸುತ್ತ ಈಗ ಯಾವ ಕ್ಷುದ್ರ ಜಗತ್ತೂ ಇದ್ದಿರಲಿಲ್ಲ.

"ನಿದ್ರೆ ಬಂದೋಯ್ತನೋ?" ಎಂದು ನಿಂಗಪ್ಪ ಕೇಳಿದೊಡನೆ ಯಶವಂತ ಕನಸಿನಿಂದ ಎಚ್ಚರವಾದ.

"ಇಲ್ಲ ಇಲ್ಲ ತಿಂಗಳ ಬೆಳಕು."

"ಹೀಂಗೇ ತಿಂಗಳ ಬೆಳಕು ಅಂತಿದ್ರೆ ನೀನು ಗಾಡಿ ಹೊಡಿಯೂದ ಕಲಿಯೂದು ಯಾವಾಗ? ಎದ್ಕಾ" ನಿಂಗಪ್ಪ ಕರೆದ.

ಯಶವಂತನಿಗೆ ಖುಷಿಯೋ ಖುಷಿ, ಮುಂದೆ ಮಾವನ ಹತ್ತಿರ ಹೋದ.

"ಹಿಡಿ ಮೂಗನೇಣು" ಎಂದ ಮಾವ.

ಯಶವಂತನಿಗೆ ಎತ್ತಿನ ಮೂಗನೇಣನ್ನು ಹಿಡಿಸಿದ.

"ಹೀಗೆ ಬಾರಕೋಲನ್ನು ಹೆಗಲಿಗೆ ಇಟ್ಟಿಕೋ" ಎಂದ ಮಾವ. ಯಶವಂತನ ಕಡೆ ಬಾರಕೋಲು ಕೊಟ್ಟ. ಅಲ್ಲಿಯೇ ಹಿಂದೆ ಅಂಬಾರಗಳುವಿಗೆ (ಗಾಡಿ ತೊಟ್ಟಿಲ ಮೇಲ್ಬದಿಗೆ ಇರುವ ಗಡುತರ ಬಿದಿರು, ಅದನ್ನು ರಂಧ್ರ ಹೊಡೆದು ಗೂಟವನ್ನು ಪೋಣಿಸಿ ಕೆಳಗಿನ ಪಟ್ಟಿಗೆ ಜಗ್ಗಿ ಕಟ್ಟಿರುತ್ತಾರೆ.) ಎತ್ತಿನ ನೇಣು ತೂಗುಬಿಟ್ಟ.

ಯಶವಂತನಿಗೆ ರೋಮಾಂಚನ.

"ನೋಡು ಮುಂದೆ ಕೊರಕಲು ಬಂತು. ಗಾಡಿ ಎಡಕ್ಕೆ ಸರಿಸಬೇಕು. ಏನು ಮಾಡುತ್ತೆ?" ಎಡದ ಎತ್ತಿನ ಹಗ್ಗವನ್ನು ತುಸು ಜಗ್ಗಬೇಕು. ಬಲಬದಿಯ ಎತ್ತಿನ ಬಾಲದ ಬುಡವನ್ನು ಒತ್ತಬೇಕು. ಅಂದರೆ ಎಡದ ಎತ್ತು ಹಿಂದೆ ಜಗ್ಗಿ ಬಲದ್ದು ಜೋರು ನಡೆದು ಗಾಡಿ ಎಡಕ್ಕೆ ಸರಿಯುತ್ತದೆ.

ದೂರದಲ್ಲಿ ಬೇರೆ ಬೇರೆ ಗಾಡಿಯೂ ಬರುತ್ತಿತ್ತು?

"ನಿದ್ರೆ ಮಾಡ್ಬೇಡ. ಗಾಡಿ ಅಡಿಯಲ್ಲಿ ಬಿದ್ದು ಸಾಯ್ತಿ. ಮೂಕೆ ಕತ್ರಿಕಿಂತ ಹಿಂದೇ ತೊಟ್ಲ ತುದಿಗೆ ಕೊತ್ಕ" ಎಂದು ನಿಂಗಪ್ಪ ನಿರ್ದೇಶನ ಮಾಡಿದ.

ನೋಡು ಇಳಕಲು ಬಂತು, ಹೌದಾ? ಗಾಡಿ ಹೀಗೇ ಹೋದರೆ ಗಾಡಿಯ ಚಕ್ರ ಏನಾಗುತ್ತದೆ?

"ಜೋರು ಓಡುತ್ತದೆ."

"ಹೌದು. ಹಾಂಗ್ ಓಡಿದಾಗ ಎತ್ತಿನಿಂದ ಗಾಡಿಯನ್ನು ತಡೆಯಲಾಗುವುದಿಲ್ಲ. ಚಕ್ರ ಹೋಗಿ ಎತ್ತಿನ ಹಿಂದಿನ ಕಾಲಿಗೇ ಬಡಿಯುತ್ತದೆ. ಅದಕ್ಕೆ ಏನು ಮಾಡಬೇಕು?

"ಮುರಿ ಹಾಕಬೇಕು"

"ಹಾಂ. ಹೌದು. ಸ್ವಲ್ಪ ಎತ್ತಿನ ಮೂಗನೇಣು ಜಗ್ಗು. ಅಂದರೆ ಅವು ತಲೆಯನ್ನು ಮೇಲಕ್ಕೆತ್ತುತ್ತವೆ. ಎತ್ತಿನ ಕೊರಳ ಮೇಲಿರುವ ನೊಗ ಮುಂದಕ್ಕೆ ಜಾರುವುದಿಲ್ಲ. ಕೋಡಿನ ಬುಡದಲ್ಲೇ ತಡೆಯುತ್ತದೆ. ಕಾಲು ಕೆಳಗೆ ಹಾಕು. ಮೂಕೆ ಕತ್ರಿ ಒಳಗಡೆ ಇಳಿಬಿಡು. ಕೆಳಗೆ 'ಮುರಿ' ಅದೆಯಲ್ಲ, ಅದನ್ನು ಮೆಟ್ಟು."

ಯಶವಂತ ಹಾಗೇ ಮಾಡಿದ. ಗಾಡಿ ಸಾವಕಾಶ ಚಲಿಸಿತು.

ಅಬ್ಬ, ತಾನು ಎಷ್ಟು ಬೇಗ ಜಾಣನಾಗುತ್ತಿದ್ದೇನೆ!

ನೊಗವನ್ನು ಮೂಕೆಯ ಮೇಲೆ ಕೂಡ್ರಿಸಿರುತ್ತಾರೆ. ರೀಸು ಗಾಡಿಯ ಬೆನ್ನೆಲುಬು ಇದ್ದ ಹಾಗೆ. ಅದು ಹಿಂದಿನಿಂದ ಅಂದರೆ ಇಡಿಯ ಗಾಡಿ ತೊಟ್ಟಿಲಿನಿಂದ ಒಂದು ಅಡಿ ಹಿಂದಿನಿಂದ ಮುಂದಿನ ತನಕ ಒಂದೇ ಮರದ ಹೊಳಪೆ (ಪಕಾಸು)ಯಿಂದ ಮಾಡಿರುತ್ತಾರೆ. ಗಾಡಿ ತೊಟ್ಟಿಲು ಮುಗಿದೊಡನೆ ಮುಂದೆ ತ್ರಿಕೋನಾಕಾರ ಆಗುವಂತೆ ಅಡಿಕೆ ದಬ್ಬೆಯಿಂದ (ಅಡಿಕೆ ಮರದ ಸೀಳು) ತೊಟ್ಟಿಲ ಮುಂದಿನ ಅಡಿಯ ಆಧಾರದ ಮರಕ್ಕೂ ರೀಸಿನ ಮುಂದುಗಡೆಯೂ ತಾಗಿಸಿ ಚೆನ್ನಾಗಿ ಬಳ್ಳಿಯಿಂದ ಕಟ್ಟುಹಾಕಿರುತ್ತಾರೆ. ಅಥವಾ ಮೊಳೆಯಿಂದ ಹೊಡೆದಿರುತ್ತಾರೆ. ಇದೇ 'ಮೂಕೆ ಕತ್ರಿ'. ಇದರ ಮುಂಭಾಗ ಮೂಕೆ. ಕತ್ರಿಯ ಒಳಗಿಂದ ಕಾಲನ್ನು ಕೆಳಗಡೆ ಇಳಿಬಿಡಬಹುದು ಅಥವಾ ಒಂದು ಲೋಡು ಹಾಕಿ ಇಲ್ಲವೋ ಗೋಣಿಚೀಲ ಕಂಬಳಿ ಹಾಸಿಕೊಂಡು ಸಿಂಹಾಸನಾರೂಢನಾಗಿ ಮಹಾರಾಜನಾಗಬಹುದು. ಕೆಳಗಡೆ ಮುರಿ ಕಟ್ಟಿರುತ್ತಾರೆ. ಮುರಿ ಎಂದರೆ ಬ್ರೇಕು. ಗಾಲಿಯ ಹಿಂದುಗಡೆ ಮುರಿಕುಂಟೆ (ಮರದ ಗಡುತರವಾದ ಕಟ್ಟಿಗೆ) ಕಟ್ಟಿರುತ್ತಾರೆ. ಈ ಮುರಿಕುಂಟೆಗೆ ಉದ್ದವಾದ ಬೆತ್ತ ಅಥವಾ ಕಬ್ಬಿಣದ ಗಡುತರ ವಾಯರನ್ನು ಜೋಡಿಸಿರುತ್ತಾರೆ. ಅದೇ ಬೆತ್ತವನ್ನು ಮುಂದುಗಡೆ ಮೂಕೆಯ ಕೆಳಬಾಗಿಗೆ ಜೋಡಿಸಿರುತ್ತಾರೆ. ಈ ಬೆತ್ತವನ್ನು ಕಾಲಿನಿಂದ ಒತ್ತಿದಾಗ ಹಿಂದಿನ ಮುರಿಕುಂಟೆ ಗಾಲಿಗೆ ಗಟ್ಟಿಯಾಗಿ ಕಚ್ಚಿಕೊಳ್ಳುತ್ತದೆ. ಇದರಿಂದ ಇಳಕಲಿನಲ್ಲಿ ಗಾಲಿಯ ವೇಗ ಕಡಿಮೆಯಾಗುತ್ತದೆ. ಇದಕ್ಕೇ 'ಮುರಿ' ಎಂದೂ ಹಿಂದಿನ ಕಟ್ಟಿಗೆಯ ತಡೆಗೆ 'ಮುರಿಕುಂಟೆ' ಎಂದೂ ಅನ್ನುತ್ತಾರೆ. ಮುರಿ ಬೆತ್ತದ ಮಧ್ಯೆಯೇ ಬೆಳಕಿನ ಲಾಟಿನ್ ಕಟ್ಟಿರುತ್ತಾರೆ.

"ನಿದ್ರೆ ಬಂದರೆ ಹೇಳು" ಎಂದು ನಿಂಗಪ್ಪ ಪಕ್ಕಕ್ಕೆ ಸರಿದು ಕುಳಿತ.

ರಸ್ತೆ ಉತ್ತಮವಾಗಿದ್ದಿರಲಿಲ್ಲ. ಹಳ್ಳಿಯ ಕಡೆ ರಸ್ತೆ ಅಂದ ಮೇಲೆ ಕೇಳಬೇಕೆ? ಇಳಕಲು ಕೂಡ ದೊಡ್ಡದಿದ್ದರೆ ಯಶವಂತನ 'ಮುರಿ' ಶಕ್ತಿ ಸಾಲುವುದಿಲ್ಲ. ಆದ್ದರಿಂದಲೆ ನಿಂಗಪ್ಪ ಪಕ್ಕದಲ್ಲೆ ಕುಳಿತು ಕೌಳದ ಚಂಚಿ ತೆಗೆದು ಕವಳ ಹಾಕಲು ತೊಡಗಿದ. ಬೆಳದಿಂಗಳು, ಚೆನ್ನಾಗಿ ಎಲೆಸೆರೆ ತೆಗೆಯಬಹುದು. ವಿಶ್ರಾಂತನಾಗಿ ಕೌಳ ಸವಿಯುವ ವಿಲಾಸವನ್ನು ಅನುಭೋಗಿಸಬಹುದು.

ಅಷ್ಟು ಹೊತ್ತಿಗೆ ಚಂದಾವರ ಬಂತು.

ಚಂದಾವರ ಎಂದರೆ ಗಾಡಿಕಾರರಿಗೆ ಒಂದು ಜಂಕ್ಷನ್.

ಸಂತೇಗೋಳಿ ಮತ್ತು ಕುಮಟೆಯ ಮಧ್ಯೆ ಇರುವ ಸ್ಥಳ. ಅಲ್ಲಿಗೆ ಕುಮಟೆಯಿಂದ, ಕುಚ್ಚಿನಾಡಿನಿಂದ ಸಂತೇಗೋಳಿಯಿಂದ ಮತ್ತು ಕಡತೋಕೆಯಿಂದಲೂ ರಸ್ತೆಗಳು ಬಂದು ಸೇರುತ್ತವೆ. ಅಲ್ಲಿ ಗಾಡಿಕಾರರ ನಿರೀಕ್ಷಣೆಗಾಗೇ 'ಕೈಲಾಸ ಭವನ' ಮತ್ತು 'ಜಟ್ಟಿಗ ಪ್ರಸನ್ನ' ಎಂಬೆರಡು ಚಹದ ಅಂಗಡಿಗಳು ತೆರೆದಿರುತ್ತಿದ್ದವು.

ಏಳೆಂಟು ಗಾಡಿಗಳು ಅಲ್ಲಿ ಕೂಡುತ್ತಿದ್ದವು. ಆಗಲೇ ಸುಮಾರು ಎರಡು ಅಥವಾ ಮೂರು ಗಂಟೆ

ರಾತ್ರಿಯಾಗುತ್ತಿತ್ತು. ಗಾಡಿಕಾರರು ತಮ್ಮ ಗಾಡಿಯನ್ನು ನಿಲ್ಲಿಸಿ ಎತ್ತಿಗೆ ಒಂದೆರಡು ಕಟ್ಟು ಹುಲ್ಲು ಹಾಕುತ್ತಿದ್ದರು. ಹಾಗೇ ತಾವು ಕೈಲಾಸ ಭವನಕ್ಕೋ ಜಟ್ಟಿಗ ಪ್ರಸನ್ನಕ್ಕೊ ಹೋಗುತ್ತಿದ್ದರು. ಬಿಸಿ ಬಿಸಿ ದೋಸೆ, ಮಿಸಳಬಾಜಿ, ಶಿರಾ ಇತ್ಯಾದಿಗಳನ್ನು ಸೇವಿಸುತ್ತ ಹೊಗೆ ಹಾರುತ್ತಿರುವ ಚಹವನ್ನು ಕುಡಿಯುತ್ತಿದ್ದರು. ಅವರ ಮಾತುಕತೆಯಲ್ಲಿ ಮೂರು ಲೋಕಗಳ ಸುದ್ದಿ ಸಂಚಿಕೆಯೇ ಇರುತ್ತಿತ್ತು. ಸುದ್ದಿಯ ಸುತ್ತು ಒಂದು ವಿಧದ್ದಾಗಿರುತ್ತಿರಲಿಲ್ಲ. ಆದರೂ ಅದರ ಮುಖ್ಯ ಸುತ್ತು ಗಾಡಿ, ಎತ್ತು, ಸಾರಿಗೆ, ಗಾಡಿಕಾರರ ಬಗೆಗೇ ಇರುವುದು ಹೆಚ್ಚು.

ಯಶವಂತ ಗಾಡಿಯಲ್ಲೇ ಕುಳಿತಿದ್ದ. ಅವನ ಮಾವನೂ ಹೆಚ್ಚು ಒತ್ತಾಯಿಸಿರಲಿಲ್ಲ. ಅವನಿಗೇ ತುಸು ಸಂಕೋಚ. ಆದರೂ ಅವರ ಸಂಭಾಷಣೆ ಅವನ ಕಿವಿಯ ಮೇಲೆ ಬೀಳುತ್ತಿತ್ತು.

'ನಿಂಗೊತ್ತ, ನಾಣಿ ಶೆಟ್ಟಿ ಎತ್ತು ಏರು ನೋಡಿದ ಕೂಡ್ಲೆ ಕಳಿ ಹಾಕ್ಕಂಡಬಿಡ್ತದೆ."

ಕಳಿ ಹಾಕಿಕೊಳ್ಳುವುದೆಂದರೆ ನೊಗದಿಂದ ಕೊರಳನ್ನು ತಪ್ಪಿಸಿಕೊಳ್ಳುವುದು. ಕೆಲವು ಎತ್ತುಗಳು ದೊಡ್ಡದಾದ ಏರನ್ನು ನೋಡಿದೊಡನೆ ಗಾಡಿ ಎಳೆಯಲಾರೆವೆಂದು ಎಣಿಸಿ ಹಾಗೆ ಕಳ್ಳಬೀಳುತ್ತವೆ. ಇದಕ್ಕೆ ಕಳಿ ಹಾಕಿಕೊಳ್ಳೋದು ಎನ್ನುತ್ತಾರೆ.

"ನಾ ಅದನ್ನ ಮೊದಲೇ ಹೇಳಿದ್ದೆ. ಅದರ ಮೋರೆ ನೋಡಿದ ಕೂಡ್ಲೆ ನನಗೆ ಗೊತ್ತಾಗಿತ್ತು. ಕುಂಟೆಲ್ಲು." ಎತ್ತಿನ ಎರಡೂ ಹೊಟ್ಟೆ ಅಳ್ಳೇ ಕಣ್ಣಿನ ಕೆಳಗೆ ಸ್ವಾಭಾವಿಕವಾಗಿ ಎರಡೂ ಕಡೆ ಎಲುಬು ನೆಟ್ಟಗೆ ಇರುತ್ತದೆ. ಆದರೆ ಕೆಲವು ಎತ್ತಿನದು ಡೊಂಕಾಗಿ ಇರುತ್ತದೆ. ಅದೇ ಕುಂಟೆಲ್ಲು. ಅಂಥಾದ್ದು ಒಳ್ಳೆಯದಲ್ಲ ಎಂದು ಹೇಳುತ್ತಾರೆ. "ಬೇಡ ಅಂದರೂ ಮುಕಳಿ ಸೊಕ್ಕಿ ತಗೊಂಡಿದ್ದಾನೆ" ಎಂದು ಶಂಕರನಾಯ್ಕ ಹೇಳಿದ.

"ಆದರೆ ಪುರುಸನ ಎತ್ತು ಮಾತ್ರ ಅವ್ವಲ್ ಅದೆ ನೋಡು" ಎಂದು ದಾಮು ಸೇರೆಗಾರನ ಎತ್ತುಗಳನ್ನು ತಾರೀಫು ಮಾಡಿದ.

"ನಾ ನೋಡಿದ ಕೂಡ್ಲೆ ಹೇಳಿದ್ದೆ. ಅದರ ಮೇಲಿರೂ ಬಲ ಸುಳಿ ನೋಡಿದಾಗಲೇ ಗೊತ್ತಾಯ್ತು. ಅದು ಸಬ್ಬಿ ಎತ್ತು ಅಂತ" ಗೋವಿಂದ ಆಚಾರಿ ಅಂದ. ಆದರೆ ಹಿಂದೊಂದು ಎತ್ತು ನೋಡಿದ್ದ. ಅದರ ಮೊಕದ ಮೇಲೆ ಬಾಸಿಂಗ ಸುಳಿ ಇತ್ತು. ಅದರ ಹಿಂದಿನ ಯಜಮಾನ ತಕಂಡ್ ಒಂದೇ ವರ್ಷದಲ್ಲಿ ಹೆಂಡತಿ ಸತ್ತೋಗಿತ್ತು ಎಂದು ಮುಂದುವರಿಸಿದ. ಬಾಸಿಂಗದ ಹಾಗೆ ಹಣೆಯ ಮೇಲೆ ಸುಳಿ ಇದ್ದ ಎತ್ತನ್ನು ಗಾಡಿಗೆ ಕಟ್ಟಿದರೆ ಗಾಡಿ ಹೊಡೆವವನ ಬಾಸಿಂಗ ಉದುರುತ್ತದೆ ಎಂಬ ನಂಬಿಕೆ.

ಯಶವಂತನಿಗೂ ಕುತೂಹಲ ಕೆರಳಿತು. ಸಾವಕಾಶ ಗಾಡಿ ಇಳಿದು ನೋಡಿದ. ಮತ್ತೊಂದು ಕಟ್ಟು ಹುಲ್ಲನ್ನು ಬಿಡಿಸಿ ತನ್ನ ಎತ್ತಿಗೆ ಹಾಕಿದ. ಎತ್ತು ಮಲಗಿ ಮೆಲಕು ಹಾಕುತ್ತಿದ್ದುದು ಈಗ ಮಲಗಿದಲ್ಲಿಂದಲೇ ನಾಲಿಗೆ ಚಾಚಿ ಹುಲ್ಲನ್ನು ಎಳೆದುಕೊಂಡು ತಿನ್ನತೊಡಗಿತು.

ಮುಂದಿನ ಸಾಲಿನಲ್ಲೇ ಪುರುಸನ ಗಾಡಿ ಬಿಡಲಾಗಿತ್ತು. ಯಶವಂತ ಕೇಳಿದ ಹಾಗೆ ಪುರುಸನ ಎತ್ತು ದಷ್ಟಪುಷ್ಟವಾಗಿ ಆಕರ್ಷಕವಾಗಿತ್ತು. ಅದು ಸುಮಾರು ಐದು ಐದೂವರೆ ಅಡಿಯಷ್ಟು ಎತ್ತರದ ಎತ್ತು. ಒಂದು ಬಿಳಿ ಮತ್ತೊಂದು ಕಪ್ಪು. ಉದ್ದವಾದ ಬಾಲ. ಬಾಲದ ತುದಿಗೆ ಗೊಂಡೆ, ಉದ್ದ ಮೋರೆ, ಕಣ್ಣೆವೆಯ ಸುತ್ತ ದಟ್ಟವಾದ ರೋಮಗಳು. ಅಗಲವಾದ ಹಣೆ. ಅದರ ಮೇಲೆ ಎದ್ದು ಕಾಣುವ ಸುರಳಿ. ಅದರ ಕೋಡು ಉದ್ದವಾಗಿದ್ದವು. ಎರಡರ ಕೋಡುಗಳೂ ಒಂದೇ ಥರ. ಸಪೂರಾಗಿ ನೀಳವಾಗಿ ಹೊರಬದಿಗೆ ಬಾಗಿದ್ದವು. ಕೋಡುಗಳನ್ನು ಪುರುಸು ನಂಪುಗೊಳಿಸಿದ್ದ, ಅದು ಮುಂದಿನ ಹಣೆ ಹೊಳೆದಂತೆ ಹೊಳೆಯುತ್ತಿದ್ದವು. ಕೋಡಿನ ತುದಿಗೆ ತಾಮ್ರದ ಮುಚ್ಚಳ ಕೂಡ್ರಿಸಲಾಗಿತ್ತು. ಅದು ದೇವಸ್ಥಾನದ ಕಳಸದಂತೇ ಚಿಕ್ಕದಾಗಿ ರಚಿಸಿದ್ದಿತ್ತು. ಚಿನ್ನದ ಕಿರೀಟದ ಹಾಗೆ ಹೊಳೆಯುತ್ತಿತ್ತು. ಅದರ ತುದಿಗೆ ಒಂದು ಚಿಕ್ಕ ಗೊಂಡೆ ಕಟ್ಟಲಾಗಿತ್ತು. ಗೊಂಡೆ ತುದಿ ಕೆಂಪು, ಮಧ್ಯ ಕಪ್ಪು, ಬುಡ ಹಳದಿ ಚವರಿ ಕೂಡ್ರಿಸಲಾಗಿತ್ತು. ಗಾಡಿ ಕೂಡ ಎತ್ತರವಾಗಿತ್ತು.

"ಹದಿನೈದು ಚೀಲ ಅಕ್ಕಿ ಯಾರ್ ಕೇಳದೆ ಎಳೆತದೆ ನೋಡು" ಎಂದು ಪುರುಸು ದೊಡ್ಡದಾಗಿ ಹೇಳಿದ. "ನಂದ್ ಹಿಂದಿನ ಎತ್ತು ಚಲೋ ಇತ್ತ. ಆದರೆ ಒಂದ ಎತ್ಗೆ ಸರ್ಪಸುಳಿ ಇತ್ತು. ಒಂದೊಂದು ಸಲ ಭಾಳ ತ್ರಾಸ್ಕೊಡ್ತಿತ್ತು. ಅದ್ಕಾಗೇ ಕೊಟ್ಟಬಿಟ್ಟೆ." ಇದು ಬೆನ್ನಿನ ಮೇಲೆ ಇರುವ ಸುಳಿ. ಸರ್ಪದ ಹೆಡೆಯಂತೆ ಇರುತ್ತದೆ. ಸುಳಿ ಇರುವ ಎತ್ತನ್ನು ಬಾರಕೋಲಿನಿಂದ ಹೊಡೆಯಬಾರದು. ಅದು ಸ್ವಾಭಾವಿಕವಾಗೇ ಚುರುಕು. ಆದರೆ ಒಮ್ಮೊಮ್ಮೆ ಹಟ ಮಾಡುತ್ತದೆ. ಸಿಟ್ಟಿಗೇಳುತ್ತದೆ ಎಂಬ ನಂಬಿಕೆ.

ಕೊನೆಗೆ ಮಾತುಕತೆ ನಿಂಗಪ್ಪನ ಎತ್ತಿನ ಕಡೆ ತಿರುಗಿತು. ಈಗ ಯಶವಂತನ ಕಿವಿ ನಿಮಿರಿತು. "ಏನೇ ಹೇಳು ಎತ್ತು ಅಂದರೆ ಎತ್ತು ನಿಂಗಪ್ಪಣ್ಣನದು" ಎಂದ ಆಚಾರಿ.

"ಬಗೇಲ ಸಣ್ಣ ಆಯ್ತು" ಎಂದು ಪುರುಸು.

"ಅದೊಂದು ಬಿಟ್ಟರೆ ಊನ ತೆಗೆಯಲೇ ಸಾಧ್ಯವಿಲ್ಲ" ಶಂಕರನಾಯ್ಕ ಹೇಳಿದ.

"ಅದ್ ನನ್ ನಸೀಬನೇ ಮಾರಾಯ. ಎಷ್ಟು ಸಭ್ಯ ಗೊತ್ತ! ನಮ್ಮನಿ ಮಕ್ಕಳು ಅದರ ಹೊಟ್ಟೆ ಅಡಿಗೆ ಹೊಕ್ಕಿ ಹೊರಬಂದರೂ ಏನೂ ಮಾಡೂದಿಲ್ಲ" ಎಂದು ನಿಂಗಪ್ಪ ಹೇಳಿ ಹೆಮ್ಮೆ ತೋರಿದಾಗ ಯಶವಂತನ ಎದೆ ಉಬ್ಬಿ ಹೋಯಿತು. ಆದರೂ 'ನಮ್ಮನೆ ಮಕ್ಕಳು ಅನ್ನುವುದಕ್ಕಿಂತ ನಮ್ಮನೆ ಯಶವಂತ' ಎಂದು ಹೇಳಬಹುದಿತ್ತು ಎಂದು ಅವನಿಗೆ ಅನಿಸಿತು.

"ಆದರೆ ನೋಡು ಆ ಎಡದ ಎತ್ತು ಬಗೇಲ ಹರಾಮಿ. ಅದರ ಮೋರೆ ನೋಡಿದರೇ ಗೊತ್ತಾಗ್ತದೆ" ಎಂದು ಪುರುಸು ಹೇಳಿದಾಗ ಯಶವಂತನಿಗೆ ಸಾಂಬನಿಗೆ ಸೊಂಟದ ಮೇಲೆ ಒದೆದ ಪ್ರಸಂಗ ನೆನಪಾಗಿ ನಗು ಬಂತು.

ಅಂತೂ ಅಲ್ಲಿಂದ ಗುಂಪು ಎದ್ದಿತು. ಎಲ್ಲರೂ ಬಂದು ತಮ್ಮ ತಮ್ಮ ಗಾಡಿಯನ್ನು ಕಟ್ಟಿದರು. ನಿಂಗಪ್ಪ ಒಂದು ಕಾಗದದಲ್ಲಿ ಅವಲಕ್ಕಿ ಕರೆ ಸೇಂಗಾ ಕೂಡಿಸಿದ 'ಮಿಸಳ'ನ್ನು ತಂದು ಯಶವಂತನಿಗೆ ಕೊಟ್ಟ.

ಯಶವಂತ ಅವಲಕ್ಕಿ ಕರೆ ಮೆಲ್ಲುತ್ತ ಗಾಡಿಯಲ್ಲಿ ಕುಳಿತ. ಅವನಿಗೆ ಯಾವಾಗ ನಿದ್ದೆ ಹತ್ತಿತೊ ನೆನಪಿಲ್ಲ. "ಏ ಏಳೊ ನೋಡು ಕುಂಬಕರ್ಣ ಬಿದ್ದಾಂಗ ಬಿದ್ದವನೆ. ಹೀಂಗೆ ಮಾಡಿದರೆ ಗಾಡಿ ಹೊಡದಾಂಗೇ" ಎಂದು ನಿಂಗಪ್ಪ ಯಶವಂತನನ್ನು ಎಬ್ಬಿಸಿದ.

ಯಶವಂತ ಎದ್ದ. ಬೆಳಗಾಗಿತ್ತು.

ಹಮಾಲಿಗಳು ಬಂದು ಅಡಿಕೆ ಚೀಲ ತೋಡಿದರು. ಅವರವರ ಗುರುತಿಗೆ ಅದನ್ನು ಒಪ್ಪಿಸಲಾಯಿತು. ಗಾಡಿಯನ್ನು ಅದೇ ವಖಾರಿಯ ಬೈಲಿನಲ್ಲೇ ನಿಲ್ಲಿಸಲಾಯಿತು. ನಿಂಗಪ್ಪ ಎತ್ತುಗಳ ದೇಖರೇಖೆಯನ್ನು ಯಶವಂತನಿಗೆ ಒಪ್ಪಿಸಿಬಿಟ್ಟಿದ್ದ. ಯಶವಂತನಿಗೂ ಹೆಮ್ಮೆ.

ಅವನಿಗೆ ಅನೇಕ ಹೊಸ ಅನುಭವಗಳಾದವು. ಅವನು ಮಾವನ ಸಂಗಡ ಖಾನಾವಳಿಯಲ್ಲಿ ಊಟ ಮಾಡಿದ. ಮಾವನ ಜೊತೆ ಚಹ ಕುಡಿದದ್ದು ಅಂಗಡಿಯಲ್ಲಿ. ಅಂಗಡಿಯ 'ಇಡ್ಲಿ ಬಾಜಿ' ಅವನಿಗೆ ಸೇರದಿದ್ದರೂ ಮಸಾಲೆ ದೋಸೆ ಮಾತ್ರ ತುಂಬ ಇಷ್ಟವಾಯಿತು. ಬೇರೆ ಬೇರೆ ಅಂಗಡಿಗಳನ್ನು ಅವನು ನೋಡಿದ. ಅವನು ಅಷ್ಟೊಂದು ವಾಹನಗಳನ್ನು ಅಷ್ಟೊಂದು ಜನರನ್ನು ನೋಡಿರಲಿಲ್ಲ. ಅವನ ಪಾಲಿಗೆ ಅದೊಂದು ಹೊಸ ಲೋಕವೆ!

ಮನೆಗೆ ಬಂದಾಗ ಯಶವಂತ ಹೊಸ ಮನುಷ್ಯನಾಗಿದ್ದ. ಇದ್ದಕ್ಕಿದ್ದಂತೆ ದೊಡ್ಡಾಗಿಬಿಟ್ಟಂತಾಗಿ ಒಂದು ಬಗೆಯ ಕೃತ್ರಿಮ ಗಾಂಭೀರ್ಯ ಅವನನ್ನಾವರಿಸಿಬಿಟ್ಟಿತು.

ಆದರೆ ಅದು ಒಂದೆರಡು ದಿನ ಮಾತ್ರ. ಪಾರ್ವತಿಯೊಡನೆ ಅವನ ಪ್ರವಾಸ ಕಥನವನ್ನು ಹೇಳಿದ.

ಅಯ್ಯೋ, ಎಷ್ಟು ಚೆಂದ ಎಂದು ಪಾರ್ವತಿ ಸೋಜಿಗಪಟ್ಟಳು. ಸಾಂಬ ಅವನ ಹತ್ತಿರವೂ ಬರುತ್ತಿರಲಿಲ್ಲ.

ಯಶವಂತ ಈಗ ಉತ್ತಮ ಗಾಡಿಕಾರನಾಗುವ ಎಲ್ಲ ಲಕ್ಷಣವನ್ನೂ ಹೊಂದಿದ್ದಾನೆ. ದೊಡ್ಡ ಇಳುಕಲಲ್ಲೋ ಗಾಡಿ ಮಾಸೂಲಿನಿಂದ ತುಂಬಿದ್ದಾಗಲೋ ಮಾತ್ರ ನಿಂಗಪ್ಪ ತಾನೇ ಗಾಡಿ ನಡೆಸುತ್ತಿದ್ದ. ಉಳಿದ ಸಮಯದಲ್ಲಿ ಯಶವಂತನೇ ಡ್ರ್ಯಾವರ್.

ಈಗ ಆತ ಗಾಡಿ ಹೊಡೆಯುವ ಅನೇಕ ತಂತ್ರವನ್ನು ಕಲಿತಿದ್ದಾನೆ.

ಎತ್ತುಗಳನ್ನು ಕಳಿಗುಟ್ಟದ (ಇದೊಂದು ನೊಗದ ತುದಿಯಲ್ಲಿ ಒಂದು ಒಂದೂವರೆ ಅಡಿಬಿಟ್ಟ

ರಂಧ್ರದ ಮುಖಾಂತರ ಇಳಿಬಿಡುವ ಬೆಣೆ) ಹೊರಗಡಿಯೇ ಕಟ್ಟಬೇಕು. ಅಂದರೆ ಎತ್ತುಗಳ ಒಳಗಡೆ ಒತ್ತಿಕೊಂಡರೂ ಒಳಸೇರುವುದಿಲ್ಲ ಮತ್ತು ಎಲ್ಲ ಹೊತ್ತಿನಲ್ಲೂ ಎತ್ತುಗಳು ಸಮಾನ ಅಂತರದಲ್ಲಿಯೇ ಇರುತ್ತವೆ. ಯಾವಾಗಲೂ ಎಡಕ್ಕೆ ಬಲಕ್ಕೆ ಅವು ಅವೇ ಎತ್ತುಗಳನ್ನೇ ಕಟ್ಟ ಬೇಕು. ಅದನ್ನು ಅದಲು ಬದಲು ಮಾಡಿದರೆ ಅವು ಗಾಡಿಯನ್ನು ಸರಿಯಾಗಿ ಎಳೆಯುವುದಿಲ್ಲ. ಉದಾಹರಣೆಗಾಗಿ ಕುಶನನ್ನು ಯಾವಾಗಲೂ ಬಲಕ್ಕೆ ಕಟ್ಟಬೇಕು. ಲವನನ್ನು ಎಡಕ್ಕೆ. ಇಳಕಲಿನಲ್ಲಿ ಗಾಡಿಯ ಭಾರ ಹಿಂಗಡೆ ಹೆಚ್ಚಾಗಿರಬೇಕು. ಹಾಗೆಯೇ ಏರು ಹತ್ತುವಾಗ ಗಾಡಿಯ ಮುಂಭಾಗ (ಮೂಕೆ) ಒಜ್ಜೆಯಾಗಿರಬೇಕು. ಅಂದರೆ ಗಾಡಿ ಎಳೆಯಲು ಎತ್ತುಗಳಿಗೆ ಬಲ ಬರುತ್ತದೆ. ಮುಂದೆ ವಾಹನ ಬಂದಾಗ ಗಾಡಿಯನ್ನು ಎಡಕ್ಕೆ ತೆಗೆದುಕೊಳ್ಳಬೇಕು. ದೊಡ್ಡ ಇಳಕಲು ಇಳಿಸುವಾಗ ಹಿಂದುಗಡೆ 'ಮುರಿತಿರುಪ' ಬೇಕು. ಗಾಡಿಕೀಲಿಗೆ ಆಗಾಗ ಎಣ್ಣೆ ಬಿಡುತ್ತಿರಬೇಕು. ಅಂದರೆ ಗಾಲಿ ಸುಲಭವಾಗಿ ಉರುಳುತ್ತದೆ ಇತ್ಯಾದಿ.

ಈ ಮಧ್ಯೆ ಸಮೀಪದ ಊರಿನಲ್ಲಿ ಜಾತ್ರೆ ಬಂತು. ಸುತ್ತಮುತ್ತಲಿನ ಊರಿಗೆ ಅದೇ ಜಾತ್ರೆ. ಆದಕಾರಣ ಜನ ಅಲ್ಲಿ ಬಹಳ ಸೇರುತ್ತಾರೆ.

ಸಾಲು ಸಾಲು ಅಂಗಡಿಗಳು. ಬಳೆ, ರಿಬ್ಬನ್, ಬಾಲು, ಮೋಟಾರು, ಕುಣಿಯುವ ಹನುಮಂತ ಒಂದೇ ಎರಡೆ; ರಥ ಬೀದಿಯಲ್ಲಿ ಎರಡು ಸಾಲು ಅಂಗಡಿಗಳೇ. ಒಂದು ಸಾಲಿನಲ್ಲಿ ಬಳೆಗಾರ ಅಂಗಡಿಗಳು. ಇನ್ನೊಂದು ಸಾಲಿನಲ್ಲಿ ಮಿಠಾಯಿ ಅಂಗಡಿ, ಚಹದ ಅಂಗಡಿ, ಸೋಡ ಅಂಗಡಿ, ಲಾಟರಿ ಅಂಗಡಿ. ಇನ್ನು ಜಾತ್ರೆಯ ದಿನವಂತೂ ಗೌಜೋಗೌಜು: ಸೋಡಾ ಬಾಟ್ಲಿ ಚಕ್‌ಚೀಂವ್ ಎಂದು ಒಡೆಯುವುದೇ ಒಂದು ಮಜ.

ಜಾತ್ರೆಯ ದಿನ ಸಾಂಬ ಪಾರ್ವತಿ ಹೋಗಿದ್ದರು. ಅತ್ತೆ ಮಂಕಾಳಿ ಕೂಡ ಹೋಗಿದ್ದರು. ಯಶವಂತ ಒಬ್ಬನೇ ಮನೆಯಲ್ಲುಳಿದ. ಎಲ್ಲರೂ ಹೋದರೆ ಮನೆಯಲ್ಲಿ ಯಾರಾದರೂ ಉಳಿಯಬೇಕಲ್ಲ? ಇದರಿಂದ ಯಶವಂತನಿಗೆ ಬೇಸರವೇನೂ ಆಗಲಿಲ್ಲ. ಯಾಕೆಂದರೆ ಮಾರನೇ ದಿನದಿಂದ ಎರಡು ಮೂರು ದಿನ ಆತ ಜಾತ್ರೆಯ ಬಯಲಿನಲ್ಲಿ ಹಗಲು ರಾತ್ರಿ ಇರುವವನಿದ್ದ. ನಿಂಗಪ್ಪ ಜಾತ್ರೆಯಲ್ಲಿ ಮಡಕೆ ಅಂಗಡಿ ಇಟ್ಟಿದ್ದ. ಮಾವನಿಗೆ ಸಹಾಯ ಮಾಡಲು ಯಶವಂತನನ್ನು ಕರೆದುಕೊಂಡು ಹೋಗುತ್ತೇನೆಂದು ಹೇಳಿದ್ದ. ಮಾರನೆ ದಿನ ಮಾವನ ಸಂಗಡ ಯಶವಂತನೂ ಹೋದ. ಸಾಂಬನನ್ನು ಕರೆದರೆ ಅತ್ತೆ "ಅಯ್ಯಾ ಆ ಬೈಲಲ್ಲಿ ರಾತ್ರಿ ಇರುವುದು ಬೇಡ. ಆ ಚಳಿ ಹನಿಯಲ್ಲಿ ಹುಷಾರಿಲ್ಲಾಗೂದು ಅಂವ್ಗೆ. ಯಾರಿಗೆ ಸೊಕ್ಕು ಇದೆಯೋ ಅವರೇ ಹೋಗಲಿ" ಎಂದು ಮೂಗುಮುರಿದಳು.

ಮಡಕೆ ಗಾಡಿಯನ್ನು ನಿಂಗಪ್ಪನೇ ಹೊಡೆಯುತ್ತಿದ್ದ. ಯಾಕೆಂದರೆ ಗಾಡಿ ಹೆಚ್ಚು ಕುಲುಕಿದರೆ ಮಡಕೆ ಒಡೆದು ಹೋಗುತ್ತದೆ. ಯಶವಂತ ನಡೆದೇ ಹಿಂಬಾಲಿಸಬೇಕಿತ್ತು. ಆದರೆ ಯಶವಂತನಿಗೆ ಆಯಾಸವೇನೂ ಅನ್ನಿಸಲಿಲ್ಲ. ಆತನ ಉತ್ಸಾಹ ಅಂತಹುದು.

ಜಾತ್ರೆಯಲ್ಲಿ ಅಂಗಡಿ ಸಾಲುಗಳಿರುವ ಮೇಲಿನ ಬಯಲಿನಲ್ಲಿ ಮಡಕೆ ಅಂಗಡಿ ಹೂಡಿದ್ದರು. ನಿಂಗಪ್ಪನ ಅಂಗಡಿಯಂತೆಯೇ ಬೇರೆ ಅಂಗಡಿಗಳೂ ಬಂದಿದ್ದವು.

ಯಶವಂತ ಬಹಳ ಚುರುಕಿನಿಂದ ವ್ಯಾಪಾರ ಮಾಡುತ್ತಿದ್ದ. ಆತ ಚಡ್ಡಿಯ ಬದಲು ಪಂಚೆಯನ್ನು ಉಟ್ಟಿದ್ದ. ದೊಡ್ಡವರು ಪಂಚೆ ಉಡುವ ಹಾಗೆ ಕಟಾರ ಕಚ್ಚೆ ಹಾಕಿ ಉಟ್ಟಿದ್ದ. ಪಂಚೆ ಅಗಲ ದೊಡ್ಡದಾದರೂ ಅದನ್ನು ಮಡಸಿ ಸಿಕ್ಕಿಸಿದ್ದ. ಮೇಲೆ ಅಂಗಿ ತೊಟ್ಟಿದ್ದ. ಹಾಗಾಗಿ ಆತ ಗಿಡ್ಡ ಮನುಷ್ಯನಾಗಿ ಕಾಣುತ್ತಿದ್ದ.

ಚುರುಕಿನಿಂದ ಓಡಾಡುವ ಯಶವಂತನನ್ನು ನೋಡಿ ನಿಂಗಪ್ಪನಿಗೆ ಸಂತೋಷವೆ. ಗಿರಾಕಿಗಳು ಬಂದರೆ ಅವರ ಬೆನ್ನು ಬಿಡುತ್ತಿರಲಿಲ್ಲ. ಬೊಟ್ಟಿನಿಂದ ಮಡಕೆಯನ್ನು ಸಿಡಿದು 'ಟಣ್ ಟಣ್' ಎಂದು ಸದ್ದು ಮಾಡಿ ತೋರಿಸುತ್ತಿದ್ದ. ಇಂಥ ಮಡಕೆ ಅರಸಿದರೆ ಸಿಕ್ಕುವುದಿಲ್ಲವೆಂದು ಹೇಳುತ್ತಿದ್ದ.

ಅಲ್ಲೇ ಹಾಕಿದ ಚಿಕ್ಕದಾದ ಟೆಂಟಿನಲ್ಲಿ ಅವರ ಊಟ, ಆಸರು. ಅದು ಗದ್ದೆ ಭೂಮಿಯಾಗಿತ್ತು. ಅದನ್ನೇ ತುಸು ಸಮತಟ್ಟಾಗಿ ಮಾಡಿಕೊಂಡಿದ್ದರು. ಅದರ ಮೇಲೆ ಗೋಣಿ ತಟ್ಟನ್ನು ಹಾಕಿದ್ದರು. ಒಂದು ಅಲ್ಯೂಮಿನಿಯಂ ಕೊಡಪಾನ. ಊಟಕ್ಕೆ ಅವರದೇ ಬಟ್ಟಲು ಮತ್ತು ತಟ್ಟೆ. ಅನ್ನ ಮಾಡಲು ಮೇಲೋಗರ ಮಾಡಲು ಎರಡು ತಪ್ಪಲೆ. ಚಾ ಕುಡಿಯಲು ಗ್ಲಾಸು, ಇವಿಷ್ಟು ಬಿಡಾರದ ಸಾಮಾನು. ಅಲ್ಲಿಯೇ ಮೂರು ಕಲ್ಲುಗಳನ್ನು ತಂದು ಒಲೆ ಹೂಡಿಕೊಂಡಿದ್ದರು. ನೀರನ್ನು ನಿಂಗಪ್ಪ ತಂದು ಕೊಡುತ್ತಿದ್ದ. ಕಟ್ಟಿಗೆ ದರಕು ತಂದು ಬೆಂಕಿ ಹಿಡಿಸುವುದು, ಅನ್ನ ಬೇಯಿಸುವುದು ಯಶವಂತನ ಕೆಲಸ. ಯಶವಂತ ಈ ಕೆಲಸದಲ್ಲಿ ಮತ್ತು ಮಡಕೆ ವ್ಯಾಪಾರದಲ್ಲಿ ಎಷ್ಟು ಮಗ್ನನಾಗಿದ್ದನೆಂದರೆ ಜಾತ್ರೆಯ ಪೇಟೆ ತಿರುಗುವುದನ್ನು ಸಹ ಮರೆತಿದ್ದ.

"ಯಶು ಇಂದು ರಾತ್ರಿ ಸ್ಪೆಶಲ್ ಅಡಗಿ ಮಾಡ್ವ ಹಂ" ಎಂದ ಮಾವ.

ರಾತ್ರಿ ಮಾವ ಒಂದು ಕೋಳಿಮರಿಯನ್ನು ತಂದಿದ್ದ. ಅದರ ಪುಚ್ಚ-ಗರಿ ಯಶವಂತ ತೆಗೆದ. ಆಮೇಲೆ ಅದರ ಪುಚ್ಚ ತೀರಾ ಸ್ವಚ್ಛವಾಗಲು ಅದನ್ನು ಸೂಡಿಯಲ್ಲಿ ಗರಿದರು. ಬೆಂಕಿ ಉರಿಸಿದ ಮಡ್ಲ ಸೂಡಿಯನ್ನು ಯಶವಂತ ಎರಡೂ ಕೈಯಲ್ಲಿ ಹಿಡಿದುಕೊಂಡ. ನಿಂಗಪ್ಪ ಅದರ ಕಾಲಿಗೆ ಬಿಗಿಯಾದ ಬಳ್ಳಿ ಕಟ್ಟಿ, ಬಳ್ಳಿ ಸುಡದಂತೆ ಎತ್ತರಿಸಿ ಬೆಂಕಿಗೆ ಹಿಡಿದ. ಅದು ಗರಿಯೆಲ್ಲ ಸುಟ್ಟಿತು. ಚರ್ಮವೂ ಬೆಂದಿತು. ಚರ್ಮವನ್ನು ಎಳೆದು ತೆಗೆದ ನಿಂಗಪ್ಪ ನಂತರ ಅದನ್ನು ಕತ್ತಿಯಿಂದ ಕೊಚ್ಚಿದರು. ಅದನ್ನ ಬೇಯಲು ಇಟ್ಟು ಯಶವಂತನ ಉಸ್ತುವಾರಿಗೆ ಬಿಟ್ಟು ನಿಂಗಪ್ಪ ತಾನು ಮಸಾಲೆ ಬೀಸಿ ತರುವುದಾಗಿ ಪಕ್ಕದಲ್ಲಿರುವ ಗೌಡರ ಮನೆಗೆ ಹೋದ.

ಇಬ್ಬರೂ ಕೂಡಿ ಪಳದಿ ಮಾಡಿದರು. ಅದನ್ನು ಮುಚ್ಚಿಟ್ಟು ಅನ್ನ ಬೇಯಿಸಿದರು. ರಾತ್ರಿ ಭರ್ಜರಿ ಊಟ. ಇಬ್ಬರಿಗೂ ಸಂತೃಪ್ತಿ.

"ಮನೆಯಲ್ಲಿ ಎಲ್ಲಾ ಹೇಳಿ ಹಾಕಬೇಡ." ಎಂದು ನಿಂಗಪ್ಪ ಅಂದ. ಆದರೂ ಯಶವಂತ ಪಾರ್ವತಿಗೆ ಎಲ್ಲಾ ವರದಿ ಮಾಡಿದ್ದ. ಬಹಳ ದಿನಗಳ ನಂತರ ನಿಂಗಪ್ಪನ ಗಾಡಿ ಒಮ್ಮೆ ಕುಚ್ಚಿನಾಡಿಗೆ ಹುಲ್ಲು ತರಲು ಹೋಗಿತ್ತು. ಆಗ ಬೇಸಗೆ ಗದ್ದೆ ಕೊಯ್ಲು ಮುಗಿದಿತ್ತು. ಗದ್ದೆಗಳೆಲ್ಲ ಖಾಲಿಯಾಗಿದ್ದವು. ಗದ್ದೆಯ ಹಾಳಿಗಳನ್ನು ಒಡೆದು ಗಾಡಿ ಹೋಗಲು ಹಾದಿ ರಚಿಸಿದ್ದರು.

ನಿಂಗಪ್ಪನ ಸಂಗಡ ಯಶವಂತನೂ ಹೋಗಿದ್ದ. ಅವರು ಮಧ್ಯಾಹ್ನ ತಾವೇ ಊಟ ತಯಾರಿಸಿ ಕೊಂಡಿದ್ದರು. ಹೊಳೆಯ ದಂಡೆ ರವೆರವೆಯಾದ ಉಸುಕಿನ ದಡ. ಬದಿಯಲ್ಲಿ ಬಗ್ಗಿ ಚಾಚಿದ ಗಿಡಗಳ ನೆರಳು. ಮನೆಯಿಂದ ಹೋಗುವಾಗಲೇ ನಿಂಗಪ್ಪ ಮಸಾಲೆ ಬೀಸಿ ಗಟ್ಟಿಯಾಗಿರು ವಾಗಲೇ ಮುದ್ದೆಕಟ್ಟಿ ಬಾಳೆಲೆ ಬಾಡಿಸಿ (ಬೆಂಕಿಯ ಶೆಖೆಗೆ ಹಿಡಿದರೆ ಬಾಡುತ್ತದೆ. ಮುದ್ದೆ ಮಾಡಿದರೂ ಒಡೆಯುವುದಿಲ್ಲ.) ಅದರಿಂದ ಕಟ್ಟಿತಂದಿದ್ದ. ಹಾಗೆ ಹೋಗುವಾಗೆಲ್ಲ ಇದೇ ಪದ್ಧತಿ.

ಒಕ್ಕಲಿಗರು ಪರಿಮಳದ ಸಣ್ಣಕ್ಕಿಯನ್ನು ಕೊಟ್ಟಿದ್ದರು. ಅದನ್ನು ಬೇಯಿಸಲಾಯಿತು. ಮನೆಯಿಂದ ತಂದ ಚಟ್ನಿ. ಹಳ್ಳದಲ್ಲೇ ಮಿಂದು ಬಟ್ಟೆ ಒಣಗಿಸಿಕೊಂಡರು.

ಯಶವಂತ ಅಂಥ ಊಟವನ್ನು ಮರೆತಾನೆ? ಮಧ್ಯಾಹ್ನ ಗಾಡಿಗೆ ಹುಲ್ಲನ್ನು ತುಂಬಿದರು. ನಾಲ್ಕು ನೂರು ಕಟ್ಟನ್ನು ಹಾಕಿದ್ದರು. ಚೆನ್ನಾಗಿ ಬಳ್ಳಿ ಬಿಗಿಯಲಾಯಿತು. ನಿಂಗಪ್ಪ ಗಾಡಿ ಹೊಡೆಯುತ್ತಿದ್ದ. ಯಶವಂತ ಗಾಡಿಯ ಮೇಲೆ ಕುಳಿತಿದ್ದ. ಹುಲ್ಲು ಹೊರೆ ಗಾಡಿ ತೊಟ್ಟಿಲಿಗಿಂತ ಎತ್ತರವಾಗಿತ್ತು. ಯಶವಂತ ಆನೆಯ ಮೇಲೆ ಕುಳಿತ ಉಮೇದಿನಲ್ಲಿದ್ದ.

ಆಗ ಗಾಡಿ ಹೋಗುತ ಹೋಗುತ ಇರುವಾಗ ಎತ್ತುಗಳಿಗೆ 'ಹೊನ್ನೆಲು' (ದೊಡ್ಡ ಆಕಾರದ ನೊಣ) ಮುತ್ತಿಕೊಂಡಿತು. ಅವು ತಮ್ಮ ಕೊರಳನ್ನು ಆ ಕಡೆ ಈ ಕಡೆ ಅಲಗಿಸಿ ಆ ನೊಣವನ್ನು ಹಾರಿಸಿಕೊಳ್ಳುತ್ತ ನಡೆಯುತ್ತಿದ್ದವು. ಆಗ ಗಾಡಿ ಆ ಕಡೆಗೂ ಈ ಕಡೆಗೂ ಹೋಗುತ್ತಿತ್ತು. ಹೀಗೆ ನಡೆವಾಗ ಒಂದು ಹಾಳಿಯಿಂದ ಮತ್ತೊಂದಕ್ಕೆ ಇಳಿವ ಸಂದರ್ಭದಲ್ಲಿ ಒಂದು ಚಕ್ರ ಹಾಳಿಯ ಎತ್ತರದ ಭಾಗವನ್ನು ಹತ್ತಿತ್ತು. ಎತ್ತುಗಳು ಮೀಟಿ ಎಳೆದವು. ಗಾಡಿ 'ಒಗ್ಗಾಲಿ'ಯಾಯಿತು. ಅಂದರೆ ಒಂದು ಚಕ್ರ ಹಾಳಿ ಹತ್ತಿ ಕುಸಿದಿದ್ದರಿಂದ ಹುಲ್ಲಿನ ಹೊರೆ ಜೋಲಿ ಹೋಯಿತು. ಅದರ ಒತ್ತಡಕ್ಕೆ ಅದರ ವಿರುದ್ಧ ಕಡೆಯ ಚಕ್ರ ಮೇಲೆ ಹಾರಿತು. ಇಡೀ ಗಾಡಿ ಮಗುಚಿ ಬಿತ್ತು! ಯಶವಂತ ಆ ರಭಸಕ್ಕೆ ಸಿಡಿದುಹೋಗಿ ಬೇರೆಯ ಗದ್ದೆಯಲ್ಲಿ ಬಿದ್ದ. ಬಿದ್ದ ರಭಸಕ್ಕೆ ತುಂಬ ನೋವಾಯಿತು. ಆದರೂ ಪ್ರಾಣಾಪಾಯ ಇರಲಿಲ್ಲ. ಇದ್ದದರಲ್ಲಿ ಆತ ಬುದ್ಧಿವಂತಿಕೆ ಮಾಡಿದ್ದೆಂದರೆ ಗಾಡಿಯ ಮೇಲ್ಬದಿಗೆ ಹುಲ್ಲಿನ ಹೊರೆಗೆ ಬಿಗಿದಿದ್ದ ಹಗ್ಗವನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದ. ಆ ಹಗ್ಗವೂ ಹರಿದುಹೋಗಿತ್ತು. ಹಾಗಾಗಿ ಯಶವಂತ ಎಸೆಯಲ್ಪಟ್ಟರೂ ಅದರ ರಭಸ ಕಡಿಮೆಯಾಗಿತ್ತು. ಆದರೂ ಸಾಕಷ್ಟು ನೋವು ಆಗಿತ್ತು.

ಎತ್ತುಗಳಿಗೆ ಅಷ್ಟೊಂದು ಅಪಾಯವಾಗಿರಲಿಲ್ಲ. ಅಂಥ ಅಪಾಯವನ್ನು ಗ್ರಹಿಸಿಯೇ ಅದರ

ಕೊರಳನ್ನು ಸಡಿಲಾದ 'ಪೊಟ್ಲೆ'ಯಿಂದ ಕಟ್ಟಿರುತ್ತಾರೆ.

ಪೊಟ್ಲೆ ಎಂದರೆ ಕತ್ತದ ಅಥವಾ ನಾರಿನಿಂದ ಉಬ್ಬಿದ ಕೊರಳಿಗೂ ನೊಗಕ್ಕೂ ಬಂಧಿಸಲೆಂದು ಅಗಲವಾಗಿ ಮೀನಿನ ಆಕಾರ ತಯಾರಿಸಿದ ಕಲ್ಲಿ ಅಥವಾ ಬಲೆ. ಅಗಲ ಇರುವುದರಿಂದ ಎತ್ತಿನ ಕೊರಳು ಕೊಯ್ದು ಹೋಗುವುದಿಲ್ಲ. ಅದನ್ನು ಸಡಿಲಾಗಿ ಕಟ್ಟುವುದರಿಂದ ಹೀಗೆ ಗಾಡಿ ಮುಗಚಿ ಬಿದ್ದಾಗ ಎತ್ತಿನ ಕೊರಳು ಜಾರಿಕೊಳ್ಳುತ್ತದೆ.

ಯಶವಂತನನ್ನು ಎತ್ತಿ ಅವನನ್ನು ಸಮಾಧಾನಗೊಳಿಸಿ ನಿಂಗಪ್ಪ ಪುನಃ ಗಾಡಿಯ ಮೇಲೆ ಕೂಡ್ರಿಸಿದ.

ಮನೆಗೆ ಬಂದ ಮೇಲೆ ಎಂಟು ದಿನದ ತನಕವೂ ನೋವು ನೋವು ಎಂದು ಕಾಲು ಕುಂಟುತ್ತಲೇ ಕೆಲಸ ಮಾಡುತ್ತಿದ್ದ.

ಅತ್ತೆ ಮಾತ್ರ "ಆದದ್ದು ಸರಿ ಆಯಿತು. ಸೊಕ್ಕು ಹೆಚ್ಚಾದರೆ ಆಗುವುದೇ ಹಾಗೆ" ಎಂದು ಮೂದಲಿಸಿದಳು. ಯಶವಂತ ಬೇಗ ಮೊದಲಿನಂತಾದ. ಅತ್ತೆ ಮಂಕಾಳಿ ಮಾತ್ರ ದಿನದಿನಕ್ಕೂ ಅವನನ್ನು ಹೆಚ್ಚು ಹೆಚ್ಚು ದ್ವೇಷಿಸತೊಡಗಿದಳು.

ಮನೆಯಲ್ಲಿ ಇದ್ದಾಗಲೆಲ್ಲ ಯಶವಂತನನ್ನು ಒಂದಲ್ಲ ಒಂದು ಕೆಲಸಕ್ಕೆ ತೊಡಗಿಸುತ್ತಿದ್ದಳು. ಅವನಿಗೆ ಊಟ ಬಡಿಸುವುದರಲ್ಲಿ ವಂಚನೆ ಮಾಡುತ್ತಿದ್ದಳು. "ಊರ ಮೇಲಿಂದು ಹೆಕ್ಕಿ ತಿಂದರೂ ಹೇಗೆ ಬೆಳೆಯುತ್ತಾನೆ ನೋಡು" ಎಂದು ತನ್ನ ಮಗನ ತೆಳ್ಳಗಿನ ದೇಹವನ್ನು ನೋಡಿ ಉರಿದು ಬೀಳುತ್ತಿದ್ದಳು. ಸ್ವಂತ ಮಗನಿಗಿಂತ ಅಳಿಯನನ್ನೇ ತನ್ನ ಗಂಡ ಹೆಚ್ಚಾಗಿ ಪ್ರೀತಿಸುತ್ತಾನೆ ಎಂದೇ ಅವಳು ಎಣಿಸುತ್ತಿದ್ದಳು.

"ಅವನನ್ನು ಮನೆಗೆ ಕಳಿಸಿಬಿಡಿ ಅನಿಷ್ಟ" ಎಂದು ಗಂಡನಲ್ಲಿ ಹೇಳಿದ್ದಿದೆ.

"ಸುಮ್ಮನಿರೇ ಈಗ ಅವನ ಮನೆಗೆ ಕಳಿಸಿಬಿಟ್ಟರೆ ನಮಗೆ ಪುಕ್ಕಟ್ಟೆ ಕೆಲಸಕ್ಕೆ ಯಾರು ಸಿಕ್ಕುತ್ತಾರೆ? ಗಾಡಿ ಕೆಲಸ ಎಷ್ಟು ಚೆನ್ನಾಗಿ ಮಾಡುತ್ತಾನೆ, ಬಲ್ಲೆಯಾ?" ಎನ್ನುತಿದ್ದ ನಿಂಗಪ್ಪ ಯಾವುದಕ್ಕೂ ಹೆಚ್ಚು ಲಕ್ಷ್ಯ ಕೊಡುವುದಿಲ್ಲ. ಯಶವಂತ ಸಾಂಬನ ಬಟ್ಟೆಯನ್ನು ತೊಳೆಯಬೇಕಿತ್ತು. ಅಂಗಡಿಗೆ ಹೋಗಿ ರೇಶನ್ ಸಾಮಾನು ತರಬೇಕಿತ್ತು. ಕಾಯಿ ಪಲ್ಲೆ, ಚಿಲ್ಲರೆ ಸಾಮಾನನ್ನು ತರಬೇಕಿತ್ತು. ತೋಟಕ್ಕೆ ನೀರು ತೋಕಲು ಹೋಗಬೇಕಿತ್ತು. ಆಕಳಿಗೆ ಅಕ್ಕಚ್ಚನ್ನು ಹೊಯ್ಯಬೇಕಾಗಿತ್ತು. ಇದರ ಜೊತೆ ಎತ್ತುಗಳ ದೇಖರೇಕೆ ಅವನದೇ ಆಯ್ಕೆಯಾಗಿತ್ತು. ಗಾಡಿಗೆ ಹೋದಾಗ ಹೊರತು, ಮನೆಯಲ್ಲಿ ಆತನಿಗೆ ಬಿಡುವೇ ಇದ್ದಿರಲಿಲ್ಲ. ಇದರಿಂದಾಗಿ ಆತ ಶಾಲೆಯ ಕಡೆ ಮುಖ ಹಾಕಲಿಲ್ಲ. ಅದರಿಂದ ಅವನಿಗೆ ವ್ಯಥೆ ಅನ್ನಿಸಲಿಲ್ಲ. ನಿಜವಾಗಿ ವ್ಯಥೆಯಾದದ್ದು ಪಾರ್ವತಿಗೆ.

ಯಶು ಭಾವ ಒಗಟು ಹೇಳದೇ ಎಷ್ಟು ದಿನಗಳಾದವು?

"ಯಶು ಭಾವ ಒಂದು ಒಗಟು ಹೇಳು."

ಅವನು ಅನ್ಯಮನಸ್ಕನಾಗಿರುತ್ತಿದ್ದ.

"ನನಗೆ ಸೌಡಿ ಇಲ್ಲ. ಹೋಗು."

"ಒಂದು, ಒಂದೇ ಒಂದು."

ಅವಳ ಮುಖ ಮ್ಲಾನವಾಗುತ್ತಿತ್ತು.

"ಮರದೊಳಗೆ ಮರಹುಟ್ಟಿ ಮರಕೆರಡು ಕಾಯಾಗಿ ಯಾರೂ ತಿನ್ನದ ಹಣ್ಣು ಬಹು ರುಚಿ."

"ಓ ಅದು ನನಗೆ ಗೊತ್ತು."

"ಏನು?"

"ಮನುಷ್ಯರು"

"ಸರಿ."

"ಮತ್ತೊಂದು, ನನ್ನ ಸೋಲಿಸಬೇಕು."

"ಇಲ್ಲ ಇಲ್ಲ, ನಾನು ಯಾರನ್ನೂ ಸೋಲಿಸೂದಿಲ್ಲ."

"ನೀನೇ ಸೋಲ್ತೆ ಹಾಗಾದರೆ."

"ಇಲ್ಲ ಇಲ್ಲ ನಾ ಯಾರನ್ನೂ ಸೋಲಿಸೋದೂ ಇಲ್ಲ, ನಾನು ಸೋಲೂದೂ ಇಲ್ಲ."

"ಹಂಗಾದರೆ ಒಂದ್ ಕೇಳು."

"ಕಾಲಿಲ್ಲದ ಕೋಳಿಗೆ ಕಾಸ್ಕೊಟ್ಟು ತಂದು ಕೊಯ್ದಾಗ ಅಳ್ತಾರೆ. ಅದು ಏನು?"

"ಯಾವದಪ್ಪ ಕಾಲಿಲ್ಲದ ಕೋಳಿ, ನನಗೆ ತಿಳೀದು. ನಾನೆಲ್ಲೂ ಇಂಥ ಒಗಟ ಕೇಳಲಿಲ್ಲ."

"ನನಗೆ ತಿಳಿಯೂದಿಲ್ಲ ಅಂತ ಹೇಳಬೇಕು; ಕಣ್ಣೀರ ಹರಿಸಬೇಕು ಅಂದರೆ ಹೇಳ್ತೆ."

"ಆಯ್ತು ಹಂ ಆ ಆ ಆ."

"ಹಾಗೆಲ್ಲ ಸುಳ್ಳು ತೀಡೋಣಕ್ಕೆಲ್ಲ ಉತ್ತರ ಇಲ್ಲ."

"ಹೇಳು, ನಿನ್ನ ದಮ್ಮಯ್ಯ."

"ಉಳ್ಳಾಗಡ್ಡೆ."

ಅಷ್ಟು ಹೊತ್ತಿಗೆ ಪಾರ್ವತಿಯನ್ನು ತಾಯಿ ಯಾವುದೋ ಕೆಲಸಕ್ಕೆ ಕರೆದಳು. ಅವಳು ಒಳಗೆ ಹೋದಳು.

ಸಾಂಬ ಹೇಳಿದ. ನೋಡು, ಮಾಸ್ತರು ಹೇಳುವರೇ ನೀನು ಶಾಲೆಗೆ ಬರಬೇಕಂತೆ. ಇಲ್ಲಿದ್ದರೆ ಕೈಕಾಲು ಕಟ್ಟಿ ಹೊತ್ತಕೊಂಡ ಹೋಗ್ತಾರಂತೆ."

ಇದಕ್ಕೆ ಉತ್ತರ ಹೇಳುವ ಅವಕಾಶವನ್ನು ಮಂಕಾಳಿ ಕೊಡಲಿಲ್ಲ.

"ಶಾಲೆಗೆ ಹೋಗಿ ಪಡಹೊಡೆಯೂದೊಂದ ಅದೆ. ಹೇಳ್ ನಿಮ್ಮ ಮಾಸ್ತರ ಹತ್ತಿರ, ಅಂವ ಶಾಲೆಗೆ ಬರೂದಿಲ್ಲ ಅಂತ" ಎಂದು ಅಬ್ಬರಿಸಿದಳು. ಯಶವಂತ ಅದಕ್ಕೆಲ್ಲ ಲಕ್ಷ್ಯವನ್ನೇ ಕೊಟ್ಟಿರಲಿಲ್ಲ. ಅತ್ತೆ ಬಯ್ದರೆ ನೆಟ್ಟಗೆ ಗಾಡಿ ಎತ್ತಿನ ಹತ್ತಿರ ಹೋಗುತ್ತಿದ್ದ. ಅವು ಇಲ್ಲದಿದ್ದರೆ ಇನ್ನೇನಾದರೂ ಕೆಲಸ ಮಾಡುತ್ತಿದ್ದ.

ಹೀಗಿರುತ್ತ ನಿಂಗಪ್ಪನಿಗೆ ಅವನ ಕಾಯಿ ವ್ಯಾಪಾರದಲ್ಲಿ ಬಹಳ ಹಾನಿಯಾಯಿತು.

ಆತ ಹಳ್ಳಿಯಲ್ಲಿ ತೆಂಗಿನಕಾಯಿ ಖರೀದಿಸುತ್ತಿದ್ದ. ಪ್ರತಿವಾರ ಐದುನೂರು ಕಾಯಿಯನ್ನು ಸಂತೆಗೆ ತೆಗೆದುಕೊಂಡು ಹೋಗಿ ಹತ್ತು ಅಂಗಡಿಗಳಿಗೆ ಕೊಡುತ್ತಿದ್ದ. ಒಮ್ಮೊಮ್ಮೆ ಅವು ಜಾಸ್ತಿಯಾದರೆ ತಾನೇ ಸಂತೆಯಲ್ಲಿ ನಿಂತು ಮಾರುತ್ತಿದ್ದ. ಅಂಥ ನಾಲ್ಕೈದು ಸಂತೆಗೆ ಯಶವಂತ ಹೋದದ್ದಿದೆ. ಈ ಸಾರೆ ಸಂತೆಗೆ ಬೇರೆ ಕಡೆಯಿಂದ ಕಾಯಿಗಳು ಬಂದುಬಿಟ್ಟಿದ್ದವು. ತಾನು ಪ್ರತಿಸಾರೆ ಕೊಡುತ್ತಿದ್ದ ಅಂಗಡಿಯವರೆಲ್ಲ ತಮಗೆ ಹತ್ತು ಸಾಕು ಇಪ್ಪತ್ತು ಸಾಕು ಎನ್ನುತ್ತಿದ್ದರು. ಅದೂ ಅತ್ಯಂತ ಕಡಿಮೆ ಬೆಲೆಗೆ. ನಿಂಗಪ್ಪ ಸ್ವತಃ ಸಂತೆಯಲ್ಲಿ ನಿಂತು ಮಾರಿದ. ಆದರೆ ಎಷ್ಟು ಕಡಿಮೆ ಬೆಲೆಗೆ ಕೊಟ್ಟರೂ ತೆಗೆದು ಕೊಳ್ಳುವವರೇ ಇರಲಿಲ್ಲ.

ಅಂದು ನಿಂಗಪ್ಪ ಮಧ್ಯಾಹ್ನ ಊಟವನ್ನೇ ಮಾಡಲಿಲ್ಲ. ಯಶವಂತನಿಗೂ ಊಟವಿಲ್ಲ. ಸಂಜೆ ಮಾತ್ರ ಊಟ ಮಾಡಿದರು.

ಮುಂದಿನ ವಾರಗಳಲ್ಲೆಲ್ಲಾ ಇದೇ ಕತೆ. ಹೀಗಾಗಿ ನಿಂಗಪ್ಪ ಕಾಯಿ ವ್ಯಾಪಾರವನ್ನು ಬಿಟ್ಟ. ಈಗಾಗಲೇ ಕೊಂಡ ಕಾಯಿಗೆ ಹಣ ಹಿಂದಿರುಗಿಸುವುದೇ ಕಷ್ಟವಾಯಿತು ಆತನಿಗೆ. ಮನಸ್ಸಿಗೆ ಬಹಳ ವ್ಯಥೆ ಮಾಡಿಕೊಂಡಿದ್ದ. ಸಣ್ಣ ಸಣ್ಣ ಸಂಗತಿಗೂ ಆತ ಈಗ ಹೆಂಡತಿಗೂ ಬಯ್ಯುತ್ತಿದ್ದ. ಕೆಲಸ ತುಸು ಹೆಚ್ಚು ಕಡಿಮೆ ಆದರೆ ಯಶವಂತನಿಗೂ ಬಯ್ಯುತ್ತಿದ್ದ. ಒಂದೊಂದು ಸಲ ಕೈ ಎತ್ತಿಕೊಂಡು ಹೊಡೆಯಲೇ ಬರುತ್ತಿದ್ದ. ಎತ್ತುಗಳ ಕಡೆಗೂ ಹೆಚ್ಚಿನ ಲಕ್ಷ್ಯ ಕೊಡುತ್ತಿರಲಿಲ್ಲ. ಅದನ್ನು ಯಶವಂತನ ಕಡೆಗೆ ಬಿಟ್ಟಂತಿತ್ತು.

ಯಶವಂತ ಒಮ್ಮೆ ಊರ ಮುಂದಿನ ಹಾದಿಯಲ್ಲಿ ನಡೆದು ಬರುತ್ತಿದ್ದ. ಮಾವ ಅಲ್ಲಿಯ ಹೆಗಡೆಯೊಬ್ಬರ ಮನೆಗೆ ಗಾಡಿ ಕೆಲಸದ ಸಲುವಾಗಿ ಕಳಿಸಿದ್ದ. ಆಗ ಸುಮಾರು ಹನ್ನೊಂದೂವರೆ ಹನ್ನೆರಡು ಗಂಟೆ. ಸರಿಯಾಗಿ ವಮಲ್ತಿ ಕಟ್ಟೆಯ ಮುಂದೆ ಹಾದು ಬರುತ್ತಿರುವಾಗ ಮುಂದುಗಡೆ ಶಾಲಾ ಮಾಸ್ತರರು ಬರುತ್ತಿದ್ದರು. ಅರೆ! ಮಾಸ್ತರು, ಇವರೇ ಕೈಕಾಲು ಕಟ್ಟಿಸಿ ಹೊರಿಸಿಕೊಂಡು ಹೋಗುತ್ತೇನೆ ಶಾಲೆಗೆ ಎಂದು ಹೇಳಿಕಳಿಸಿದ್ದರು. ಹೇಗೆ ತಪ್ಪಿಸಿಕೊಳ್ಳುವುದು.

"ಹಾ! ಯಶವಂತ"

ಮಾಸ್ತರು ಕರೆದೇಬಿಟ್ಟರು. ಕೆಟ್ಟೆ ಎಂದವನು ಅಲ್ಲಿಯೇ ಇದ್ದ ವಮಲ್ತಿ ಗುತ್ತಿನ ಕಡೆ ತಿರುವಿದ.

ವಮಲ್ತಿ ಕಲ್ಲಿಗೆ ಹತ್ತಿರ ನಿಂತು ಆ ದೊಡ್ಡ ಮರದ ಕಡೆ ನೋಡಿದ. ಆ ಮರದ ಸುತ್ತು ಸೀಗೆ ಬಲೆ ಹಬ್ಬಿತ್ತು. ವಮಲ್ತಿ ಉದ್ದೇಶಿಸಿ "ಯಾಕೆ ಕರೆದೆ, ಏನು? ನಾನು ನಿನಗೇನು ಮಾಡಲಿ? ನನಗೆ ಹೆದರಿಕೆಯಾಗುತ್ತದೆ. ಹಾಗೆ ಹಲ್ಲು ತೆಗೆಯಬೇಡ."

ಮಾಸ್ತರು ನಿಂತರು, ಮತ್ತೆ "ಯಶವಂತ" ಎಂದರು.

ಯಶವಂತ ಆ ಕಡೆ ತುಸುವೂ ಲಕ್ಷ್ಯ ಕೊಡಲಿಲ್ಲ.

"ನನಗೇನು ಗೊತ್ತು ನೀನು ಮಧ್ಯಾಹ್ನ ತಿರುಗಾಡುವ ಹೊತ್ತು ಎಂದು. ನನ್ನನ್ನು ಕಾಪಾಡು, ನನ್ನನ್ನು ಕಾಪಾಡು. ಏನು ಹೆದರಿಸ್ತೀಯ? ಹೆದರಿಸಿದರೆ ನಿನ್ನ ಕಲ್ಲನ್ನೇ ಕಿತ್ತು ಹಾಕಿಬಿಡುತ್ತೇನೆ."

"ಅರೆ ಇವನ! ಏನದು?"

"ನಿನಗೆ ಬಾಳೆಹಣ್ಣು ಒಪ್ಪಿಸಲು ನನ್ನ ಹತ್ತಿರ ಇಲ್ಲ. ನೀನು ಉಪವಾಸ ಬಿದ್ದು ಸಾಯಿ ನನಗೇನು?"

"ಎಲಾ ಇವನ, ಹುಚ್ಚು ಹಿಡಿದಿದೆಯೇ?"

ಯಶವಂತ ಮುಂದುವರಿದ.

"ಏನಂದೆ? ನಿನ್ನ ಬಿಚ್ಚಿದ ಮುಡಿ ನಾನು ಕಟ್ಟಿಕೊಡಬೇಕೆ. ನನಗೆ ಏನೂ ಮಾಡುವುದಿಲ್ಲವಾ?"

"ಏನಂದೆ ಬಾ ಏನೂ ಮಾಡುವುದಿಲ್ಲ ಅಂದೆಯಾ? ಏನು ನಾನು ನಿನ್ನ ಕಂದ ಎಂದೆಯಾ? ಬಂದೆ ಬಂದೆ" ಯಶವಂತ ವಮಲ್ತಿ ಕಲ್ಲಿನ ಬಳಿಗೆ ನಡೆದ.

"ಓಹೋ ಏನೊ ಚಮತ್ಕಾರ?"

ಮಾಸ್ತರರಿಗೆ ಅದು ವಮಲ್ತಿ ಮನೆ ಎಂದು ಗೊತ್ತಿತ್ತು. ಅದರಲ್ಲೂ ಅದು ಅಂತಿಂಥ ದೆವ್ವ ಆಗಿರಲಿಲ್ಲ. ಆ ವಮಲ್ತಿ ಹೊಡೆತದಿಂದ ರಕ್ತ ಕಾರಿ ಕಾರಿ ಸತ್ತವರಿದ್ದರಂತೆ: ಊರವರು ಹೇಳು ತ್ತಿದ್ದುದು ಅದು. ಅದು ನಡೆದದ್ದು ಅವರು ಈ ಊರಿನ ಶಾಲೆಗೆ ಬರುವುದಕ್ಕೂ ಮೊದಲು. ಅವರಿಗೆ ಅದರಲ್ಲೆಲ್ಲಾ ನಂಬಿಕೆ ಇಲ್ಲ. ಆದರೆ ಈಗ ಪ್ರತ್ಯಕ್ಷ ನೋಡುತ್ತಿದ್ದರಲ್ಲ.

ಅವರ ಮನಸ್ಸಿನಲ್ಲಿ ಸಾವಕಾಶ ಅಳುಕು ಚಿಗುರಿತು.

ಯಶವಂತನ ಮಾತು ಮುಂದುವರಿದಿತ್ತು.

"ಏನು ನಾನು ಹಾಗೇ ಮುಟ್ಟಿದರೆ ಮೈಲಿಗೆ ಆಗುತ್ತದಾ? ಸರಿ ಅಂಗಿ ಚಡ್ಡಿ ತೆಗೆದಿಡುತ್ತೇನೆ. ಆದರೆ ನನಗೆ ನಾಚಿಕೆ.... ಏನು ತಾಯಿ ಮುಂದೆ ನಾಚಿಕೆ ಏಕೆ ಎಂದೆಯಾ? ತಾಯಿ ಮುಂದೆ ಅಲ್ಲ ತಾಯಿ. ಬೇರೆ ಯಾರಾದರೂ ನೋಡಿದರೆ. ಏನು ಎದುರಾದರೆ ಬಲಿ ತೆಗೆದುಕೊಳ್ಳುತ್ತೇನೆ

ಎಂದೆಯಾ? ಅದು ಸರಿ ಹತ್ತಿರ ಅಡಗಿ ನೋಡಿದರೆ.... "ಏನು ನೋಡಿದರೆ ಕಣ್ಣು ಹೊಟ್ಟೇ ಹೋಗುತ್ತದೆ, ಎಂದೆಯಾ? ಯಾಕೆ ಸಿಟ್ಟು ಮಾಡುತ್ತಿ? ಅಯ್ಯಯ್ಯೋ ಕೂಗಬೇಡ" ಎಂದು ಯಶವಂತ ತನ್ನ ಮೈಮೇಲಿನ ಬಟ್ಟೆಯನ್ನು ತೆಗೆದು ಒಗೆದು ದೆವ್ವದ ಗುತ್ತಿನ ಕಡೆ ನಡೆದ.

ಮಾಸ್ತರರ ಎದೆ ನಡುಗಿತು. ಅವರು ಎದುರು ಬಂದರೆ ದೆವ್ವ ಬಲಿ ತೆಗೆದುಕೊಳ್ಳುತ್ತದೆ. ಆ ಕಡೆ ನೋಡಿದರೆ ದೃಷ್ಟಿಯೇ ನಾಶವಾಗುತ್ತದೆ!

ಮಾಸ್ತರು ಹಿಂದೆ ಮುಂದೆ ನೋಡಿದರು. ಯಾರೂ ಬರುತ್ತಿರಲಿಲ್ಲ. ತಮ್ಮ ಪ್ಯಾಂಟನ್ನು ಮೇಲೆ ಸರಿಸಿದರು. ಚಪ್ಪಲ್ಲನ್ನು ಕೈಗೆ ತೆಗೆದುಕೊಂದು ಆದಷ್ಟು ವೇಗವಾಗಿ ಓಡಿದರು.

ಮಾಸ್ತರು ಕಣ್ಣಿಗೆ ಕಾಣದಷ್ಟು ದೂರ ಹೋದ ಮೇಲೆ ಯಶವಂತ ತನ್ನ ಬಟ್ಟೆಯನ್ನು ತೊಟ್ಟುಕೊಂಡು ಮನೆಗೆ ಹಿಂದಿರುಗಿದ.

ಮನೆಯಲ್ಲಿ ತಾನು ದೆವ್ವದೊಡನೆ ಮಾತಾಡಿದ ಸಂಗತಿಯನ್ನು ಪಾರ್ವತಿಗೆ ಹೇಳಿದ. ಅವಳು ತಾಯಿಗೆ ಹೇಳಿದಳು. ಅವಳು ನಂಬಲಿಲ್ಲ.

"ಹೌದು, ದೆವ್ವ ಮಾತಾಡ್ತದೆ. ಇಂವ ಏನು ದೊಡ್ಡ ನೋಟಕಾರ" ಎಂದು ಅಲ್ಲಗಳೆದಳು. ಆದರೆ ಪಾರ್ವತಿ, ಸಾಂಬ ಅದನ್ನು ನಂಬಿದರು.

ನಿಂಗಪ್ಪ ಹೆಂಡತಿಗೆ ಹೇಳಿದ. 'ಇರಲೂಬಹುದು. ಅದು ಮೂಲತಃ ಮಾಸ್ತಿಕಟ್ಟೆ ಅಲ್ಲ. ವಮಲ್ತಿ ಕಟ್ಟೆ. ವಮಲ್ತಿ ಬಹಳ ಕೆಟ್ಟ ದೆವ್ವ. ಅದು ತೀರ ಮಧ್ಯಾಹ್ನ ಅಥವಾ ಮಧ್ಯರಾತ್ರಿ ಮೇಲೆ ಒಬ್ಬರೇ ಓಡಾಡುವಾಗ ಸಿಕ್ಕುತ್ತದೆ. ಏನೋ ತಿರುಗಾಡಲು ಬಂದವರ ಹಾಗೆ ದಾರಿತಪ್ಪಿ ಬಂದವರ ಹಾಗೆ ಮಾತಾಡುತ್ತದೆ. 'ಒಂದು ಕವಳ ಕೊಡು' ಅನ್ನುತ್ತದೆ. ಎಲೆ ಅಡಿಕೆ ಕೊಟ್ಟರೆ ತಟ್ಟನೆ ಅಡಿಕೆಯನ್ನು ಕೆಳಗೆ ಹೊತಾಕುತ್ತದೆ. 'ಓಹೋ ಬಿದ್ದೋಯ್ತು. ಹಣಕೂಕಾಗುವುದಿಲ್ಲ. ಸೊಂಟ ನೋಯ್ತದೆ. ಬಗೇಲ್ ಹೆಕ್ಕಿ ಕೊಡು' ಅಂತದೆ. ಹೆಕ್ಕಿ ಕೊಡಲು ನಾವು ಬಗ್ಗಿದವೋ ಅಲ್ಲೇ ಬಡಿದು ಬಿಡ್ತದೆ".

"ನಂಗೂ ಸೊಂಟ ನೋವು. ನೀನೇ ಹೆಕ್ಕಿಕೊ ಎಂದು ಹೇಳಿದರೆ ಕಿರ್ ಅಂತ ಕೂಗಿ ಓಡುತ್ತದೆ." ಇದನ್ನು ಕೇಳಿದ ಮೇಲೆ ಮೂಕಾಂಬೆಗೂ ಯಶವಂತನ ಮಾತು ಸತ್ಯ ಇರಬಹುದು ಎನ್ನಿಸಿದೆ.

"ನಾನು ಅದರ ಮಂಡೆ ಕಟ್ಟಿಕೊಟ್ಟೆ, ಅದಕ್ಕೆ ಖುಷಿ ಆಯ್ತು. ನಿನಗೆ ಯಾರಾದರೂ ಏನಾದರೂ ಕಷ್ಟಕೊಟ್ಟರೆ ತನಗೆ ಹೇಳಿಕೆ ಮಾಡಿಕೋ. ತಾನು ಅವರನ್ನು ನಾಶಮಾಡುತ್ತೇನೆ" ಎಂದು ಹೇಳಿದೆ ಎಂದು ಪಾರ್ವತಿಯೊಡನೆ ಹೇಳಿದ್ದಾನೆ. ಅವಳು ಅದನ್ನು ತಾಯಿಗೆ ತಿಳಿಸಿದ್ದಾಳೆ. ಹೀಗಾಗಿ ಮಂಕಾಳಿಗೂ ಒಳಗೊಳಗೇ ಹೆದರಿಕೆ. ಯಾಕೆಂದರೆ ಆ ವಮಲ್ತಿ ಭಯಂಕರ ದೆವ್ವ ಎಂದು ಅವಳು ಕೇಳಿದ್ದಾಳೆ. ಅಲ್ಲಿ ಹೆದರಿದವರು ಬದುಕಿದ್ದು ಕಡಿಮೆಯಂತೆ. ಆದರೂ ಅವಳಿಗೆ ಖಾತರಿ ಆಗಿರಲಿಲ್ಲ. ಅವಳು ಒಂದು ದಿನ ಮಾಸ್ತರರನ್ನು ಭೇಟಿ ಮಾಡಿದ್ದಳು. ಯಶವಂತ ದೆವ್ವದೊಡನೆ ಮಾತನಾಡಿದ್ದು ಸತ್ಯವೇ? ಎಂದು ವಿಚಾರಿಸಿದಳು.

"ಹೌದು ಮಾರಾಯ್ತಿ. ನಾನು ಸ್ವತಃ ನೋಡಿದೆ. ನನಗೆ ಅದರ ನೆನಪು ಮಾಡಿಕೊಂಡರೇ ಮೈ ನಡುಗುತ್ತದೆ. ಆ ಸುದ್ದಿ ಎತ್ತಬೇಡ. ಏನು ಅವನ ಧೈರ್ಯವೋ ಅವನಿಗೆ ಒಲಿದಿದೆಯೋ ತಿಳಿಯದು" ಎಂದು ಹೇಳಿಬಿಟ್ಟರು. ಈಗ ಮಂಕಾಳಿಗೆ ಖಾತ್ರಿಯಾಗಿದೆ. ಅವನಿಗೆ ಕಿರುಕುಳ ಕೊಡುವುದು ತುಸು ಕಡಿಮೆಯಾಗಿದೆ.

'ಯಶು ಯಶೂ' ಎಂದು ಕರೆಯುತ್ತಿದ್ದಳು. ತಿನ್ನಲು ಉಣ್ಣಲು ತನ್ನ ಮಗನಿಗಿಂತ ಹೆಚ್ಚು ಸನ್ಮಾನಿಸುತ್ತಿದ್ದಳು. ಸಾಂಬನೂ ಈಗ ಯಶವಂತನನ್ನು ಬಹಳ ಗೌರವಿಸುತ್ತಾನೆ. ಅತ್ತೇ ನನಗೆ ಎರಡು ಹಪ್ಪಳ ಹುರಿದುಕೊಡು ಎನ್ನುತ್ತಾನೆ ಯಶವಂತ. "ಯಶೂ ಮಗನೇ ತಕೊ. ಸಾಂಬಾ ಭಾವಗೆ ಕೊಡು" ಎನ್ನುತ್ತಾಳೆ ಮಂಕಾಳಿ. ಯಶವಂತ ಒಳಗೊಳಗೇ ನಗುತ್ತಾನೆ.

ಆದರೂ ಅವನಿಗೆ ಒಳಗಿಂದೊಳಗೆ ಬೇಸರ ತಲೆದೋರಿದೆ.

ಅತ್ತೆ ಮತ್ತೆ ಮೊದಲಿನಂತೆ ಆಗಿದ್ದಾಳೆ. ದೆವ್ವಕ್ಕೆ ಹರಕೆ ಕೊಡುವ ಹಾಗಿಲ್ಲ.

ಕೊಟ್ಟಿಗೆಯಲ್ಲಿಯ ಒಂದು ಗೂಳಿ ಸತ್ತು ಹೋಯಿತು. ಅದಕ್ಕೆ ನಾಲ್ಕು ವರ್ಷವಾಗುತ್ತಿತ್ತು. ಇದೇ ವರ್ಷ ಗದ್ದೆ ಹೂಡಲು ಕಟ್ಟುವ ಸಮಯ. ದಷ್ಟಪುಷ್ಟವಾಗಿ ಬೆಳೆದಿತ್ತು. ನೆಲನಡುಗುವಂತೆ ಇಟ್ಲ ಹಾಕುತ್ತಿತ್ತು.

"ಯಾರೇ ಆದರೂ ಕಣ್ಣು ಮುಚ್ಚಿ ಒಂದೂವರೆ ಸಾವಿರ ರೂಪಾಯಿ ಕೊಡುತ್ತಿದ್ದರು" ಎಂದು ಅತ್ತೆ ಹೇಳುತ್ತಿದ್ದಳು. ಅಂಥಾ ಗೂಳಿಗೆ ಒಮ್ಮೆಲೆ ಸಾವು ಬಂತು.

"ದೆವ್ವ ಹೊಡೆದಿದೆ" ಎಂದು ಜನ ಅಂದರು.

ಅತ್ತೆ ಹೇಳಿದಳು. "ನಿನಗೆ ಉಂಡಮನೆ ಋಣ ಇರುವುದಾದರೆ ನೀನು ವಮಲ್ತಿ ದೆವ್ವಕ್ಕೆ ಹೇಳಿಕೋ. ಗೂಳಿಯನ್ನು ಬದುಕಿಸು."

ಯಶವಂತ ಹೇಳಿಕೊಂಡ, ಗೂಳಿ ಬದುಕಲಿಲ್ಲ. ಅರ್ಧತಾಸಿನಲ್ಲಿ ಸತ್ತು ಹೋಯಿತು. ಬಹುಶಃ ಅದಕ್ಕೆ ವಿಷದ ಹಾವು ಕಚ್ಚಿರಬೇಕು.

ಇದಾದ ಮೇಲೆ ಮಂಕಾಳಿ ಅವನ ಮೇಲೆ ತಿರುಗಿ ಬಿದ್ದಳು. ಪ್ರತಿಯೊಂದಕ್ಕೆ ಜರೆತ, ಅವಳ ಗ್ರಹಿಕೆಯ ಪ್ರಕಾರ ಯಶವಂತ ದೆವ್ವಕ್ಕೆ ಮೊರೆಹೋಗಲೇ ಇಲ್ಲ. ನಾಟಕ ಮಾಡಿದ. ಅವನಿಗೆ ತಾವು ನಾಶವಾಗುವುದೇ ಬೇಕಾಗಿದೆ. ಎಷ್ಟಾದರೂ ಭಿಕಾರಿಯಲ್ಲವೇ? ಮುಂತಾಗಿ ಗ್ರಹಿಸಿದಳು. ದಿನದಿನಕ್ಕೆ ಅವಳು ಕಠಿಣಳಾದಳು. ಯಶವಂತನಿಗೆ ಹಿಂಸೆ ಕೊಡುತ್ತಿದ್ದಳು. ಪಾರ್ವತಿ ಸಹ ಮಾತಾಡಕೂಡದೆಂದು ಆಜ್ಞೆ ಮಾಡಿದ್ದಳು. ಯಶವಂತ ನಿರ್ವಿಣ್ಣನಾಗಿದ್ದ. ಆದರೆ ಅವನ ಬೇಸರವೆಲ್ಲ ಗಾಡಿ ಮತ್ತು ಗಾಡಿ ಎತ್ತಿನ ಸೇವೆಯಲ್ಲಿ ಮರೆತುಹೋಗುತ್ತಿತ್ತು.

ಒಮ್ಮೆ ಹೀಗಾಯಿತು.

ನಿಂಗಪ್ಪ ಗಾಡಿಯನ್ನು ಬೇರೆ ಕಡೆ ಒಯ್ಯಲಿದ್ದ. ಸಂಜೆ ಸುಮಾರು ಐದು ಗಂಟೆಯ ಸಮಯ. ಎತ್ತುಗಳಿಗೆ 'ಧಾಣಿ' ಕೊಟ್ಟಾಯಿತು. ಮಧ್ಯೆ ಎತ್ತುಗಳಿಗೆ ತಿನ್ನಲು ಬೇಕೆಂದು ಹತ್ತು ಕಟ್ಟು ಹುಲ್ಲನ್ನು ಯಶವಂತನೇ ಗಾಡಿಗೆ ಹಾಕಿಬಂದ. ಪ್ರತಿಸಲ ಸವಾರಿಗೆ ತೆಗೆದುಕೊಳ್ಳುವಂತೆ ಕಂಬಳಿ, ಚಾದರ ತೆಗೆದುಕೊಂಡದ್ದಾಯಿತು. ಗಾಡಿ ಚಕ್ರಕ್ಕೆ ಎಣ್ಣೆ ಹಾಕಿದ್ದಾಯಿತು. ಯಶವಂತನೇ ಚಕ್ರದ ಕೀಲು ಸಿಲುಕಿಸಿದ–ಆ ಕೀಲಿನ ಬದಿಗೆ ತಗಡಿನಿಂದ ಕತ್ತರಿಸಿ ತಯಾರಿಸಿದ ತಗಡಿನ ಪದಕದ ಗೊಂಚಲು ಇತ್ತು. ಅದು ಕೀಲು ಅಲಗಿದೊಡನೆ 'ಗಜಲ್ ಗಜಲ್' ಎಂದು ಸದ್ದು ಮಾಡುತ್ತಿತ್ತು. ಗಾಡಿ ಯಿಂದ ಆಹ್ಲಾದಕರವಾದ ವಾಸನೆ ಬರುತ್ತಿತ್ತು.

ಯಶವಂತ ಉತ್ತೇಜಿತನಾಗಿದ್ದ.

ಗಾಡಿಯಲ್ಲಿ ಇಳುಕಲಿನ ಓರೆಯಲ್ಲಿ ನಿಲ್ಲಿಸಿದ್ದರು ಯಾವಾಗಲೂ ನಿಲ್ಲಿಸುವುದೇ ಅಲ್ಲಿ. ಹಾಗೆ ನಿಂತ ಗಾಡಿಯನ್ನು ಮೇಲ್ಮುಖವಾಗಿ ತಿರುಗಿಸಬೇಕಿತ್ತು. ನಿಂಗಪ್ಪ ಗಾಡಿಯ ಮೂಕೆಯನ್ನು ಮೂಜು (ಮೂಕೆಗೂ ನೆಲಕ್ಕೆ ತಾಗಿದ ಹಕ್ಕಿ ಮೂಜಿನಂಥ ಭಾಗ) ಹಿಡಿದವನು ತಟ್ಟನೆ ಹಿಂದಕ್ಕೆ ಒತ್ತಿ 'ಗರಕ್' ಎಂದು ತಿರುಗಿಸಿಬಿಡುತ್ತಿದ್ದ. ಇಳಿಜಾರಿಗೆ ನಿಂತ ಚಕ್ರಗಳು ಮುಂದೊತ್ತುವುದ ರೊಳಗೆ ಗಾಡಿ ತಿರುಗಿಬಿಡುತ್ತಿತ್ತು. ಗಾಡಿಗೆ ಬೇಕಾದ ಸಾಮಾನು ಹಾಕಿ ತೊಟ್ಟಿಲ ಹಿಂಬದಿಗೆ ಕೋಳ ಹಾಕಿ ಹಗ್ಗ ಬಿಗಿದಾಗಿತ್ತು.

ನಿಂಗಪ್ಪ ಎತ್ತುಗಳನ್ನು ಹೊಡೆದುಕೊಂಡು ಬರಲು ಮನೆ ಅಂಗಳಕ್ಕೆ ಹೋಗಿದ್ದ. ಯಶವಂತ ಉತ್ಸಾಹಭರಿತನಾಗಿದ್ದ. ಮಾವ ಹೇಗೆ ತಿರುಗಿಸುತ್ತಾನೆ, ಹೇಗೆ 'ಗಿರಕ್' ಎಂದು ತಿರುಗಿಸಬೇಕು ಎಂದೆಲ್ಲ ಕಣ್ಮುಂದೆ ಚಿತ್ರಿಸಿಕೊಂಡ. 'ಮಾವ' ಬರುವುದರೊಳಗೆ ತಾನೂ ತಿರುಗಿಸಿ ಇಡಬೇಕು. ಮಾವ 'ಶಹಬಾಸ್' ಎಂದು ಬೆನ್ನು ತಟ್ಟುತ್ತಾನೆ ಎಂದು ನೆನೆದುಕೊಂಡ. ಗಾಡಿಯ ಮೂಕೆಯನ್ನು ತಟ್ಟನೆ ಎತ್ತಿದ. ಅದು ಎತ್ತಲೇನೋ ಸುಲಭವಾಯಿತು. ಆದರೆ ಅದನ್ನು ಹಿಂದಕ್ಕೆ ಒತ್ತಿ (ಚಕ್ರ ಮುಂದೆ ಬಾರದಂತೆ ತಡೆ ಒಡ್ಡಿ) ಗಿರಕ್‌ನೇ ತಿರುಗಿಸಲಾಗಲಿಲ್ಲ. ಚಕ್ರ ಮುಂದಕ್ಕೆ ಹರಿಯಿತು. ಯಶವಂತನಿಗೆ ತಡೆಯಲಾಗಲಿಲ್ಲ. ಮೈಮೇಲೆ ಒತ್ತಿ ಬಂತು. ಇನ್ನೇನು ತಾನು ಬಿದ್ದು ಸಾಯುತ್ತೇನೆ ಎನ್ನುವ ಹೊತ್ತಿಗೆ ಮೂಕೆಯನ್ನು ಬಿಟ್ಟು ತಾನು ಬದಿಗೆ ಓಡಿದ.

ಗಾಡಿ ಹಾಗೇ ಮುಂದೆ ಉರುಳಿ ಪಕ್ಕದಲ್ಲಿ ದರೆಯ ಕೆಳಬದಿಗೆ ಹೊಂಡಕ್ಕೆ ಬಿತ್ತು.

ನಿಂಗಪ್ಪ ಸದ್ದನ್ನು ಕೇಳಿ ಎತ್ತನ್ನು ಅಲ್ಲೇ ಬಿಟ್ಟು ಓಡಿಬಂದ. ಅವನಿಗೆ ತಿಳಿಯಿತು. ಇದು ಯಶವಂತನ ಅಧಿಕ ಪ್ರಸಂಗ.

ಆತನಿಗೆ ನಖಶಿಖಾಂತ ಸಿಟ್ಟು ಬಂತು. ಎತ್ತನ್ನು ಹೊಡೆದುಕೊಂಡು ಬರಲು ಹೋಗುವಾಗ ಬಾರಕೋಲನ್ನು (ಚರ್ಮದ ಬಾರಿನ ತುದಿಯುಳ್ಳ ಚಾವಟಿಕೆ) ಎತ್ತಿ ಬಲವಾದ ಶಕ್ತಿ ಹಾಕಿ ಯಶವಂತನಿಗೆ ಎರಡು ಬಾರಿಸಿಬಿಟ್ಟ.

ಯಶವಂತ ನಿಂತಲ್ಲೇ ಉಚ್ಚೆ ಹೊಯ್ದುಕೊಂಡ. ಆದರೂ ಆತ ಕೂಗಿಕೊಳ್ಳಲಿಲ್ಲ. ಅವನು ನಿಂತಲ್ಲೇ ನಡುಗಿದ.

ಸಾಂಬ ನೋಡಿ ನಕ್ಕಿದ್ದ. ಅತ್ತೆ 'ಸರಿ ಆಯಿತು. ಹೆಚ್ಚು ಸೊಕ್ಕಿ ಹೋದರೆ ಆಗುವುದೇ ಹೀಗೆ. ಅಲ್ಪರಿಗೆ ಐಶ್ವರ್ಯ ಬಂದರೆ ಮಧ್ಯರಾತ್ರಿ ಕೊಡೆ ಹಿಡಿದರಂತೆ' ಎಂದು ಮೂದಲಿಸಿದಳು.

ಊರಿನಲ್ಲಿ ತನಗೆ ಹೊಡೆತ ಬಿದ್ದಾಗ ಮೈ ಸುಲಿದಿತ್ತು. ಆಗ 'ಅವ್ವ' ಕಣ್ಣೀರು ಸುರಿಸುತ್ತ ಎಣ್ಣೆ ಸವರಿದ್ದಳು.

ಯಶವಂತ ಆಳವಾದ ದುಃಖದಲ್ಲಿ ಬಳಲಿದ. ಕಿಂಕರ್ತವ್ಯಮೂಢನಾಗಿ ವ್ಯಥಿಸಿದ.

ನಿಂಗಪ್ಪನ ಮನಸ್ಸಿಗೆ ಪಶ್ಚಾತ್ತಾಪವಾಗಿತ್ತು. ತಾನು ಹೊಡೆಯಬಾರದೆಂದು ತೋರಿತು. ಆತ ಯಶವಂತನನ್ನು ಸಮಾಧಾನಪಡಿಸಲು ಯತ್ನಿಸಿದ. ಬಾರಕೋಲಿನಿಂದ ಹೊಡೆದಾಗ ಬೆನ್ನ ಮೇಲೆ ಬಿದ್ದ ಬಾರಸಲು ಗಾಯಕ್ಕೆ ಔಷಧಿ ಲೇಪ ಮಾಡಿದ.

ಅದನ್ನು ನೋಡಿದ ಮಂಕಾಳಿ ಸಿಟ್ಟಿಗೇಳುತ್ತಿದ್ದಳು. "ಮಗನಿಗೆ ಗಾಯವಾದಾಗ ಮುಟ್ಟಲು ಬರದ ಗಂಡಸು ಈಗ ಅಳಿಯನಿಗೆ ಉಪಚಾರ ಮಾಡಲು ಶುರುಮಾಡಿದರು" ಎಂದು ಹಂಗಿಸಿದಳು.

ಯಶವಂತನ ಬೆನ್ನ ಮೇಲಿನ ಗಾಯ ಹೋದರು ಮನಸ್ಸಿನ ಗಾಯ ಮಾಯಲಿಲ್ಲ.

ಮನದೊಳಗಿನ ಅಭಿಮಾನ ನೀನೂ ಒಬ್ಬ ಮನುಷ್ಯನೇ ಎಂದಿತು.

ಜೀವನದಲ್ಲಿ ಯಾವಾಗಲೂ ಶುಭವೇ ಲಭಿಸುತ್ತದೆಂದೇನೂ ಇಲ್ಲ. ಅದು ಇರುವುದೇ ಹಾಗೆ. ಸುಖವೂ ಬರುತ್ತದೆ; ಕಷ್ಟವೂ ಬರುತ್ತದೆ. ಧೈರ್ಯಶಾಲಿಗಳು ಅವೆರಡನ್ನೂ ಸಮಾನವಾಗಿ ಸ್ವೀಕರಿಸುತ್ತಾರೆ. ಸುಖ ಬಂದಾಗ ಕಷ್ಟಪಡುವವರನ್ನು ನೋಡಿ ತಾವು ಹೆಚ್ಚು ಹೆಚ್ಚು ಉದಾರರಾಗುತ್ತಾರೆ. ಕಷ್ಟ ಬಂದಾಗ ಸುಖದ ದಿನಗಳನ್ನು ನೆನಪಿಸಿಕೊಂಡು ಸಮಾಧಾನ ಗೊಳ್ಳುತ್ತಾರೆ. ಅವರು ನಿರಾಶರಾಗುವುದಿಲ್ಲ. ನಿಷ್ಕ್ರಿಯರಾಗುವುದಿಲ್ಲ. ಮುಂದಿನ ದಿನಗಳನ್ನು ಎದುರುಗೊಳ್ಳಲು ಸಿದ್ಧರಾಗಿರುತ್ತಾರೆ.

ಊರಿನಲ್ಲಿ ಯಕ್ಷಗಾನ ಆಟದ ಮೇಳ ಬಂದಿತ್ತು. ಮಾವ ಮನೆಯಲ್ಲಿದ್ದಿರಲಿಲ್ಲ.

"ಪಾರ್ವತಿ ನಾನು ಆಟಕ್ಕೆ ಹೋಗುತ್ತೇನೆ. ಅತ್ತೆಯ ಹತ್ತಿರ ಹೇಳು" ಎಂದ.

"ಆಟಕ್ಕೆ ಹೋಗಲಿ, ಮಸಣಕ್ಕೆ ಹೋಗಲಿ ನನಗೇನು?" ಎಂದಳು ಮಂಕಾಳಿ.

ಯಶವಂತ ಆಟಕ್ಕೆ ನಡೆದ.

ತಿರುಗಿ ಮನೆಗೆ ಹೋಗಲಿಲ್ಲ.

❑

೩. ಬಣ್ಣದ ವೇಷದಲ್ಲಿ ಜೋನಿ

ಯಶವಂತ ಆಟ ನೋಡುತ್ತಿದ್ದರೂ ಅವನ ಮನಸ್ಸು ಸ್ಥಿಮಿತದಲ್ಲಿರಲಿಲ್ಲ.

ತಿರುಗಿ ಹೋಗುವುದೇ? ಛೇ, ಅದಾಗದು ಎಂಥ ಅಪಮಾನ! ವಿಚಾರಿಸುತ್ತ ವಿಚಾರಿಸುತ್ತ ಯಶವಂತ ಆಟದೊಳಗೆ ಸೆಳೆಯಲ್ಪಟ್ಟು ತಲ್ಲೀನನಾದ.

ರಾತ್ರಿಯಾದಂತೆ ಯಶವಂತನಿಗೆ ನಿದ್ದೆ ಒತ್ತರಿಸಿ ಬಂತು. ಅಲ್ಲಿ ನೆಲದ ಮೇಲೆಯೇ ಮೈಯೊಡ್ಡಿ ಮಲಗಿದ.

ಮುಂಜಾನೆ ಜನರೆಲ್ಲ ಖಾಲಿಯಾಗಿದ್ದರು. ದೊಡ್ಡ ಬೆಳಗಾಗುವುದರೊಳಗೆ ಟೆಂಟನ್ನು ಕಿತ್ತು ಸಾಮಾನುಗಳನ್ನು ಮುಂದಿನ ಆಟದ ಸ್ಥಳಕ್ಕೆ ಸಾಗಿಸುವುದು ಕ್ರಮ.

ಜನ ಟೆಂಟನ್ನು ಕಿತ್ತರು. ಅದಕ್ಕೆ ಕಟ್ಟಿದ ತಾಡಪತ್ರೆಯನ್ನು ಬಿಚ್ಚಿ ಅದನ್ನು ಮಡಿಕೆ ಮಾಡಿ ಲಾರಿಯ ಮೇಲೆ ಹೇರಲು ಸಜ್ಜುಗೊಳಿಸುತ್ತಲಿದ್ದರು.

ಹಾಗೆ ಕೂಲಿ ಆಳುಗಳು ಅರೆನಿದ್ದೆಯಲ್ಲೇ ಆ ಕಡೆ ಈ ಕಡೆ ಓಡಾಡುವಾಗ ಯಶವಂತನ ಕಾಲಿಗೆ ಸಿಲುಕಿ, ಆ ಆಳು ಬಿದ್ದುಬಿಟ್ಟ.

"ಥೂ, ಯಾವುದೇ ಕುನ್ನಿ ಗಡದ್ದಾಗಿ ಮಲಗಿದೆ. ಇದರ ಮನೆ ಹಾಳಾಗ್ಲೊ." ಎಂದು ಆತ ಸಿಟ್ಟಿನಿಂದ ಝಾಡಿಸಿ ಒದ್ದ. ಆತನ ಕಾಲಿನ ಹೊಡೆತಕ್ಕೆ ಯಶವಂತ "ಅಯ್ಯಯ್ಯೋ" ಎಂದು ಕಿರುಚಿದ.

"ಅರೆ, ಇದು ಯಾರಪ್ಪಾ."

ಆಶ್ಚರ್ಯದಿಂದ ನೋಡಿದರು.

"ಹುಡುಗ, ಎಲಾ, ಚಲೋ ಆಟ ನೋಡಿದ್ಯಾ, ಇನ್ನೂ ಆಟ ಮುಗಿಲಿಲ್ವಾ, ಏಳು, ಓಡು, ಇಲ್ದಿದ್ರೆ ಮತ್ತು ಮುಕಳಿ ಮೇಲೆ ಒದ್‌ಬಿಡ್ತೇನೆ" ಎಂದು ಒಬ್ಬ ದಬಾಯಿಸಿದ.

ಯಶವಂತ ಎದ್ದು ಸುತ್ತಲೂ ನೋಡಿದ. ಅದು ಹಸ್ತಿನಾವತಿ ಪಟ್ಟಣವೂ ಆಗಿರಲಿಲ್ಲ. ಅಲ್ಲಿ ಧರ್ಮರಾಜನೂ ಇರಲಿಲ್ಲ. ಕಳಚಿದ, ಕಳಚುತ್ತಿರುವ, ಅಲ್ಲಲ್ಲಿ ಬಿದ್ದ ಗಳು, ಪರದೆ, ಖುರ್ಚಿ ಇತ್ಯಾದಿ ಸಾಮಾನುಗಳು ಕುರುಕ್ಷೇತ್ರದ ಪಳೆಯುಳಿಕೆಯಂತಿದ್ದವು. ಅದರಲ್ಲಿ ತಾನೊಬ್ಬನೇ ಬದುಕಿದ್ದವ ಎಂದು ತೋರಿತು ಯಶವಂತನಿಗೆ.

ಮೈಗೆ ಹತ್ತಿದ ದೂಳು ಕೊಡವಿಕೊಂಡ.

"ಇನ್ನೂ ಸರಿ ಎಚ್ಚರ ಆಗಲಿಲ್ಲೇನೋ?" ಎಂದು ಒಬ್ಬ ಯಶವಂತನ ತಲೆ ತಟ್ಟಿದ.

"ಯಾರು ನೀನು" ಎಂದನೊಬ್ಬ.

ಯಶವಂತ ಮಾತಾಡಲಿಲ್ಲ. ಮತ್ತೊಮ್ಮೆ ಮೈಮೇಲಿನ ಧೂಳು. ಹುಲ್ಲುಕಡ್ಡಿಯನ್ನು ಝಾಡಿಸಿದ. ತನ್ನ ಕೈಚೀಲವನ್ನು ಅಲ್ಲಿಯೇ ಇಟ್ಟ.

ಒಮ್ಮೆಲೇ ಆ ಆಳುಗಳ ಸಂಗಡ ಕೆಲಸ ಶುರು ಮಾಡಿದ.

"ಅರೇ, ನೀ ಯಾರು? ಇಲ್ಲೇನು ಕೆಲಸ?" ಎಂದು ಒಂದಿಬ್ಬರು ಕೇಳಿದರು.

"ನಾನು ನಿಮಗೆ ಸಹಾಯ ಮಾಡುತ್ತೇನೆ. ನಾನೂ ಕೆಲಸ ಮಾಡುತ್ತೇನೆ."

"ಅರೆರೇ, ಬಾ ಹಾಗಾದರೆ ಈ ಗಳುಗಳನ್ನು ನಾಲ್ಕು ನಾಲ್ಕು ಸೇರಿಸಿ ಈ ಬಳ್ಳಿಯಿಂದ ಬಿಗಿದು ಕಟ್ಟು."

ಯಶವಂತ ತನ್ನ ಕೈಚೀಲವನ್ನು ಹೆಗಲಿಗೇರಿಸಿಕೊಂಡು ಕೆಲಸ ಶುರು ಮಾಡಿದ.

"ಆ ಚೀಲ, ನಿನ್ನ ಸಂಸಾರ, ಅಲ್ಲೇ ಇಡಿಸಿಕೋ, ನಾವೇನೂ ಕಳೂ ಮಾಡುದಿಲ್ಲ" ಎಂದನೊಬ್ಬ.

ಯಶವಂತ ನಕ್ಕ.

"ಕಳುವಂತಹದೇನೂ ಇಲ್ಲ ಅಲ್ಲಿ. ಒಂದು ಅಂಗಿ, ಒಂದು ಚೆಡ್ಡಿ, ಒಂದು ಟುವಾಲು."

"ದುಡ್ಡು ಎಷ್ಟಿದೆ?"

"ದುಡ್ಡು ಇಲ್ಲ ಗಿಡ್ಡೂ ಇಲ್ಲ."

"ಓಹೋ, ಹಾಗಾದರೆ ನೀನು ನಿನ್ನೆ ಟಿಕೇಟು ಇಲ್ದೆ ಆಟ ನೋಡಿದೆ. ಮೇನೇಜರಿಗೆ ಹೇಳ್ತೇನೆ. ಒಂದು ದಿವಸ ದುಡಿಬೇಕು" ಎಂದ ಒಬ್ಬ .

"ಒಂದು ದಿನ ಏನು ನಿಮ್ಮ ಜೊತೆಗೆ ಇದ್ದು ಬಿಡ್ತೇನೆ."

"ಇದೆಲ್ಲಿ ಗಿರಾಕಿಯಪ್ಪ, ನಿಂಗೆಲ್ಲಾಯ್ತೋ ತಮ್ಮ?"

ಯಶವಂತ ತನ್ನ ಊರನ್ನು ಹೇಳಲಿಲ್ಲ, ಬೇರೆಯದೇ ಊರು ಹೇಳಿದ. ಅಲ್ಲಿ ಯಾರ ಗುರುತೂ ಇಲ್ಲವೆಂದೂ ಆಟ ನೋಡುವ ಮನಸ್ಸಾಗಿ ಒಡೆಯರ ಸಂಗಡ ಬಂದಿದ್ದೆನೆಂದೂ ಅವರು ತನ್ನನ್ನು ಬಿಟ್ಟು ನಡೆದುಬಿಟ್ಟಿದ್ದಾರೆಂದೂ ಈಗ ತನಗೆ ಎಲ್ಲಿ ಹೋಗಬೇಕೆಂದೇ ತಿಳಿಯುತ್ತಿಲ್ಲವೆಂದೂ ಹೇಳಿದ.

"ಹಾಗದರೆ ನಮ್ಮ ಸಂಗಡವೇ ಬಾ."

"ಬಂದುಬಿಡುತ್ತೇನೆ. ಗೆಯ್ಯುವವರಿಗೆ ಎಲ್ಲಾದರೇನು."

"ಸಂಬಳ ಕೊಡುವ ಹಾಗಿಲ್ಲ. ನಮಗೇ ಸರಿಯಾಗಿ ಸಂಬಳ ಕೊಡುತ್ತಿಲ್ಲ." ಹೀಗೆ ಎನ್ನುತ್ತ ಕೆಲಸ

ಮಾಡುವವರು ಸಾಮಾನು ಸರಂಜಾಮುಗಳನ್ನು ಲಾರಿಗೆ ತುಂಬಿದರು. ಹಾಗೆಯೇ ಅವರೆಲ್ಲ ಉಪಹಾರ ಮಾಡಲು ಹೋದರು. ಯಶವಂತ ಅಲ್ಲೇ ಉಳಿದ.

"ಹೇ ಹುಡುಗ, ಬಾರಾ" ಎಂದರು ಅವರು.

"ಬೇಡ ಬೇಡ" ಎಂದ ಯಶವಂತ.

"ಚೋಟ ಉದ್ದ ಇದ್ದರು ಸೊಕ್ಕು ಎಷ್ಟು ನೋಡು" ಎಂದು ಒಬ್ಬ ಬಂದು ಎಳೆದುಕೊಂಡು ಹೋದ.

ಅವರೆಲ್ಲ ಮೋರೆ ತೊಳೆದರು. ಉಪಹಾರ ತೆಗೆದುಕೊಂಡರು. ಯಶವಂತನೂ ತೆಗೆದುಕೊಂಡ. "ದುಡ್ಡು ತೆಗೆ ತಮ್ಮ ಎಷ್ಟು ಅದೆ ನೋಡುವಾ?" ಎಂದನೊಬ್ಬ.

ಯಶವಂತ ತಲೆ ಕೆಳಗು ಹಾಕಿದ.

"ಹಂ ನಾ ಕೊಡ್ತೆ" ಎಂದ ಒಬ್ಬ.

ತಿರುಗಿ ಬಂದ ಮೇಲೆ ಅವರು ಕುರ್ಚಿಗಳನ್ನು ಲಾರಿಗೆ ತುಂಬಿದರು.

"ಎಲ್ಲಿಗೆ ಹೋಗೂದು?"

"ಸಿರ್ಸಿಗೆ."

"ಸಿರ್ಸಿಗೆ ನಾನೂ ಬರುತ್ತೇನೆ."

"ಜಾಗವಿಲ್ಲ ಬೇಡ."

"ದಮ್ಮಯ್ಯ ಬರ್‍ತೇನೆ. ಸಿರ್ಸಿಯಲ್ಲಿ ನನ್ನ ಬಿಟ್ಟುಬಿಡಿ."

ಮೇಳದ್ದು ಎರಡು ಲಾರಿಗಳಿದ್ದವು. ಒಂದರಲ್ಲಿ ಖುರ್ಚಿಗಳನ್ನು ತುಂಬುತ್ತಿದ್ದರು. ಇನ್ನೊಂದರಲ್ಲಿ ಟೆಂಟಿನ ಸಾಮಾನುಗಳೂ, ಕೂಲಿ ಆಳುಗಳೂ ಇರುತ್ತಿದ್ದರು. ನಂತರ ಸಾಗಾಣಿಕೆಗೆ ಬೇರೊಂದು ಟೆಂಪೋ ಇತ್ತು. ಟೆಂಪೋದಲ್ಲಿ ಅದು ಇದು ಮಾತುಕತೆ ಆಡುತ್ತ ಹಾಡುತ್ತ ಸಾಗಿದರು.

ಲಾರಿ ದೇವಿಮನೆ ಘಟ್ಟವನ್ನು ಹತ್ತುತ್ತಿತ್ತು. ಯಶವಂತನ ಮನಸ್ಸು ಬೇರೆಯದೇ ಚಿಂತಿಸುತ್ತಿತ್ತು. ತಾನು ಎಲ್ಲಿಗೆ ಹೋಗುತ್ತಿದ್ದೇನೆ ಎಂದು ಆತ ಭಯಗ್ರಸ್ಥನಾಗಲಿಲ್ಲ. ಬದಲಾಗಿ ಅವನಿಗೆ ಹಿಂದಿನ ದಿನದ ನೆನಪಾಗುತ್ತಿತ್ತು. ಇಂದು ತಾನು ಮನೆಗೆ ಹೋಗದ್ದು ತಿಳಿದು ಅತ್ತೆಗೆ ಕಂಗಾಲು ಆಗಬಹುದೇ? ಆಗದಿರುತ್ತದೆಯೇ. ಅವಳು ಎಷ್ಟು ದ್ವೇಷಿಸಿದರೂ ಅವಳು ನನ್ನ ಅತ್ತೆಯಲ್ಲವೇ?

ಹಾಗೆ ಎಣಿಸುತ್ತಿದ್ದಂತೆ ಅವಳ ಮೋರೆ ಮುಂದೆ ಬಂದು ನಿಲ್ಲುತ್ತಿತ್ತು.

ಅವಳು ಯಾವಾಗಲೂ ಮೋರೆ ಬಿಗಿದುಕೊಂಡೇ ಇರುತ್ತಿದ್ದಳು. ಅವಳ ಕಣ್ಣು ಸಣ್ಣದಾಗಿದ್ದವು. ಅವು ಪಿಳಿಪಿಳಿ ಹೊಳೆಯುತ್ತಿದ್ದವು. ಸಿಟ್ಟು ಒಂದಾಗ ಅವಳು ಕಣ್ಣೆವೆ ಹೊಡೆಯದೇ ದಿಟ್ಟಿಸು ತ್ತಿದ್ದಳು. ಆಗ ಅವಳ ಕಣ್ಣು ಗೋಲವಾಗಿರುತ್ತಿತ್ತು. ಅವಳ ಮೂಗು ಗಿಡ್ಡವಾಗಿ ಇದ್ದು ತುದಿ ಮೇಲ್ಗಡೆ ಬಾಗಿತ್ತು. ಮೇಲುತುಟಿ ತುಸು ಮೇಲೆ ಸರಿದಿದ್ದರಿಂದ ಹಲ್ಲು ಉದ್ದವಾಗಿ ಕಾಣುತ್ತಿತ್ತು. ಅಲ್ಲದೆ ನಗೆಯಾಡಿದಾಗ ಹಲ್ಲಿನ ನಿಜ ಹೆಚ್ಚುಪಾಲು ಕಾಣುತ್ತಿದ್ದಾದ್ದರಿಂದ ಯಶವಂತನಿಗೆ ಅವಳ ನಗೆ ಮನಸ್ಸಿಗೆ ಹಿಡಿಸುತ್ತಿರಲಿಲ್ಲ. ಆದರೆ ಮೈ ಕೈ ಪುಷ್ಟವಾಗಿದ್ದು ಆರೋಗ್ಯವಂತಳಾಗಿದ್ದಳು. ಮೇಲಿನಿಂದ ಕೆಳತನ ತೆಂಗಿನ ಮರದ ಹಾಗೆ ಒಂದೇ ರೀತಿಯ ಗಡುತರ ಇದ್ದಳು. ಅವಳು ಮೊದಮೊದಲು ತನ್ನನ್ನು ನಗೆಯಾಡಿ ಸೌಮ್ಯವಾಗಿ ಮಾತಾಡಿಸುತ್ತಿದ್ದಳು. ಕಾಲ ಕಳೆದಂತೆ ಅವಳ ಮೋರೆ ಬಿಗಿದುಕೊಳ್ಳುತ್ತ ಹೋಯಿತು.

'ಯಾವಾಗ ನೋಡಿದರೂ ಮೊಕ ಹೊಗೆಸಿಕೊಂಡು ಇರುತ್ತಾಳೆ' ಎಂದು ಜನ ಆಡಿಕೊಳ್ಳು ತ್ತಿದ್ದರು. ಅವಳು ಜಗಳಗಂಟಿ ಸ್ವಭಾವದವಳಾಗಿದ್ದಳಂತೆ. ಅವಳಿಂದಾಗಿಯೇ ಮಾವ ಪಾಲು ತೆಗೆದುಕೊಂಡನಂತೆ. ಅಂದರೆ ಅವರು ಅಣ್ಣ ತಮ್ಮ ಪಾಲಾಗಿದ್ದರಂತೆ. ಅವಳ ಮನೆಗೆ ಮಾವನ ಅಕ್ಕತಂಗಿಯರು ಯಾರೂ ಬರುತ್ತಿರಲಿಲ್ಲವಂತೆ. ಇವಳ ಇಂಥ ಸ್ವಭಾವ ಗೊತ್ತಿದ್ದವರೂ ಮಾವನಿಗೆ ತಿಳಿಹೇಳಿದರೂ ಅವಳ ಬೆಳ್ಳಗಿನ ಮೈಬಣ್ಣಕ್ಕೆ ಮರುಳಾಗಿ ಮದುವೆಯಾದ ಎಂದು ಅವನ ಅಕ್ಕತಂಗಿಯರು ಅಂದುಕೊಳ್ಳುತ್ತಿದ್ದರಂತೆ.

ಅದೇನೋ. ಮಾವನೂ ಅಂಥ ರೂಪವಂತನೇನೂ ಅಲ್ಲ. ಅವನೂ ಗುಮ್ಮನ ಗುಸುಕನ ಹಾಗೆ ಮುಖ ಬಿಗಿದುಕೊಂಡೇ ಇರುತ್ತಾನೆ. ತಾನು ಗಾಡಿ ಹೊಡೆಯುವಾಗಲೂ ಅವನು ಮಾತಾಡಿದ್ದು ಅಷ್ಟಕಷ್ಟೇ. ಸಾಂಬ, ಅವನೊಬ್ಬ ಅವ್ವನ ಬಾಲ ಬಡಕ. ನಿಜವಾಗಿ ತನ್ನ ಬಗ್ಗೆ ಬೇಸರಪಡುವವ ಳೆಂದರೆ ಪಾರ್ವತಿ.

ಅವಳಿಗೆ ಒಗಟೆಂದರೆ ಹುಚ್ಚು. ಒಗಟಿಗೇನೇ ಅವಳು ತನ್ನನ್ನು ಕಾಡಿಸುತ್ತಿದ್ದಳು. ತಾನು ಎಷ್ಟು ಸಲ ಒಗಟನ್ನು ಹೇಳದೆ ಅವಳನ್ನು ಗೋಳಿಗೆ ಗುರಿಮಾಡಿದ್ದೆ. ಅವಳ ರೂಪ ತುಸುಮಟ್ಟಿಗೆ ಅತ್ತೆಯ ಹಾಗೆ? ಆದರೆ ಸೌಮ್ಯ ಸ್ವಭಾವ. ಕಲಿಯುವುದರಲ್ಲಿ ದಡ್ಡಿ.

ಛೇ ! ತಾನು ಬರುವಾಗ ಅವಳಿಗೆ ಕೆಲವು ಒಗಟು ಹೇಳಿ ಬರಬೇಕಾಗಿತ್ತು.

"ಒಂಟಿ ಕಾಲಿನ ಕೊಕ್ಕರೆ. ತಲೆಯ ಮೇಲೆ ಸುತ್ತಲು ರೆಕ್ಕೆ, ಅದೇನು?"

"ಆಹಾ ! ಅದೆಂತಾದಪ ! ನೀ ಹೇಳು" ಎಂದು ವಿಸ್ಮಯಪಡುತ್ತಿದ್ದಳು.

"ತೆಂಗಿನ ಮರ."

"ಅರೇರೇರೆ ಹೌದು ಹೌದು" ಎಂದು ಕುಣಿಯುತ್ತಿದ್ದಳು.

ಅವನ ವಿಚಾರ ಲಹರಿ ತನ್ನ ಮನೆಯ ಕಡೆಗೆ ಹಾರುತ್ತಿತ್ತು.

ಈಗ ತಾನು ಎಲ್ಲಿ ಹೋದೆನೆಂದು ಅರಸಲು ಶುರು ಮಾಡುತ್ತಾರೆ. ಮನೆಗೆ ಸುದ್ದಿ ಹೋಗುತ್ತದೆ.

ಆಯ್ಯೋ ! ಅವ್ವ, ಆಕ್ಕ, ಅಪ್ಪ ಎಲ್ಲರೂ ಕಂಗಾಲು ಆಗುತ್ತಾರೆ. ಅವ್ವ ಗೋಳೊ ಅನ್ನದೇ ಇರುತ್ತಾಳೆಯೇ?

ಅವನಿಗೆ ಹಿಂದೆ ಗಡಿಯಾರದ ಹೊಡೆತ ತಿಂದು ನರುಳುತ್ತಿದ್ದಾಗ ಮೈಗೆ ಲೇಪ ಸವರಿ ಮುದ್ದು ಮಾಡಿದ ಅವ್ವನ ನೆನಪು ಗಾಢವಾಗಿ ಆವರಿಸಿತು.

'ಅವ್ವ ಲಕ್ಷಣವಂತೆ' ಎಂದು ಜನ ಅನ್ನುತ್ತಿದ್ದರು. ಅವಳ ಮೋರೆ ಚಂದ್ರನ ಹಾಗೆ ಗೋಲ ವಾಗಿತ್ತು. ಅಗಲವಾಗಿತ್ತು. ಕಣ್ಣು ಉದ್ದವಾಗಿದ್ದವು. ಹುಬ್ಬು ಮಾತ್ರ ತುಸು ಗಡುತರ ಇತ್ತು. ಹಲ್ಲು ಸಾಲುಗಟ್ಟಿ ಪಂಗ್ತಿಯಲ್ಲಿದ್ದವು. ಕೌಳ (ಎಲೆ ಅಡಿಕೆ) ಹಾಕಿ ಹಾಕಿ ಈಗೀಗ ತುಸು ಕಪ್ಪಾಗಿತ್ತು. ಅಷ್ಟು ಎತ್ತರವೂ ಅಲ್ಲದ ಗಿಡ್ಡವೂ ಅಲ್ಲದ ಅವಳನ್ನು ತಾನು ಅಪ್ಪಿಕೊಂಡರೆ ತನ್ನ ತಲೆ ಭುಜಕ್ಕೆ ತುಸು ಕೆಳಗೆ ಇರುತ್ತಿತ್ತು. ಅವಳು ತೆಳ್ಳಗಿದ್ದಳು. ಅವಳಿಗೆ ಸಿಟ್ಟು ಬಂದದ್ದೇ ತನಗೆ ತಿಳಿಯದು. ತನಗೆ ಶಾಲೆ ಬಿಡಿಸಬೇಕೆಂದು ಅಪ್ಪ ಹೇಳಿದಾಗ ಹಟಮಾಡಿ ನನ್ನನ್ನು ಶಾಲೆಗೆ ಕಳುಹಿಸಿದ್ದಳು.

ಅಂಥ ಅವ್ವ ಎಷ್ಟು ವ್ಯಥೆಪಡಲಿಕ್ಕಿಲ್ಲ! ತಾನು ತಪ್ಪು ಮಾಡಿದೆ.

ಅವಳು ಸೊಪ್ಪಿನ ಹೊರೆ ಹೊತ್ತುಕೊಂಡು ತನ್ನನ್ನೇ ನೆನೆದು ಬರುತ್ತಿರುವಂತೆ ಕಂಡು ಕಣ್ಣು ವ್ಯಥೆಯಿಂದ ತುಂಬಿ ಬಂತು.

ಛೇ ! ತಾನು ತಪ್ಪು ಮಾಡಿದೆ. ಈಗ ಅವಳಿಗೆ ಒಂದು ಪತ್ರ ಹಾಕಿಬಿಡುತ್ತೇನೆ. ಅವ್ವ ನೀವು ಯಾರೂ ವ್ಯಥೆಪಡಬೇಡಿ. ನಾನು ಸುಖವಾಗಿದ್ದೇನೆ. ಬೇಗ ಬಂದು ನಿನ್ನ ಕಾಣುತ್ತೇನೆ.....

ಯಶವಂತನ ಮನಸ್ಸು ತುಸು ಹಗುರಾಯಿತು. ತಟ್ಟನೆ ಅವನು ಅಹಾ, ಎಂದುಕೊಂಡ. ಅವನ ಕಣ್ಣೆದುರು ಶಾಲೆಯ ಹಿಂಬದಿಯ ಜೇಡಬಲೆ ವಿಶಾಲವಾಗಿ ಹರಡಿಕೊಂಡಂತೆ, ಮಂಜು ಹನಿಗಳು ದಾರ ಪೋಣಿಸಿದಂತೆ, ಸೂರ್ಯರಶ್ಮಿಯಿಂದಾಗಿ ಪ್ರತಿ ಮಣಿಯಲ್ಲಿ ಕಾಮನಬಿಲ್ಲು ತೂಗಿದಂತೆ ಕಂಡಿತು.

ದೇವಿಮನೆ ಘಟ್ಟವನ್ನು ಹತ್ತುತ್ತಿದ್ದ ಲಾರಿ ಜೋರಿನಿಂದ ದೊಡ್ಡ ಮುರ್ಕೆಯನ್ನು ತಿರುವಿತು. ಲಾರಿಯಲ್ಲಿದ್ದವರೆಲ್ಲ ಒಬ್ಬರ ಮೇಲೆ ಒಬ್ಬರು ಬಿದ್ದು ಹೋ ಎಂದು ಕೂಗಿದರು. ಯಶವಂತ ವಾಸ್ತವ ಲೋಕಕ್ಕೆ ಬಂದ.

"ತಥ್ ಇವರ! ಹೀಂಗ್ ದಾರಿ ಡೊಂಕು ಡೊಂಕು ಮಾಡುದಕ್ಕಿಂತ ನೆಟ್ಟಗೆ ಮಾಡಿದ್ದರೆ ಏನಾಗ್ತಿತ್ತು ರೋಗ" ಎಂದು ಒಬ್ಬ ಹೇಳಿದ.

"ಅರೆ ! ಹಾಗೆ ಮಾಡಿದ್ರೆ ಬಸ್ಸು ಹೇಗೆ ಹತ್ತುತ್ತದೆ? ಅದಕ್ಕೇ ಅಂಕುಡೊಂಕು ಹಾವು ಹರದ ಹಾಗೆ ಮಾಡುತ್ತಾರೆ. ಅದರಿಂದ ಯಾಂತ್ರಿಕ ಲಾಭವಾಗುತ್ತದೆ." ಎಂದು ಶಾಲೆಯಲ್ಲಿ ಹೇಳಿದ ಹಾಗೇ ಹೇಳಿದ.

ಓ ! ಓಹೋ ! ದೊಡ್ಡ ಮನಷ, ಯಂತ್ರಂತೆ ಮಂತ್ರಂತೆ, ನೋಡು ನಮ್ಮ ಜೊತೆಗೆ ಬಾ; ಮಣ್ಣು ತಿನ್ನಲಕ್ಕು ಯಂತ್ರ ಮಾಡ್ತ್ಯೋ, ಮಂತ್ರ ಮಾಡ್ತ್ಯೋ, ನೋಡ್ತೆ."

ಯಶವಂತನ ಲಕ್ಷ್ಯವನ್ನು ಮಾರ್ಗದ ಇಕ್ಕೆಲಗಳಲ್ಲಿರುವ ದೊಡ್ಡ ದೊಡ್ಡ ಮರಗಳು ಸೆಳೆದವು.

ಅಬ್ಬಬ್ಬ ಎಂತೆಂಥ ಮರವಪ್ಪ!

ತೆಕ್ಕೆ ಹಾಕಿದರೆ ನಾಲ್ಕು ಜನ ಬೇಕು ಅಪ್ಪಿಕೊಳ್ಳಲು! ಒಂದಕ್ಕಿಂತ ಒಂದು ಎತ್ತರ. ಎತ್ತರ ಬೆಳೆಯುವಲ್ಲಿ ಸ್ಪರ್ಧೆ ನಡೆದಂತಿದೆ.

'ಬೆಟ್ಟದಲ್ಲಿ ಯಾಕೆ ಮರಗಳು ಎತ್ತರ ಬೆಳೆಯುತ್ತವೆ? ಅವು ತಮಗೆ ಸೂರ್ಯನ ಬೆಳಕನ್ನು ಒದಗಿಸಿಕೊಳ್ಳಲು ಎತ್ತರಕ್ಕೆ ಎತ್ತರಕ್ಕೆ ಬೆಳೆಯುತ್ತವೆ' ಎಂದು ಮಾಸ್ತರರು ಶಾಲೆಯಲ್ಲಿ ಹೇಳಿದ್ದು ನೆನಪಿಗೆ ಬಂತು. ಬೆಳಕಿಗಾಗಿ ಸ್ಪರ್ಧೆ.

ಓ ಈ ಮರ ಯಾವುದು? ಹುಂ. ಇದು ಬಸರಿ ಮರ. ಅಪ್ಪ ಹೇಳಿರಲಿಲ್ಲವೇ, ಬಸರಿ ಮರದ ಎಲೆಯನ್ನು ತಿನ್ನಲು ಗಂಟಿ ಹಾತೊರೆಯುತ್ತದೆ ಎಂದು. ಗೊಬ್ಬರ ಮಾಡಲು ಸೊಪ್ಪನ್ನು ತಂದು ಕೊಟ್ಟಿಗೆಯಲ್ಲಿ ಹರಡಿದರೆ ಹರಡಿದ ತುಂಕೆಯನ್ನೆಲ್ಲ ತಿಂದುಬಿಡುತ್ತದಂತೆ. ಅದರಿಂದ ಯಾರೂ ಕಡಿಯದಿರಲಿ ಎಂದು 'ಬಸರಿ ಮರದ ಮೇಲೆ ದೆವ್ವ ಇರುತ್ತದೆ. ಎಂದು ಹೇಳುತ್ತಾರೆ' ಎಂದು ಅಪ್ಪ ಎಂದಿರಲಿಲ್ಲವೇ? ಅಪ್ಪನಿಗೆ ಅಂತಾದ್ದರಲ್ಲೆಲ್ಲ ಜೋರು ಧೈರ್ಯ.

'ಆಹಾ! ಈ ಮರ ಎಷ್ಟು ದೊಡ್ಡ, ಎಷ್ಟು ಗಡುತರ! ಎಷ್ಟು ಅಗಲದವರೆಗೆ ಹೆಣೆಗಳನ್ನು ಚಾಚಿದೆ. ಅರೆರೆರೇ ಎಷ್ಟೊಂದು ಹಕ್ಕಿಗಳು. ಇದು ಯಾವ ಮರ?

ಯಶವಂತ ತಲೆ ಕೆರೆದುಕೊಂಡ ಆದರೂ ನೆನಪಿಗೆ ಬರಲಿಲ್ಲ.

ಛೇ! ತನಗೆ ಇದೆಲ್ಲ ತಿಳಿಯುವುದೇ ಇಲ್ಲವಲ್ಲ. ತನಗೆ ತಿಳಿದಿರುವುದೆಷ್ಟು? ಕಾಸಿಗ, ಹೊನ್ನೆ, ಗೇರು, ಹಲಸು, ಚಂದ್ರಕಾಯಿ ಗಿಡ, ಬೂರಲು ಹತ್ತಿಮರ, ಹಾಯಗ, ಸಾಗವಾನಿ, ಬೈಣೆ, ಮತ್ತೆ ಮತ್ತೆ? ಇಷ್ಟೆ ತನಗೆ ಗೊತ್ತಿರುವಂತಹದು. ಊರಿನಲ್ಲಿದ್ದಾಗ ಅಪ್ಪನ ಸಂಗಡ ಬೆಟ್ಟಕ್ಕೆ ಹೋಗು ತ್ತಿದ್ದಾಗ ತಿಳಿದಷ್ಟು.

ಓ ಇದು ಸಾಗಡೆ ಮರ. ನಮ್ಮ ಊರಿನ ದಾರಿ ಪಕ್ಕದಲ್ಲಿ ಒಂದು ಮರವಿತ್ತು. ಎಷ್ಟು ದೊಡ್ಡ ಬೆಳೆದಿತ್ತು. ಚಳಿಗಾಲದಲ್ಲಿ ಅದರ ಬುಡದಲ್ಲಿ ದಪ್ಪವಾಗಿ ದರಕು ಬೀಳುತ್ತಿತ್ತು. ಆದರೆ ಸಾಗಡೆ ದರಕು ಗೊಬ್ಬರಕ್ಕೆ ಏನೇನೂ ಚಲೋ ಅಲ್ಲ. ಅದರ ಎಲೆ ದಪ್ಪವಾಗಿ ತೆಳು ರಟ್ಟಿನ ಹಾಗೆ

ಇರುವುದರಿಂದ ಅದು ಕೊಳೆತು ಗೊಬ್ಬರ ಆಗುವುದು ಬಹಳ ತಡವಾಗಿ. ಆದರೆ ಅದರ ದರಕನ್ನು ತೆಂಗಿನ ಮರದ ಬುಡಕ್ಕೆ ಹಾಕುತ್ತಾರೆ. ಗೊಬ್ಬರಕ್ಕೆ ಕಾಸಗನ ಮರದ ಸೊಪ್ಪು, ದರಕೇ ಶ್ರೇಷ್ಠ ಎಂದು ಅಪ್ಪ ಹೇಳುತ್ತಿದ್ದ. ಆ ಸಾಗಡೆ ಮರದ ಬುಡದಲ್ಲಿ ಒಂದು ದೊಡ್ಡ ಒರಲೆ ಹುತ್ತ ಇತ್ತು. ಜನ ಅದರ ಹತ್ತಿರವೇ ಸುಳಿಯುತ್ತಿರಲಿಲ್ಲ. ಹುತ್ತಿನಲ್ಲಿ ಹಾವು ಇದೆ ಎಂದು. ಆಹಾ! ಇದೇ ಇದೇ ಕೊಕ್ಕರಸನಬಳ್ಳಿ, ಮರಕ್ಕೆ ಹಬ್ಬಿಕೊಂಡಿದೆ. ಎಷ್ಟೊಂದೂ ಹೂ ಬಿಟ್ಟಿದೆ. ತುರಾಯಿ ಕಟ್ಟಿದಂತೆ ಗೊಂಚಲು ಗೊಂಚಲು, ಬಣ್ಣಬಣ್ಣದ್ದಲ್ಲವಾದರೂ ಚೆಂದ ಕಾಣುತ್ತದೆಯಪ್ಪ ಎಂದು ಕೊಳ್ಳುತ್ತಿದ್ದಂತೆ ಬೆಟ್ಟದ ಮಧ್ಯೆ ತೋರಣ ಆಕಾರದಲ್ಲಿ ಕಮಾನಾಗಿ ಕಟ್ಟಿದ ಒಂದು ಬೋರ್ಡು ಅವನ ಕಣ್ಣಿಗೆ ಬಿತ್ತು.

ಔಷಧಿ ಸಸ್ಯಗಳ ಸೌಂರಕ್ಷಣಾ ಕೇಂದ್ರ 'ಓಹೋ! ಇಲ್ಲಿ ಔಷಧಿ ಗಿಡ ಇವೆ.'

ಯಶವಂತ ತನ್ನಷ್ಟಕ್ಕೆ ಅಂದುಕೊಂಡ. ಎಂತೆಂಥ ದಡ್ಡರಿರುತ್ತಾರಪ್ಪಾ ತಪ್ಪು ಬರೆದಿದ್ದಾರೆ. 'ಸೌಂರಕ್ಷಣಾ' ಅಲ್ಲ ಅಲ್ಲ 'ಸಂರಕ್ಷಣಾ' ಎಂದು ಆಗಬೇಕು. ತನಗೆ ಖಾತ್ರಿ ಗೊತ್ತಿದೆ. ಮಾಸ್ತರು ನಮಗೆಲ್ಲ ಇಂಥದೇ ಅನೇಕ ಶಬ್ದಗಳನ್ನು ಉಕ್ತಲೇಖನ ಹಾಕುತ್ತಿದ್ದರು.

ಸಂರಕ್ಷಣೆ
ದ್ರೌಪದಿ
ಸಂತೋಷ
ಘರ್ಷಣೆ
ಕರ್ಣಾಟಕ
ಉಚ್ಚಾರ
ವಿದ್ಯಾರ್ಥಿ

ಹೀಗೆ ಎಷ್ಟೋ ಶಬ್ದಗಳನ್ನು ಕೊಟ್ಟು ಬರೆಯಲು ಹೇಳುತ್ತಿದ್ದರು. ತಾವು ಸೌಂರಕ್ಷಣೆ, ದ್ರೌಪತಿ, ಸಂತೋಶ, ಗರ್ಷಣೆ, ಕರ್ನಾಟಕ, ಉಚ್ಛಾರ, ವಿಧ್ಯಾರ್ತಿ ಇತ್ಯಾದಿ ತಪ್ಪು ಬರೆಯುತ್ತಿದ್ದೆವು. ಮಾಸ್ತರು ಪಾಟಿ ನೋಡಿ ತಪ್ಪನ್ನು ಗುರುತಿಸುತ್ತಿದ್ದರು. ಅದನ್ನು ಬೋರ್ಡಿನ ಮೇಲೆ ದುಂಡಗೆ ಬರೆದು ಹತ್ತತ್ತು ಸಲ ಬರೆಯಿರಿ ಮಕ್ಕಳೇ ಎನ್ನುತ್ತಿದ್ದರು.

ಇವರಿಗೆ ಬರೆಯಲು ಬರದಿದ್ದರೆ ಯಾಕಪ್ಪ ಅಷ್ಟು ಧಿಮಾಕು? 'ಮದ್ದಿನ ಗಿಡಗಳ ತೋಟ' ಎಂದು ಬರೆದರೆ ಆಗುತ್ತಿರಲಿಲ್ಲವೇ? ತನ್ನ ಅವ್ವ ಹಾಗೇ ಹೇಳುತ್ತಿದ್ದಳು. 'ಅದೆಂತಕೆ ನೆಡ್ತೆ ಅವ್ವ' ಎಂದರೆ ಅದು 'ಮದ್ದಿನ ಗಿಡ ಮಗಾ' ಎನ್ನುತ್ತಿದ್ದಳು.

ಅವ್ವನಿಗೆ ಸುಮಾರು ಮದ್ದು ಗೊತ್ತಿತ್ತು. ಅಪ್ಪ 'ತನಗೆ' ಉಂಡಂದೇ ಕರಗಲಿಲ್ಲ ಎಂದರೆ ಒಂದು ಶುಂಠಿ ಬೇರು ತಂದು ಹಸಿ ಶುಂಠಿ ಕಷಾಯ ಮಾಡಿ ಕೊಡ್ತೆ ಅನ್ನುತ್ತಿದ್ದಳು. ಒಂದೊಂದು ದಿನ ಅವ್ವ ಮಾಡಿದ ತಂಬಳಿ 'ಘಮ ಘಮ' ಸುವಾಸನೆ ಬರುತ್ತಿತ್ತು. 'ಇದೇನು ಅವ್ವ' ಎಂದರೆ ಇದು

ಅಂಬೆಕೊಂಬಿನ ತಂಬಳಿ ಎನ್ನುತ್ತಿದ್ದಳು. ತನಗಾಗಲೀ ಅಕ್ಕನಿಗಾಗಲೀ ತಮ್ಮನಿಗಾಗಲೀ ಥಂಡಿ ಆದರೆ ಸಂಬಾರಸೊಪ್ಪಿನ ಎಲೆಯನ್ನು ಬಿಸಿ ಮಾಡಿ ಕುಂಕುಮ ನೆತ್ತಿಗೆ ಹಾಕಿ ಆ ಎಲೆಯನ್ನು ಕುಂಕುಮದ ಮೇಲೆ ಇಟ್ಟು ಅರಿವೆ ಕಟ್ಟಿಬಿಡುತ್ತಿದ್ದಳು. ಒಂದು ಸಲವಂತೂ ಅಕ್ಕನ ಕಾಲು ಬಿದ್ದು ಪೆಟ್ಟಾಗಿತ್ತು. ಕಲ್ಲು ಜಜ್ಜಿದಲ್ಲಿ ಹೊಂಡ ಬಿದ್ದು ರಸಿಕೆ ಆಗಿ ತುಂಬಿಬಿಟ್ಟಿತ್ತು. ಅವ್ವ ಬೇಣದಲ್ಲಿ ಬೆಳೆದ 'ಮದ್ದ ರಸ'ದ ಗಿಡದ ತೊಗಟೆಯನ್ನು ಕೆತ್ತಿ ತಂದು ಅದನ್ನು ಒಲೆಯ ಮೇಲಿಟ್ಟು ಬಂಡಿಯಲ್ಲಿ ಕತ್ತುವ ಹಾಗೆ ಹುರಿದು, ಹುಡಿ ಮಾಡಿ ತುಸು ತೆಂಗಿನ ಎಣ್ಣೆ ಬೆರೆಸಿ ಆ ಗಾಯಕ್ಕೆ ಹಾಕಿ ಚೊಕ್ಕಾದ ಸೀರೆ ಚಂಪೆಯಿಂದ ಕಟ್ಟಿದ್ದಳು. ಮೂರು ನಾಲ್ಕು ದಿನಕ್ಕೆ ಗಾಯ ಒಣಗಿ ಗುಣವಾಗಿತ್ತು.

ಯಶವಂತನಿಗೆ ನಗೆ ಬಂತು.

ತಾನಾಗಲಿ, ತಮ್ಮನಾಗಲಿ, ಅಕ್ಕನಾಗಲಿ ಹೊಟ್ಟೆ ಕಚ್ಚುತ್ತದೆ ಎಂದರೆ ಸಾಕು. ಗದ್ನಕಾಯಿ ತೇಯ್ದು ಎಲೆಯಲ್ಲಿ ಒರಸಿ ನಾಲಿಗೆಯಲ್ಲಿ ನೆಕ್ಕಿ ಮಕ್ಕಳೇ ಎನ್ನುತ್ತಿದ್ದಳು. ಅಯ್ಯಯ್ಯ ಗೋರಾಷ್ಟ ಕಹಿ! "ತಿನ್ನಿ ಮಕ್ಕಳೇ ನಾಲಿಗೆಗೆ ಕಹಿ ಉದರಕ್ಕೆ ಸಿಹಿ" ಎನ್ನುತ್ತಿದ್ದಳು.

ಅವಳೇನೂ ಕಲಿತವಳಲ್ಲ. ಆದರೆ ಇಂಥ ಮಾತುಗಳೆಲ್ಲ ಎಷ್ಟೋ ಬರುತ್ತಿದ್ದವು ಅವಳಿಗೆ.

"ಅರೆರೇ, ಅಲ್ನೋಡಿ ಹಂದಿ ಹಂದಿ ಹಿಂಡು" ಎಂದು ಉಳಿದವರು ಬೊಬ್ಬೆ ಹೊಡೆದರು.

ಯಶವಂತ "ಎಲ್ಲಿ ಎಲ್ಲಿ" ಎಂದು ಮೋರೆ ತಿರುವಿದ.

"ಅದಲ, ಅಕೋ ಅಲ್ಲಿ" ಎಂದು ಒಬ್ಬ ಬೊಟ್ಟು ಮಾಡಿ ತೋರಿಸಿದ.

ಹೌದು ಮೂರು ಹಂದಿಗಳು. ಒಂದು ದೊಡ್ಡದು ಎರಡು ಸಣ್ಣದು. ಮರಿಗಳಿರಬೇಕು. ಸೊಂ ಸೊಂ ಅಂತ ಹಿಂಡು ಮುರಿದುಕೊಳ್ಳುತ್ತ ಓಡಿ ಕಣ್ಮರೆಯಾಯಿತು.

"ನೋಡು ಅದರ ಸೊಕ್ಕು ಯಾರೂ ಹೊಡೆದೇ ಬಿಟ್ಟಿದ್ದು ಸಾಕು ಮಾರಾಯ" ಎಂದನೊಬ್ಬ.

"ಹಾಂಗೆಲ್ಲ ಹೊಡೆದರೆ ಫಾರೆಸ್ಟ್ ಖಾತೆಯವರು ಕೇಸು ಹಾಕ್ತಾರೆ, ಬಲ್ಯಾ?" ಎಂದನೊಬ್ಬ.

"ಅರೆ ಯಾಕೆ?"

"ಯಾಕೆ ಅಂದರೆ? ಹೀಂಗೆ ಬೇಕ ಬೇಕಾದವರಿಗೆ ಹೊಡೆಯಲು ಬಿಟ್ರೆ ಎಲ್ಲರೂ ಬೇಟೆ ಆಡಿ ಹಂದಿ ಮಿಗ, ಮೊಲ, ಕಾಡುಕೋಣ ಎಲ್ಲಾ ನಾಶಮಾಡಿಬಿಡೋದಿಲ್ವ? ಹೊಡೂದು ಮಾಂಯ್ಸ (ಮಾಂಸ) ಮಾರೂದು, ಚರ್ಮ ಮಾರೂದು ಮಾಡಿ ಸತ್ಯನಾಶ ಮಾಡಿಬಿಡತ್ರು, ಅದಕ್ಕೆ ಸರಕಾರ ಕಾವಲು ಇಟ್ಟಿದೆ."

"ನಾಶ ಆದರೆ ನಮಗೇನೊ?"

"ನಮಗೇನು? ನಮಗೇನು ಅಂದ್ರೆ? ಅವ್ಕೂ ನಮ್ಮಾಂಗೆ ಬದ್ಕು ಹಕ್ಕಿಲ್ವ? ನಾವೊಬ್ಬರೇ ಬದುಕಿದ್ರೆ ಸಾಕಾ?" ಎಂದು ಮತ್ತೊಬ್ಬನೆಂದ.

"ಹೌದು ನಿಸರ್ಗದ ಜೀವಚಕ್ರ ಅದು. ಒಂದು ಪ್ರಾಣಿ ಅವಲಂಬಿಸಿ ಮತ್ತೊಂದು ಪ್ರಾಣಿ ಬದುಕದೆ. ಹುಲ್ಲನ್ನು ಹಸು ತಿಂತದೆ. ಹಸು ಹಾಲು ಹೊಡ್ತದೆ. ಹಾಲನ್ನು ನಾವು ಕುಡಿತೇವೆ. ಮಿಕದ ಮಾಂಸ ತಿಂತೇವೆ. ಹಕ್ಕಿಗಳು ಹುಳಹುಪ್ಪಡಿಗಳನ್ನು ತಿಂದು ನಾಶಮಾಡುತ್ತವೆ. ದುಂಬಿಗಳು ಸಸ್ಯಗಳ ಬೀಜ ಪ್ರಸಾರ ಮಾಡುತ್ತವೆ. ಹೀಗೆ ಹೀಗೆ" ಶಾಲೆಯಲ್ಲಿ ಕಲಿತ ವಿಜ್ಞಾನದ ಪಾಠದ ನೆನಪಾಗಿತ್ತು ಯಶವಂತನಿಗೆ.

"ನೋಡಿದ್ರಾ? ಹುಡುಗ ಜೋರವನೆಯೊ" ಎಂದು ಉಳಿದವರು ಮೆಚ್ಚುಗೆ ವ್ಯಕ್ತಮಾಡಿದರು.

ಮುಂದೆ ಚಿಗರೆ, ಕಾಡುಕೋಳೀ, ಮರದ ಮೇಲೆ ಕೋಡ ಮತ್ತು ಮಂಗಗಳನ್ನೂ ಯಶವಂತ ನೋಡಿದ.

ಒಂದಕ್ಕಿಂತ ಒಂದು ಎತ್ತರವಾದಂತಿದ್ದ ಪರ್ವತಗಳ ಸಾಲು. ಹಸಿರು ಕಾರುವ ಗಿಡಮರಗಳು. ಹಾಗೆ ಹತ್ತಾರು ಗುಡ್ಡ ಪರ್ವತಗಳ ಎರಡು ಸಾಲಿನ ಮಧ್ಯೆ ಹರಿಯುವ ನದಿ. ಅಗೋಚರ ಎನ್ನುವಷ್ಟು ಆಳ. ಅದನ್ನು 'ದೇವಿಮನೆ ಕೊಳ್ಳ' ಎನ್ನುತ್ತಾರೆಂದು ಅಲ್ಲಿದ್ದವರು ಹೇಳಿದರು. ಕಾರಿನ ಮೇಲೆ ಬಂದ ಕೆಲವು ಗಂಡಸರು ಹೆಂಗಸರು ಮಕ್ಕಳು ರಸ್ತೆಯ ಬದಿಯಲ್ಲಿ ಎತ್ತರದಲ್ಲಿ ನಿಂತಿದ್ದರು. ಕ್ಯಾಮರಾದಿಂದ ಫೋಟೋ ತೆಗೆದುಕೊಳ್ಳುತ್ತಿದ್ದರು.

ಯಶವಂತನಿಗೊ ವಿಸ್ಮಯ ನೋಟ. ತುಸುಹೊತ್ತು ನಿಂತು ನೋಡಬೇಕೆಂದು ಅವನಿಗೆ ಅನ್ನಿಸಿತು. ಆದರೆ ಲಾರಿ ನಿಲ್ಲಲಿಲ್ಲ. ಸಿಕ್ಕಿದಷ್ಟನ್ನೇ ಕಾತುರದಿಂದ ಯಶವಂತ ಮನಸ್ಸಿನಲ್ಲಿ ತುಂಬಿಕೊಂಡ ಅಲ್ಲಿ ಬಂದ ಪ್ರವಾಸಿಗರು ಕ್ಯಾಮರಾದಲ್ಲಿ ತುಂಬಿಕೊಳ್ಳುವಂತೆ.

ಮುಂದೆ ದಟ್ಟವಾದ ಅರಣ್ಯ ಕಳೆಯುತ್ತಾ ಬಂತು. ಅಲ್ಲಲ್ಲಿ ಗದ್ದೆ, ಮನೆಗಳೂ ಕಾಣಿಸಿಕೊಂಡವು. ಗಾಳಿ ಬೀಸುತ್ತಿತ್ತು. ಕುಳಿತವರು ಆಗಲೇ ನಿದ್ದೆಯಿಂದ ತೂಕಡಿಸುತ್ತಿದ್ದರು.

ಯಶವಂತನೂ ನಿದ್ದೆ ಹೋದ.

ಯಶವಂತ ಎಚ್ಚರವಾದಾಗ ಶಿರ್ಸಿಗೆ ಬಂದು ತಲುಪಿದ್ದ.

* * *

ಬಡಿಸುತ್ತ ಬಂದ ಅಡಿಗೆ ಭಟ್ಟನ ಸೆಟ್ಟುಗ ಜೋನಿಯನ್ನು ನೋಡಿದೊಡನೆ ನಿಂತುಬಿಟ್ಟಿತು.

"ಜೋನಿ ನೀನು? ನೀನು ಇಲ್ಲಿ ಯಾಕೆ ಕುಳಿತಿದ್ದಿ? ನಿನ್ನ ಸ್ಥಾನ ಯಾವುದು? ಮಾನ ಯಾವುದು?"

ಭಟ್ಟರ ಮಾತು ಕೇಳುವುದೆಂದರೆ ಜೋನಿಗೆ ಬಲು ಮೋಜು. ಅವರ ಶಬ್ದ ಅಕ್ಷರವನ್ನು ಬಿಡಿಬಿಡಿಸಿ ಮಾತಾಡುತ್ತಾರೆ. ಅಲ್ಲದೆ ವ್ಯಾಕರಣಬದ್ಧವಾಗಿ ಮಾತಾಡುತ್ತಾರೆ. ಆದ್ದರಿಂದ ಭಟ್ಟರನ್ನು ಮಾತಾಡಿಸುವ ಯಾವ ಅವಕಾಶವನ್ನು ಅವನು ಕಳೆದುಕೊಳ್ಳುವುದಿಲ್ಲ.

"ಭಟ್ರೆ ನನ್ನ ಸ್ಥಾನಮಾನ ಈಗ ಏರಿದೆ. ನಿಮ್ಗೆ ಗೊತ್ತಾಗಲಿಲ್ವ ಅದು? ಯಜಮಾನರು ಹೇಳಲಿಲ್ವಾ?"

"ಏನದು? ಯಾವನೊ ಅವನು ನಿನ್ನ ಸ್ಥಾನಮಾನ ಏರಿಸಿದವನು?"

"ಮೇಳದ ಯಜಮಾನರೇ ಭಟ್ರೆ."

"ಏನು ಕತೆ?" ಎಂದುಕೊಳ್ಳುತ್ತ ಮುಂದೆ ಬಡಿಸಿಕೊಳ್ಳುತ್ತ ಹೋದರು. ಮತ್ತೆ ತಿರುಗೆ ಬರುವಾಗ "ಏನು ಅದು?"

"ನಿಮಗೆ ಸಹಾಯಕ ಅಂತೆ ನಾನು, ಅಡಿಗೆಗೆ ನೀರು ತಂದು ಕೊಡೂದು."

"ಏನು ಯಾರು ಹೇಳಿದರು ಇದನ್ನು? ನೀನು ಮೊದಲೇ ಕಿಸ್ತಾರರವನು."

"ಕಿಸ್ತಾರ ಅಲ್ಲ ಭಟ್ಟರೆ, ಕ್ರಿಶ್ಚನ್."

"ಏನೇ ಹಾಳುಬಿದ್ದು ಹೋಗಲಿ. ಕಿಸ್ತಾರರಲ್ಲಿ ಜಾತಿ ಸಹ ಇಲ್ಲವಂತಲ್ಲ? ಮಾರ್ಯಾದೆ ಗೇಡಿಗಳು. ನೀನು ಮುಟ್ಟಿದ ನೀರಿನಲ್ಲಿ ನಾನು ಬ್ರಾಹ್ಮಣರಿಗೆ ಅಡಿಗೆ ಮಾಡಬೇಕೋ?"

"ಹಾಗಾದ್ರೆ ನಾನೇ ಅದನ್ನೂ ಮಾಡ್ತೇನೆ."

"ಏನೆಂದೆ? ಅಷ್ಟು ತಯಾರಾದೆಯಾ ಹಾದಿಯಲ್ಲಿ ಬಿದ್ದವನೆ, ಪರದೇಶಿ?" ಎಂದು ಅನ್ನದ ಸೆಟಗದಲ್ಲಿ ಹೊಡೆಯುವಂತೆ ಅಭಿನಯಿಸಿ ಮುಂದೆ ಹೋದರು. ಪಕ್ಕದಲ್ಲಿದ್ದವರೂ ಅವನೊಡನೆ ನಗೆಯಾಡಿದರು.

ಜೋನಿ ಟೆಂಟಿನ ಕೆಲಸಕ್ಕೂ ಹೋಗುತ್ತಿದ್ದ. ಪ್ರಚಾರ ಮಾಡುವವರು 'ಜೋನಿ, ಬಗೇಲಿ ಪ್ರಚಾರಕ್ಕೆ ಹೋಗು' ಎನ್ನುತ್ತಿದ್ದರು. ಇಷ್ಟೆಲ್ಲ ಮಾಡಿದ ಮೇಲೂ ಆಟ ನೋಡುವ ಹುಚ್ಚು ಅವನನ್ನು ಬಿಡುತ್ತಿರಲಿಲ್ಲ.

ವಿಶೇಷವಾಗಿ ಬಾಲವೇಷ ಅವನ ಮನಸ್ಸನ್ನು ಸೆಳೆದಿತ್ತು.

ಬಾಲವೇಷ ಮಾಡುವವರು ಇಬ್ಬರೂ ಜೋನಿಯ ವಯಸ್ಸಿನವರೇ. ಚೆನ್ನಾಗಿ ಕುಣಿಯುತ್ತಿದ್ದರು ಕೂಡ. ಅಂದವಾಗಿ ಮುಖವರ್ಣಿಕೆ ಬರೆದಿರುತ್ತಿದ್ದರು. ಬಣ್ಣದ ಬೆಡಗಿನಲ್ಲಿ ಹಗಲಿಗೆ ಕಾಣುವ ಅವರ ಮುಖದ ಅಡ್ಡ ತಿಡ್ಡಗಳು ಕಾಣುತ್ತಿರಲಿಲ್ಲ. ಕಣ್ಣಿಗೆ ಕಾಡಿಗೆ, ತುಟಿಗೆ ಕೆಂಪು, ಹಣೆಗೆ ತಿಲಕ,

ತಲೆಗೆ ಚಿಕ್ಕದಾಗಿ ಕಟ್ಟಿದ ಪೂಗಡೆ, ಎದೆಗೆ ಎದೆಹಾರ, ಪಳಪಳನೆ ಹೊಳೆವ ಗಾಜಿನ ನಕ್ಷತ್ರದಂಥ ಪದಕ, ಕಿವಿಗೆ ಕರ್ಣಾಭರಣ, ತೋಳಿಗೆ ಭುಜಕೀರ್ತಿ, ಮುಂದೆ ಇಳಿಬಿಟ್ಟ ಹರಳುಗಟ್ಟಿದ ವಸ್ತ್ರ. ಕಾಲಿಗೆ ಕಿರುಗೆಜ್ಜೆ, ಕೈಯಲ್ಲಿ ಬಣ್ಣದ ಕೋಲು.

ಅವರು ಹೆಜ್ಜೆ ಹಾಕಿ ಕುಣಿದರೆ ಮುದ್ದಾಗಿ ಕಾಣುತ್ತಿದ್ದರು.

ಗೋಪಾಲವೇಷ ಮುಗಿದೊಡನೆ ಜೋನಿ ಥಿಯೇಟರಿನ ಹೊರಗೆ ದೂರ ಜನ ಕಾಣದಲ್ಲಿ ಹೋಗುತ್ತಿದ್ದ. ಮೃದಂಗ ಚಂಡೆಗಳ ಬಡಿತಕ್ಕೆ ಹೆಜ್ಜೆ ಹಾಕಿ ಕುಣಿಯಲು ಪ್ರಯತ್ನಿಸುತ್ತಿದ್ದ. ಹೀಗೆ ಕುಣಿಕುಣಿದು ದಣಿವಾಗಿ ಬಂದು ಮಲಗುತ್ತಿದ್ದ. ಇಲ್ಲವೇ ಕೆಲಹೊತ್ತು ಆಟ ನೋಡುತ್ತಿದ್ದ.

ಹಗಲು ಹೊತ್ತು ಜೋನಿಗೆ ಸೌಡಿ ಸಿಕ್ಕುತ್ತಿರಲಿಲ್ಲ. ಊರಿಂದೂರಿಗೆ ತಿರುಗಾಟ. ಅಲ್ಲಿ ಟೆಂಟ್ ಕಟ್ಟುವುದರಲ್ಲಿ ಸಹಾಯ, ಪ್ರಚಾರಕ್ಕೆ ಹೋಗುವುದು, ಒಂದೊಂದು ಸಲ ಅಡಿಗೆಭಟ್ಟರೂ ಕೈ ತೊಳೆಯುವ ನೀರು ತರಲು ಹೇಳುತ್ತಿದ್ದರು.

ಅಡಿಗೆಭಟ್ಟರೆಂದರೆ ಮೇಳದ ಬಾಣಸಿಗ. ಯಾವ ಊರಿಗೆ ಟೆಂಟು ಹೋದರೂ ಒಂದು ದೇವಸ್ಥಾನದ ಜಗಲಿಯೋ, ಧರ್ಮಶಾಲೆಯೊ ಎಂದು ಹುಡುಕಿ ಅಲ್ಲಿ ಅಡಿಗೆ ಸಿದ್ಧಪಡಿಸು ತ್ತಿದ್ದರು. ಮೇಳದವರಿಗೆಲ್ಲ ಅಲ್ಲಿಯೇ ಊಟ ಉಪಹಾರದ ತಯಾರಿ.

ಎಷ್ಟೋ ಸಲ ಮೇಳದ ಭಾಗ್ವತರು, ಮುಖ್ಯ ವೇಷಾಧಾರಿಗಳು ಬೇರೆ ಕಡೆ ಅವರ ಇಷ್ಟಮಿತ್ರರ ಕಡೆ ಹೋಗುವುದುಂಟು. ಉಳಿದವರೆಲ್ಲ ಅಲ್ಲಿಯೇ ಊಟ ಮಾಡುವುದೇ ರೂಢಿ. ಅದಕ್ಕಾಗೇ ಮೂರು ಜನ ಭಟ್ಟರು ಇದ್ದಾರೆ.

ಭಟ್ಟರೊಡನೆ ಮಾತಾಡುವ ಸಂದರ್ಭವನ್ನು ಆತ ತಪ್ಪಿಸಿಕೊಳ್ಳುತ್ತಿರಲಿಲ್ಲ.

"ಜೋನಿ, ನಿಮ್ಮ ಕಿಸ್ತಾರರಲ್ಲಿ."

"ಕಿಸ್ತಾರ ಅಲ್ಲ ಭಟ್ಟರೆ ಕ್ರಿಶ್ಚನ್ ಹೇಳಿ."

ಅವರಿಗೆ ಸರಿಯಾಗಿ ನಾಲಿಗೆ ತಿರುಗುತ್ತಿರಲಿಲ್ಲ.

"ಎಂಥ ಸುಟ್ಟದ್ದೊ."

"ಹೇಳಿ ಭಟ್ಟರೆ."

"ನಿಮ್ಮ ಕಿಸ್ತಾರರಲ್ಲಿ ನನಗೆ ಒಂದು ಹೆಣ್ಣು ಹುಡುಕಿ ಕೊಡು ನೋಡುವಾ, ನನಗೆ ಮದುವೆ ಆಗಬೇಕೆಂದು."

"ಮದುವೆ ಅಲ್ಲ ಭಟ್ಟರೆ, ಕಲ್ಯಾಣ ಅನ್ನಿ."

"ಯಾವುದಾದರೂ ಸರಿ. ಒಂದು ಚಲೋ ಹೆಣ್ಣು ಆಗಬೇಕು, ನೋಡು. ಗಟ್ಟಿಮುಟ್ಟಾಗಿ ಇರಬೇಕು."

"ಸುಮಾರು ಎಂಬತ್ತು ವರ್ಷ ಎಳೆಯದಾಗಬೌದಾ ಭಟ್ರೆ."

"ಎಲಾ ಎಲಾ ಹಾಳಬಿದ್ದವನೆ, ಎಂಬತ್ತು ವರ್ಷ, ನಾನು ಏನು ಮುದುಕನಾ?"

"ಮುದುಕ ಅಲ್ಲ ಭಟ್ಟರೆ, ವೃದ್ಧ ಅನ್ನಿ."

"ಹುಂ ಅಂಥ ವೃದ್ಧನಾಗಿದ್ದೇನೆಯೇ? ಏನೇ ಇರಲಿ, ಹದಿನೆಂಟು ವರ್ಷ."

"ವರ್ಷ ಅಲ್ಲ ಭಟ್ಟರೆ ಸಂವತ್ಸರ ಅನ್ನಿ."

"ಎಲಾ ಪೋರಾ ಎಲ್ಲಾ ಆಟದವರ ಭಾಷೆ ಕಲಿತು ಬಿಟ್ಟಿರುವಿಯಲ್ಲಾ."

"ಮಾತಾಡುತ್ತ ಅಲ್ಲ ಭಟ್ಟರೆ, ಸಂವಾದ."

ಭಟ್ಟರು ಸುಳ್ಳೆ ಸಿಟ್ಟು ತೋರಿಸಿ, "ಅನ್ನ ಕರಿಗಿ ಹೋಗಬಹುದು ಮಾರಾಯ" ಎಂದು ಹೋಗುತ್ತಿದ್ದರು.

ಇನ್ನೊಂದು ದಿವಸ ಊಟಕ್ಕೆ ಕುಳಿತಾಗ ಮುಖ್ಯ ವೇಷಧಾರಿಯೊಡನೆ ಭಟ್ಟರು,

"ರಾಮಭಟ್ಟರೆ, ನಮ್ಮ ಜೋನಿಗೆ ಒಂದು ವೇಷ ಯಾಕೆ ಕೊಡಬಾರದು? ಫಸ್ಟ್ ಕ್ಲಾಸ್ ಮಾತಾಡ್ತಾನೆ ನೋಡಿ." ಎಂದರು.

ಎಲ್ಲರೂ ಗಿಸ್ ಎಂದು ನಗೆಯಾಡಿದರು.

"ಟೆಂಟ್ ಕಟ್ಟುವವನಿಗೆ ಏನು ಪಾರ್ಟು?"

"ಭಟ್ರೆ ಕೊಡ್ವ, ಅದಕ್ಕೆ ಒಂದು ಕೆಲ್ಸ ಮಾಡಬೇಕು. ನನ್ನ ಸೇವೆ ಮಾಡಬೇಕು ಅವ."

"ಎಂಥಾ ಸೇವೇನೋ?"

"ಈಗಂತೂ ತುಂಬಾ ಸೆಖೆ. ರಂಗಸ್ಥಳಕ್ಕೆ ಹೋಗಿಬಂದ ಕೂಡ್ಲೆ ಉರಿ. ನನಗೆ ಗಾಳಿ ಹಾಕಬೇಕು."

"ಆದೀತು ಆದೀತು." ಎನ್ನುತ್ತ.

"ಹಾಗಾದರೆ ಪಾರ್ಟು ಮಳೆಗಾಲದಲ್ಲೋ?" ಎಂದರು ತಮಾಷೆಗೆ.

ಮತ್ತೊಮ್ಮೆ ಎಲ್ಲರೂ ನಗೆಯಾಡಿದರು.

ಭಟ್ಟರು ತಮಾಷೆಗೇ ಈ ಮಾತು ಹೇಳಿದ್ದರು. ಆದರೆ ಜೋನಿಗೆ ಆನಂದವೋ ಆನಂದ. ಸ್ವರ್ಗಕ್ಕೆ ಏರು ಏಣಿಯ ಮೊದಲ ಮೆಟ್ಟಿಲು ಏರಿದಂತೆ.

ರಾತ್ರಿ ರಾಮಭಟ್ಟರು ರಂಗಪ್ರವೇಶ ಮಾಡಿ ಭರ್ಜರಿ ಕುಣಿದರು. ಅವರ ದೃಶ್ಯ ಮುಗಿದೊಡನೆ ಚೌಕಿಗೆ ಹೋದರು. ಉಸ್ ಉಸ್ ಎಂದು ಉಸಿರು ಬಿಡುತ್ತಿದ್ದರು.

ಜೋನಿ ಬೀಸಣಿಗೆ ಹಿಡಿದು ಗಾಳಿ ಹಾಕಲು ಸುರು ಮಾಡೇಬಿಟ್ಟ.

"ನೋಡಿ ಭಟ್ಟರೆ ನಿಮ್ಮ ಹನುಮಂತ ಬಂದುಬಿಟ್ಟ" ಎಂದರು ಯಾರೋ.

ಎಲ್ಲರೂ ಜೋನಿ ಕಡೆ ತಿರುಗಿ ಅಡಿಗೆಭಟ್ಟರ ಸಂಭಾಷಣೆಯನ್ನು ನೆನೆದುಕೊಂಡು ನಕ್ಕರು. ಜೋನಿಗೂ ಅದು ಅರ್ಥವಾಯಿತು. ರಾಮನ ಬಂಟ ಹನುಮಂತ. ರಾಮಭಟ್ಟರ ಹೆಸರು ರಾಮನಲ್ಲವೇ? ಅವನು ಪ್ರತಿಕ್ರಿಯಿಸಲಿಲ್ಲ.

ಈಗ ಅವನು ರಾತ್ರಿ ಕುಣಿಯುವ ಅಭ್ಯಾಸಕ್ಕೂ ಹೋಗಲಾಗಲಿಲ್ಲ. ರಾಮಭಟ್ಟರ ದೃಶ್ಯ ಮುಗಿದೊಡನೆ ಆತ ಇರಬೇಕಿತ್ತು ಗಾಳಿ ಹಾಕಲು. ಅದಿಲ್ಲದಿದ್ದರೂ ಅವರಿಗೆ ಆಗಾಗ ಚಾ ತಂದು ಕೊಡಬೇಕಾಗಿತ್ತು. ಅವರು ಒಂದು ಪಾತ್ರ ಕೊಡುವುದಾದರೆ ಆತ ಹಗಲೂ ರಾತ್ರಿ ಅವರ ಪಾದಸೇವೆ ಮಾಡಲು ಸಿದ್ಧನಿದ್ದ.

ರಾಮಭಟ್ಟರು ಆತನನ್ನು ಅಪಹಾಸ್ಯಕ್ಕೆ ಈಡುಮಾಡಲೆಂದೋ ಅಥವಾ ಅವನಿಂದ ಸೇವೆ ಮಾಡಿಸಿಕೊಳ್ಳಲೆಂದೋ ಅವನ ಮೂಗಿಗೆ ತುಪ್ಪ ಹಚ್ಚುತ್ತಿದ್ದರು.

"ನಿನಗೆ ಓದಲು ಬರುತ್ತದೋ."

"ನಿನಗೆ ರಾಮಾಯಣ ಮಹಾಭಾರತ ಕಥೆ ಬರುತ್ತದೋ" ಎಂದು ಕೇಳಿದರೆ ಆತ ಹೌದೆಂಬಂತೆ ತಲೆದೂಗುತ್ತಿದ್ದ.

"ಹಾಗಾದರೆ ಲವನ ಅಪ್ಪ ಯಾರು?"

"ರಾಮ."

"ರಾಮನ ಅಪ್ಪ ಯಾರು?"

"ದಶರಥ."

"ದಶರಥನ ಅಪ್ಪ ಯಾರು?"

ಜೋನಿ ಮೌನ.

"ನೋಡಿದೆಯಾ? ದಶರಥನ ಅಪ್ಪ ಯಾರೆಂದು ಗೊತ್ತಿರದ ಮೇಲೆ ಹೇಗೆ ಅರ್ಥ ಹೇಳುತ್ತದೆ?"

"ಯಾರು ಭಟ್ಟರೆ?"

"ಅಜ." "ಏನು?"

"ಅಜ."

"ಹೌದು, ಅಜ. ಅಜ್ಜ ಅಲ್ಲ."

"ರಾಮನ ಅಜ್ಜ."

ಭಟ್ಟರಿಗೆ ಖುಷಿ ಆಯಿತು.

"ಅಡ್ಡಿಲ್ಲ, ಜೊರಿದ್ದ, ಹಾಗಾದರೆ ಹೇಳು ನೋಡ್ವಾ ಪಾಂಡವರ ತಂದೆ ಯಾರು?"

"ಪಾಂಡುರಾಜ."

"ಹಾಗಾದರೆ ಅರ್ಜುನನಿಗೆ ಇಂದ್ರಪುತ್ರ ಎಂದು ಯಾಕೆ ಹೇಳುತ್ತಾರೆ?"

"ಅದೇ ಭಟ್ರೆ ನನಗೂ ಸಮಸ್ಯೆ. ಕುಂತಿಗೂ ಆರು ಜನ ಗಂಡಂದಿರು, ದ್ರೌಪದಿಗೂ ಐದು ಜನ."

"ಕುಂತಿಗೆಲ್ಲಿ ಆರು ಜನ?"

"ಪಾಂಡು, ಯಮ, ಇಂದ್ರ, ವಾಯು, ಮತ್ತೆ..... ಮತ್ತೆ ಅಶ್ವಿನಿ ದೇವತೆಗಳು."

"ಎಲಾ ಎಲಾ ಜೋರು ತರ್ಕ ನಿಂದು. ಇಂದ್ರಾ, ವಾಯು ಎಲ್ಲ ದೇವತೆಗಳು, ಅವರು ಗಂಡಂದಿರಲ್ಲ."

"ಅಂದ್ರೆ? ಗಂಡಂದಿರ ಅಲ್ಲದಿದ್ದರೆ?"

"ಅವರು ದೇವತೆಗಳು. ಕುಂತಿಗೆ ವರಕೊಟ್ಟಿದ್ದರಿಂದ ಇವರೆಲ್ಲ ಹುಟ್ಟಿದರು. ಅದಕ್ಕಾಗಿ ಅವರ ಪುತ್ರರು ಎಂದು ಕರೆಯುತ್ತಾರೆ. ತಿಳೀತಾ? ಪಾಂಡು ಮಾತ್ರ ಕುಂತಿಯ ಗಂಡ" ಎಂದರು.

ಈ ಕ್ರಿಶ್ಚನ್ ಹುಡುಗನಿಗೆ ಇಷ್ಟು ತಿಳಿದದ್ದು ಸಾಕು ಎಂದು ಅವರು ಅಂದುಕೊಂಡರು. ತನಗೆ ಕುಣಿಯಲು ಕಲಿಸಿ ಎಂದು ಬಾಲವೇಷಧಾರಿ ಮಕ್ಕಳನ್ನು ಜೋನಿ ಕೇಳಿದ.

"ಹೋಗ ಹೋಗ್" ಎಂದು ಅವರು ತಿರಸ್ಕರಿಸಿದರು. ಇಷ್ಟು ಮಾತ್ರವಲ್ಲ ಅವನು ರಾಮಭಟ್ಟರ ಸಮೀಪವರ್ತಿ ಆಗಿರುವುದು ಅವರಿಗೆ ಯಾಕೋ ಹಿಮ್ಮಡದಲ್ಲಿ ಕಲ್ಲು ಚುಚ್ಚಿದಂತಾಗುತ್ತಿತ್ತು.

ಒಂದು ದಿನ ಒಂದೇ ಕಡೆ ಎರಡು ಆಟವಿತ್ತು. ಮಾರನೇ ದಿನ ಟೆಂಟನ್ನು ಮತ್ತೆ ಕಟ್ಟಬೇಕಿರಲಿಲ್ಲ. ಆದ್ದರಿಂದ ಕೂಲಿಕಾರರಿಗೆ ಬೆಳಗಿನ ವಿರಾಮ.

ಜೋನಿಯ ಸಲಿಗೆಯ ವ್ಯಕ್ತಿ ದೇವಪ್ಪ. ದೇವಪ್ಪ ಇನ್ನೂ ತರುಣ. ಆತ ಹೊಸದಾಗಿ ಸಾಯ್ಕಲ್ ಕಲಿತಿದ್ದ. ಆದರೆ ರೂಢಿಯಾಗಿರಲಿಲ್ಲ. ಆತ ಜೋನಿಯೊಡನೆ ಹೇಳಿದ.

"ನೋಡು ನಾನು ಸಾಯ್ಕಲ್ ಕಲಿಯಬೇಕು. ನಂಗ ಬರ್ತದ್ಯ; ಆದರೂ ಧೈರ್ಯ ಸಾಲ್ದು. ನೀನು ಸಲೂಪ ಹಿಡ್ಕೋಬೇಕು, ಬಾ" ಎಂದ.

ದೇವಪ್ಪನೇ ಅವನ ಆಪ್ತ. ಅವನ ಮಾತನ್ನು ಆತ ಮೀರಲಾರ. ಅಲ್ಲದೇ ಜೋನಿಗೂ ಸಾಯ್ಕಲ್ ಹೊಡೆಯುವ ತಲಬು ಇತ್ತು.

ಇಬ್ಬರೂ ಒಂದು ಸಾಯ್ಕಲ್ ಬಾಡಿಗೆ ಹಿಡಿದು ಮುಂದಿನ ಬೈಲಿಗೆ ಹೋದರು.

ಜೋನಿ ಸಾಯ್ಕಲ್ ಸೀಟು ಹಿಡಿದುಕೊಳ್ಳಬೇಕು. ದೇವಪ್ಪ ಹತ್ತಿ ಕುಳಿತು ಪೆಡ್ಲ ಹೊಡೆದಂತೆ ಜೋನಿ ಸಡಿಲು ಬಿಡಬೇಕು. ಸೀಟನ್ನು ಕೈ ಬಿಟ್ಟು ಸಾಯ್ಕಲ್ ಜೊತೆಗೆ ಓಡಬೇಕು. ಸಾಯ್ಕಲ್ ಬ್ಯಾಲೆನ್ಸ್ ವಗ್ಗಾಲಿ ಹಿಡಿದು ಬೀಳದಂತೆ ತಡೆಯಬೇಕು.

ಜೋನಿಗೂ ಸಾಯ್ಕಲ್ ಹೊಡೆಯಲು ಬರುತ್ತಿತ್ತು. ಆತ ಒಬ್ಬನೇ ಕಲಿತಿದ್ದ. ಅದ ದೊಡ್ಡ ಸಾಯ್ಕಲ್ ಅದುದರಿಂದ ಸೀಟಿನ ಮೇಲೆ ಹತ್ತಿ ಕೂಡ್ರಲು ಆಗುತ್ತಿರಲಿಲ್ಲ. ಒಳಕಾಲು ಹಾಕಿ ಅರ್ಧವರ್ತುಳ ಪೆಡ್ಲ ಕರಕರ ಎಂದು ಒತ್ತುತ್ತ ಹೊಡೆಯುತ್ತಿದ್ದ. ಸಾಯ್ಕಲ ಬ್ಯಾಲೆನ್ಸ್ ತಪ್ಪಿ ಒಲೆದೊಡನೆ ಕಾಲು ಊರುತ್ತಿದ್ದ. ಹೀಗಾಗಿ ಏಕಲವ್ಯನೇ. ಏಕಲವ್ಯನಾದರೆ ನೆಪಕ್ಕೆ ಒಂದು ಗುರುವನ್ನು ಇಟ್ಟುಕೊಂಡಿದ್ದ. ಆದರ ಜೋನಿಗೆ ಅದೂ ಇಲ್ಲ. ಆದರೂ ಅವನಿಗೂ ಚೆನ್ನಾಗಿ ಬ್ಯಾಲೆನ್ಸ್ ರೂಢಿಯಾಗಿರಲಿಲ್ಲ. ಸಾಯ್ಕಲ ಕಂಡೊಡನೆ ಓಡಿಸುವ ತುಡಿತ ಮಾತ್ರ ಉಂಟಾಗುತ್ತದೆ.

ಒಮ್ಮೆ ಅವನ ಮಾಸ್ತರರು, ಜೋನಿ ನನ್ನ ಸಾಯ್ಕಲ್ ಅಂಗಡಿ ಹತ್ತಿರ ಇದೆ, ಒತ್ತಿಕೊಂಡು ಬಾ ಎಂದಾಗ ಪಾಟೀಚೀಲ ಅಲ್ಲೇ ಒಗೆದು ಓಡಿದ್ದ. ಸಾಯ್ಕಲ್ ಒತ್ತಿಕೊಂಡೇ ಹೊರಟ. ನಂತರ ಉತ್ಸಾಹ ಬಂದು ಸಾಯ್ಕಲ್ ಹತ್ತಿ ಹೊಡೆಯಲು ಪ್ರಯತ್ನಿಸಿದಾಗ ಅವನೊಡಗೂಡಿ ಸಾಯ್ಕಲ್ ಗಟರದಲ್ಲಿ ಬಿದ್ದಿತು. ಇದ ತಿಳಿದು ಮಾಸ್ತರರೇ ಬಂದು ಎಬ್ಬಿಸಿದರು. ಅವರ ಸಾಯ್ಕಲ್ ಗಾಲಿಯ ಮೂರು ನಾಲ್ಕು ಕಡ್ಡಿಗಳು ಮುರಿದು ಹೋಗಿದ್ದವು. ಜೋನಿಯ ತುಟಿ ಒಡೆದು ರಕ್ತ ಸೋರುತ್ತಿತ್ತು. ಮಾಸ್ತರು ಬೈದಿರಲಿಲ್ಲ. ಅವರಿಗೂ ಅಳುಕು. ಮಾಸ್ತರರೇ ಕೆಲಸ ಮಾಡಿಸಿ ತನ್ನ ಮಗನಿಗೆ ಪೆಟ್ಟು ಮಾಡಿದರು ಎಂದು ಪಾಲಕರು ಆಕ್ಷೇಪ ಮಾಡಿದರೆ?

ಅದಕ್ಕೂ ಅವನಿಗೆ ಸಾಯ್ಕಲು ಸಿಕ್ಕಿದ್ದು ತೀರ ಕಡಿಮೆ. ಹೀಗಾಗಿ ಒಂದು ಸುತ್ತು ತಾನು ಹೊಡೆಯಬೇಕೆಂದು ಜೋನಿಯ ಆಶೆ ಇದೆ. ಆದರೆ ದೇವಪ್ಪನಿಗೆ ತೀರದ ದಾಹ.

ತನ್ನ ಮನಸ್ಸಿನ ತುಡಿತವನ್ನು ತಡೆಯಲಾರದೆ ಜೋನಿ ದೇವಪ್ಪನ ಸಾಯ್ಕಲ್ ತುಸು ಇಳಿಜಾರಿ ನಲ್ಲಿ ಓಡುತ್ತಿರುವಾಗ ಒಂದು ಬದಿಗೆ ದೂಡಿ ಕೈಬಿಟ್ಟುಬಿಟ್ಟ. ಸಾಯ್ಕಲ್ ಜೋರಿನಿಂದ ಓಡಿತು. ಹೆಂಡ್ಲು ಆ ಕಡೆ ಈ ಕಡೆ ಹೊಯ್ದಾಡಿತು. ದೇವಪ್ಪ ಬ್ಯಾಲನ್ಸನ್ನು ಸರಿಪಡಿಸುವುದರೊಳಗೆ ಸಾಯ್ಕಲ್ ಒಂದು ಮುಳ್ಳು ಹಿಂಡಿನ ಮೇಲೆ ಹೋಗಿ ದೊಪ್ ಎಂದು ಬಿದ್ದುಬಿಟ್ಟಿತು.

'ಅಯ್ಯೊ! ಬಿದ್ದಿ ಬಿಟ್ಯಾ' ಎಂದು ಕೂಗಿದ ಜೋನಿ ಓಡಿ ಹೋಗಿ ಅವನು ಎದ್ದು ನಿಲ್ಲಲು ಸಹಾಯ ಮಾಡಿದ.

ದೇವಪ್ಪನ ಮೈಕೈ ಎಲ್ಲ ಮುಳ್ಳಿನಿಂದ ಚುಚ್ಚಿತು. ಈಗ ಜೋನಿಗೆ ನಿಜಕ್ಕೂ ವೇದನೆಯಾಯಿತು. ಎರಡು ಮೂರು ದಿನ ದೇವಪ್ಪನಿಂದ ಕೆಲಸ ಮಾಡುವುದಾಗುತ್ತಿರಲಿಲ್ಲ. ಅವನ ಕೆಲಸವನ್ನು ತಾನೇ ಮಾಡುತ್ತಿದ್ದ.

"ನನ್ನದೇ ತಪ್ಪು. ನೀನು ಬೀಳಲಿಕ್ಕಿಲ್ಲ ಎಂದು ಮಾಡಿದೆ. ಹಾಗಾಗಿ ಕೈಬಿಟ್ಟಿದ್ದೆ. ಛೇ! ತಿಳಿಯಲೇ ಇಲ್ಲ" ಎಂದು ಹೇಳಿ ಅವನನ್ನು ಸಮಾಧಾನಪಡಿಸಿದ ಮಾತ್ರವಲ್ಲ ಅವನಿಗೆ ತುಂಬಾ ಪಶ್ಚಾತ್ತಾಪ ಕೂಡ ಆಗಿತ್ತು. ದೇವಪ್ಪನ ಸೇವೆಯನ್ನು ಆತ ಮನಮುಟ್ಟಿ ಮಾಡಿದ.

ಒಂದು ದಿನ ರಾಮಭಟ್ಟರು ರಜೆಯ ಮೇಲೆ ಇದ್ದರು. ಗೋಪಾಲ ವೇಷ ಹಾಕುವ ಹುಡುಗರಿಬ್ಬರೂ ಇಂದು ನೀನು ನಮಗೆ ಗಾಳಿ ಹಾಕಬೇಕು ಎಂದರು.

"ಸರಿ. ಆದರೆ ಒಂದು ಷರತ್ತು."

"ಏನದು."

"ನನಗೆ ಕುಣಿಯಲು ಕಲಿಸಿ."

"ಹೋ ಹೋ ನಾಳೆಯೇ" ಎಂದರು.

ಆ ದಿನ ಆತ ಅವರಿಗೆ ಗಾಳಿ ಹಾಕಿದ. ಕುಡಿಯಲು ನೀರು ತಂದುಕೊಟ್ಟ. ಅಂತೂ ಅವರ ಸೇವೆ ಮಾಡಿದ.

ಮಾರನೇ ದಿನ ಕುಣಿಯಲು ಕಲಿಸಿರಿ ಎಂದರೆ ತೊಮ್ಮೆ ತೋರಿಸಿದರು.

ಮಾರನೇ ದಿನ ರಾಮಭಟ್ಟರು ಬಂದರು. ಜೋನ ಅವರ ಟವೆಲ್ ಒಂದನ್ನು ತೊಳೆದು ಸ್ವಚ್ಛ ಮಾಡಿಟ್ಟಿದ್ದ. ಅದು ಅವರ ಮೈ ಒರೆಸುವ ಟುವಾಲು. ಅದನ್ನು ಅವರು ಮರೆತುಹೋಗಿದ್ದರು. ರಾಮಭಟ್ಟರು ಪ್ರಸನ್ನರಾಗಿದ್ದರು. ಜೋನಿ ಎಲ್ಲರಿಗೂ ಬೇಕಾಗಿಯೇ ಇದ್ದ. ಆದರೆ ಈ ಗೋಪಾಲವೇಷದವರಿಗೆ ಯಾಕೊ ಆತ ಮೊಸರಲ್ಲಿ ಕಲ್ಲು ಬಂದಂತೆ ಇದ್ದ.

ಆ ದಿನ ಕಂಟ್ರಾಕ್ಟ ಆಟವಾದ್ದರಿಂದ ಕಂಟ್ರಾಕ್ಟರರ ಒತ್ತಡದ ಮೇರೆಗೆ ಹೆಂಡಬಿಲ್‌ನಲ್ಲಿ ಇದ್ದದ್ದಕ್ಕಿಂತ ಬೇರೆಯಾದ ಪ್ರಸಂಗವನ್ನು ಆಡಬೇಕಾಯಿತು.

"ಬಹುಜನರ ಒತ್ತಡದ ಮೇರೆಗೆ ಇಂದು 'ಹರಿಶ್ಚಂದ್ರ – ಚಂದ್ರಮತಿ' ಆಡಬೇಕು ರಾಮಭಟ್ಟರೇ. ನಿಮ್ಮ ಹರಿಶ್ಚಂದ್ರ ನೋಡಬೇಕೆಂಬುದು ಬಹುಜನರ ಅಪೇಕ್ಷೆ" ಎಂದು ಕಂಟ್ರಾಕ್ಟರ ಹೇಳಿದ.

ರಾಮಭಟ್ಟರಿಗೆ ಒಳಗಿಂದೊಳಗೆ ಸಂತೋಷವಾದರೂ ತೋರಗೊಡದೆ.

"ಅದು ನನಗೆ ತಿಳಿಯದು ಇವರೇ. ಏನಿದ್ದರೂ ಭಾಗವತರ ಆದೇಶ ನಾವು ಮೀರುವವರಲ್ಲ" ಎಂದರು. ರಾಮಭಟ್ಟರ ವಿನಯಕ್ಕೆ ಸುಪ್ರೀತರಾದ ಭಾಗವತರು ಸಮ್ಮತಿ ಸೂಚಿಸಿದರು.

ಆದರೆ ಸಮಸ್ಯೆಯೆಂದರೆ ರೋಹಿತಾಶ್ವನನ್ನು ಮಾಡುವವರು ಯಾರು?

ಇದ್ದಾರಲ್ಲ ಗೋಪಾಲವೇಷದವರು. ಅವರಲ್ಲಿ ಒಬ್ಬನನ್ನು ಮೊದಲ ರೋಹಿತಾಶ್ವ, ಮತ್ತೊಬ್ಬನನ್ನು ಎರಡನೇ ರೋಹಿತಾಶ್ವ ಎಂದರು ಭಾಗವತರು.

"ಭಾಗವತರೇ ಒಂದು ಕೆಲಸ ಮಾಡುವ. ನೀವು ಒಪ್ಪಿದರೆ ಆ ಹುಡುಗ ಜೋನಿ ಗೋಗರೆತ ಮೊದಲನೇ ರೋಹಿತಾಶ್ವ, ಅವನದೇ ಮಾಡಿಸ್ವ. ಕುಣಿತವೂ ಬೇಡ, ಮಾತೂ ಬೇಡ" ಎಂದರು.

ಭಾಗವತರು ಮೊದಲು ಅನುಮಾನಿಸಿದರೂ ಮುಖ್ಯ ವೇಷಧಾರಿಯಾದ ರಾಮಭಟ್ಟರೇ ಹೇಳಿದ ಮೇಲೆ ಮತ್ತೇನು?

"ಭಾಗವತರೇ ಹೀಗೆ ಮಾಡುವುದಾ? ನಾವೇ ಮೊದಲ ರೋಹಿತಾಶ್ವನನ್ನು ಮಾಡುತ್ತಿದ್ದೆವಲ್ಲ. ಕೆಲಸದವನಿಂದ ಮಾಡಿಸುವುದಾ? ನಮಗೆ ಮೇಳದಲ್ಲಿ ಏನು ಮಾನ ಉಳಿಯಿತು?" ಎಂದು ಭಾಗವತರನ್ನು ಗೋಪಾಲವೇಷಧಾರಿಗಳು ಮುಖ ಬಾಡಿಸಿಕೊಂಡು ಕೇಳಿದರು.

"ಇರಲಿ ಬಿಡಿ. ಆ ರಾಮಭಟ್ಟರ ಮಾತು ಹೇಗೆ ಮೀರೋದು. ಅವರಿಗೇ ಗೊತ್ತಾಗುತ್ತದೆ ಆ ಹುಡ್ಗ ಬುರ್ನಾಸು ಎಂದು. ನಾಳೆ ಪ್ರೇಕ್ಷಕರೇ ಹೇಳುತ್ತಾರೆ ಕುಣಿಯಲು ಬರದವರಿಗೆ ರೋಹಿತಾಶ್ವನ ಪಾತ್ರ ಕೊಟ್ಟಿದ್ದು ತಪ್ಪು ಎಂದು. ಮೇಳದ ಯಜಮಾನರಿಗೂ ಸುದ್ದಿ ಮುಟ್ಟುತ್ತದೆ. ಅವರೇ ರಾಮಭಟ್ಟರಿಗೆ ಹೇಳುತ್ತಾರೆ. ಆಗ ಸರಿ ಹೋಗುತ್ತದೆ. ಸೊನಗಾರ ಕಿವಿ ಚುಚ್ಚಿದರೆ ನೋವು ಆಗೂದಿಲ್ಲ. ನೀವು ಬರ್ಜರಿ ಕುಣಿಯಿರಿ" ಎಂದು ಸಮಾಧಾಪಡಿಸಿದರು.

ರಾಜಪುತ್ರನಾದ ರೋಹಿತಾಶ್ವನನ್ನು ಚೆನ್ನಾಗಿ ಸಿದ್ಧಪಡಿಸಲಾಗಿತ್ತು. ಆ ಪಗಡೆ, ಆ ಆಭರಣ, ಆ ಬಣ್ಣದಲ್ಲಿ ಎಷ್ಟು ಮುದ್ದಾಗಿ ಕಾಣುತ್ತಿದ್ದನೆಂದರೆ ಆ ವೇಷವನ್ನು ನೋಡಿದ ದೇವಪ್ಪ ಯಾರ ಕೆಟ್ಟ ದೃಷ್ಟಿಯೂ ಅವನ ಮೇಲೆ ಪರಿಣಾಮ ಮಾಡಬಾರದೆಂದು ಬದಿಗೆ ಕರೆದು ಯಾರಿಗೂ ಕಾಣದ ಹಾಗೆ ಉಪ್ಪು ಸುಳಿದು ಒಗೆದ.

ಜೋನಿ ನಿಲುಗನ್ನಡಿ ನೋಡಿಕೊಂಡ. ಆಹಾ, ಎಂಥ ವೇಷ! ಎಷ್ಟು ಮೋಹಕ. ಸ್ವರ್ಗಕ್ಕೆ ಎರಡೇ ಬೆರಳು ಬಾಕಿ.

ಜೋನಿಯ ಪಾತ್ರ ನೋಡಿದವರು ಭೇಷ್ ಎಂದರು. ಜೋನಿ ಮಂಡಿಕುಣಿತ ಕುಣಿದುಬಿಟ್ಟ. ಜನ ಚಪ್ಪಾಳೆಯೋ ಚಪ್ಪಾಳೆ.

ಮೃದಂಗ ಚೆಂಡೆಯವರು ತಮಾಷೆಯಿಂದ ನಗೆಯಾಡುತ್ತಿದ್ದರು. ಅವರ ನಗೆಗೆ ಕಾರಣವೆಂದರೆ ಆತನಿಗೆ ಕುಣಿತದ ಮುಕ್ತಾಯ ತಿಳಿಯುತ್ತಿರಲಿಲ್ಲ. ಒಂದೊಂದು ಸಲ ಮೃದಂಗ ಮೊದಲು ಸರಿಯಾಗಿ ಶುರು ಮಾಡಿದ ತದ್ಧಿರುತಕ, ತ್ರಿವುಡೆ ನಡೆಯಲ್ಲಿ ಸರಿಯಾಗೇ ಅವನ ಹೆಜ್ಜೆ ಇತ್ತು. ಮುಂದೆ ತಾಕಿಟತಕ ತಿರಕಿಟ ತಾಥೈತಕ ದಿತ್ತು ದದಿಗಣ, ಧೇಂ" ಮುಕ್ತಾಯ ಆಗಬೇಕಾದು 'ಧೇಂ ಧೇ ದೇಂ' ಎಂದು ಹೆಜ್ಜೆ ಹಾಕಿದ. ಮುಗಿದ ಮೇಲೂ ಕುಣಿದು ಬರುತ್ತಿದ್ದ.

ಇದನ್ನು ತೆರೆಯ ಮರೆಯಿಂದ ನೋಡುತ್ತ ನಿಂತ ಗೋಪಾಲವೇಷದ ಬಾಲನಟರು ಇವನ ತಪ್ಪು ಕುಣಿತವನ್ನು ನೋಡಿ ಹೊಟ್ಟೆ ಹಿಡಿದು ನಗೆಯಾಡಿದರು.

ವಿಶ್ವಾಮಿತ್ರ ರಂಗಕ್ಕೆ ಬಂದು ಹರಿಶ್ಚಂದ್ರನ ಸರ್ವಸ್ವವನ್ನು ಪಡೆದು ತಾರಾಮತಿ, ರೋಹಿತಾಶ್ವರನ್ನು ಪರೀಕ್ಷಿಸಿ ಒಳ ಹೋದೊಡನೆ ಜೋನಿಯ ವೇಷ ಮುಗಿಯಿತು.

ರಾಮಭಟ್ಟರು "ಭಲೇ ಹುಡುಗ" ಎಂದರು. ಜಾನಿ ಸ್ವರ್ಗದಲ್ಲೇ ತೇಲಾಡುತ್ತಿದ್ದ. ಬೆಳತನಕ ಆತನಿಗೆ ನಿದ್ದೆ ಹತ್ತಲಿಲ್ಲ.

"ಜೋನಿ ಇಂದು ನಿನಗೆ ಒಂದು ಸೆಟಗ ಅನ್ನ ಜಾಸ್ತಿ ಹಾಕುತ್ತೇನೆ" ಎಂದು ಭಟ್ಟರು ಅಂದರು.

"ಹೇಗಾಗಿತ್ತು. ಭಟ್ರೆ?"

"ಭರ್ಜರಿ ಆಯಿತು. ವೇಷ ಬಹಳ ಮೋಹಕವಾಗಿತ್ತು."

"ಮತ್ತೆ ಜಾನಿ" ಇಂದು ಭಟ್ಟ ತಮಾಷೆ ಮಾಡುತ್ತಿರಲಿಲ್ಲ.

"ಮತ್ತೆ ಕುಣಿತ ಒಂದು ಕಲಿತುಕೊಳ್ಳಬೇಕು" ಎಂದರು.

ಜೋನಿಗೆ ಅವರ ಭಾಷೆಯೇ ಖುಷಿ. ಈಗ ಅದರೊಡನೆ ಹೊಗಳಿಕೆ ಕೂಡ ಇತ್ತಲ್ಲ. ತಿಂಗಳಾದ ಮೇಲೆ ಜಾನಿಗೆ ಯಜಮಾನರು ಸಂಬಳ ಕೊಟ್ಟರು.

ಸಂಬಳವನ್ನೇನು ನಿಶ್ಚಯಿಸಿರಲಿಲ್ಲ.

ಒಂದು ದಿನ ಅವರು ಟೆಂಟಿಗೆ ಬಂದಾಗ ಚುರುಕಿನಿಂದ ಕೆಲಸ ಮಾಡುತ್ತಿದ್ದ ಹುಡುಗನನ್ನು ನೋಡಿ ಯಾರೆಂದು ವಿಚಾರಿಸಿದ್ದರು.

ತಾನು ಅನಾಥನೆಂದು ತನಗೆ ಕೆಲಸ ಕೊಡಬೇಕೆಂದೂ ತಾನು ದೇವಪ್ಪನ ಊರಿನವನೆಂದೂ ಅಂಗಲಾಚಿದ.

ದೇವಪ್ಪನೂ ಹೌದೆಂದು ಹೇಳಿದ್ದ.

"ನಿನಗೆ ಎಷ್ಟು ಸಂಬಳ ಬೇಕು ಹುಡುಗಾ?" ಎಂದಾಗ "ನೀವು ಕೊಟ್ಟಷ್ಟು" ಎಂದಿದ್ದ.

"ಸರಿ" ಎಂದು ಯಜಮಾನರು ನಗುತ್ತ ಹೋದರು.

ಜಾನಿಗೆ ಖುಷಿಯೇ ಖುಷಿ. ಮುಂದಿನ ಕ್ಯಾಂಪು ಪೇಟೆಯಲ್ಲಿಯೇ. ಜಾನಿ ಅಲ್ಲಿ ಪೇಟೆಗೆ ಹೋಗಿ ಪುಸ್ತಕದ ಅಂಗಡಿ ಅರಸಿದ. ಅಲ್ಲಿ ಯಕ್ಷಗಾನ ಕತೆಗೆ ಸಂಬಂಧಿಸಿದ ರಾಮಾಯಣ ಮಹಾಭಾರತ ಕತೆಯ ಪುಸ್ತಕ ಇದೆಯೇ ಎಂದು ವಿಚಾರಿಸಿದ. ಅಂಗಡಿಯವರು,

"ಇದೆ ತೆಗೆದುಕೋ, ಹುಡುಗರು ಓದಬೇಕು', 'ವಚನಭಾರತ" ಎಂದು ಒಂದು ದಪ್ಪ ಪುಸ್ತಕ ತೆಗೆದುಕೊಟ್ಟರು.

ಜೋನಿ ದಪ್ಪ ಪುಸ್ತಕ ನೋಡಿದ್ದನೇ ಹೊರತು ಓದಿರಲಿಲ್ಲ.

ಪುಸ್ತಕದ ಮುಖಪುಟ ಆಕರ್ಷಕವಾಗಿತ್ತು. ಪುಸ್ತಕದ ಹಾಳಿ ಮಡಚಿದ–ದ್ರೋಣ ಪರ್ವ, ಕರ್ಣ ಪರ್ವ ಹೀಗೆಲ್ಲ ಇದ್ದುದು ನೋಡಿ ಸಂತೋಷವಾಯಿತು. ಯಾಕೆಂದರೆ ಯಕ್ಷಗಾನ ಪ್ರಸಂಗಗಳ ಹೆಸರೂ ಹೀಗೇ ಇರುತ್ತಿದ್ದವು. ಕೆಲವು ಚಿತ್ರಗಳೂ ಇದ್ದವು ಅಲ್ಲಿ.

"ಎಷ್ಟು ರೂಪಾಯಿ" ಎಂದು ಕೇಳಿದ.

"ಅರವತ್ತು."

'ಅರ್‍ವತ್ತು!' ಮನಸ್ಸಿನಲ್ಲಿ ಎಣಿಸಿಕೊಂಡ ಜೋನಿ.

'ಬೇಡಪ್ಪ' ಎನಿಸಿತು.

ಪುಸ್ತಕ ಹಿಂದಕ್ಕೆ ಕೊಟ್ಟು ಅಂಗಡಿ ಮೆಟ್ಟಿಲು ಇಳಿದು ಬಂದ. ಬಂದವನು ಮುಂದೆ ನಿಂತ. "ಕೊಳ್ಳಲೇ? ಅರ್‍ವತ್ತು ರೂಪಾಯಿ, ಬೇಡ!? ಎಂದುಕೊಂಡ. ಮತ್ತೆ ಹತ್ತು ಹೆಜ್ಜೆ ನಡೆದ. ಮುಂದೆ ಹೋಗಲು ಮನಸ್ಸಾಗಲಿಲ್ಲ. ಹಿಂದೆ ಬಂದ.

"ಅರ್‍ವತ್ತು ರೂಪಾಯಿ" ಅಂದುಕೊಂಡು ಮತ್ತೆ ಹಿಂದಿರುಗಿ ನಡೆದ.

ಆದಿಪರ್ವ, ಉದ್ಯೋಗಪರ್ವ, ಕರ್ಣಪರ್ವ ಎಂದೆಲ್ಲ ಎಂದುಕೊಂಡ. ಮತ್ತೆ ಹಿಂದಿರುಗಿ ಅಂಗಡಿಗೆ ಹೋದ.

"ಆ ಪುಸ್ತಕ ಕೊಡಿ" ಎಂದ.

ಹತ್ತು - ಹದಿನೈದು ನಿಮಿಷದ ಹಿಂದೆ ಈ ಹುಡುಗ ಬಂದ ಗುರುತು ಅಂಗಡಿಕಾರರಿಗೆ ಇತ್ತು.

"ಏನು ಅನುಮಾನ. ದುಡ್ಡು ಖರ್ಚಾಗುತ್ತದೆ ಎಂದೊ? ಜ್ಞಾನ ಹಾಗೇ ಬರುವುದಿಲ್ಲ. ಓದಬೇಕು, ದುಡ್ಡು ಕೊಡಬೇಕು. ಅಕ್ಕಿ ಕಾಳು ಖರ್ಚಾಗಬಾರದು ಅಕ್ಕನ ಮಕ್ಕಳು ಬಡವಾಗಬಾರದು, ಅಂದರೆ ಹೇಗೆ?" ಎಂದು ಉತ್ತೇಜಿಸಿದ.

ಜಾನಿಗೆ ಸಮಾಧಾನವಾಯಿತು. ಪುಸ್ತಕ ತೆಗೆದುಕೊಂಡು ಅರ್‍ವತ್ತು ರೂಪಾಯಿ ಕೊಟ್ಟ. ಅಂಗಡಿಕಾರ ಇದು ನೋಡಿ ಎಂದು ಆರು ರೂಪಾಯಿ ಹಿಂದಕ್ಕೆ ಕೊಟ್ಟ. ಜೋನಿಗೆ ತುಂಬಾ ಆನಂದವಾಯಿತು. ಪುಸ್ತಕವನ್ನು ನೂರುಸಲ ಮುಟ್ಟಿ ನೋಡಿಕೊಂಡ. ಮೂಗಿಗೆ ಹಿಡಿದು ಅದರ ವಾಸನೆಯನ್ನು ಆಘ್ರಾಣಿಸಿದ. ಹಾಗೆ ತನ್ನ ಹೆಗಲ ವಸ್ತ್ರದಿಂದ ಮುಚ್ಚಿಕೊಂಡು ಟೆಂಟಿಗೆ ಬಂದ. ಪುಸ್ತಕವನ್ನು ತನ್ನ ಕೈಚೀಲದಲ್ಲಿ ಭದ್ರವಾಗಿರಿಸಿದ.

ಒಮ್ಮೆ ಜೋನಿ ಮೋರೆಯನ್ನು ಬಾಡಿಸಿಕೊಂಡು ಭಟ್ಟರಲ್ಲಿ ಹೋದ.

"ಏನು ಎರಡನೇ ಪಾತ್ರಧಾರಿಗಳೇ ಮುಖ ಯಾಕಿಂದು ಬಾಡಿದೆ? ಕಾಂತಾಮಣಿ" ಎಂದರು.

ಅವರ ಹಾಸ್ಯಕ್ಕೆ ಜೋನಿಗೆ ಸಂತೋಷವಾಯಿತು. ಎರಡನೇ ಪಾತ್ರಧಾರಿ ಎಂದರೆ ಮುಖ್ಯಪಾತ್ರಧಾರಿ ಎಂದು. ಭಾಗವತನೆ ಮೊದಲ ಪಾತ್ರಧಾರಿ. ಮುಖ್ಯಪಾತ್ರಧಾರಿ ಎರಡನೇ ಪಾತ್ರಧಾರಿ. ರೋಹಿತಾಶ್ವನ ಪಾತ್ರ ಮಾಡಿದ ಮೇಲೆ ಭಟ್ಟರು ಸಂತೋಷದಲ್ಲಿ ಇದ್ದಾಗ ಜೋನಿಯನ್ನು ಕರೆಯುವುದು ಹಾಗೆ. ಅವರು ಪ್ರೀತಿಯನ್ನು ತೋರುವ ಬಗೆ ಅದು. ಮುಂದಿನದು ಯಕ್ಷಗಾನದ ಮಾತು.

ಆದರೆ ಭಟ್ಟರ ತಮಾಷೆ ತುಂಡರಿಸಿ ಬಿತ್ತು. ಜೋನಿಯ ಪುಸ್ತಕ ಕಳುವಾಗಿತ್ತು. ಭಟ್ಟರಿಗೆ ಬಹಳ ವೇದನೆಯಾಯಿತು.

ಅವರಿಗೆ ಆತ ತಂದು ತೋರಿಸಿದ್ದ. ಆ ಪುಸ್ತಕವನ್ನು ಅವರು ನೋಡಿದ್ದರು. ಕೆಲವು ಪುಟಗಳನ್ನು ಓದಿದ್ದರೂ ಕೂಡ.

"ಛೇ ಒಳ್ಳೆಯ ಪುಸ್ತಕ. ಬೆವರು ಸುರಿದು ದುಡಿದ ಹಣದಲ್ಲಿ ತಂದ ಪುಸ್ತಕ. ಅದರಲ್ಲೂ ಒಂದು ಮಗು ಅಚ್ಚೆಯಿಂದ ತಂದ ಪುಸ್ತಕ. ಅದನ್ನು ಕಳುವುದೇ?"

ಭಟ್ಟರು ವ್ಯಾಕುಲದಿಂದ ಮೌನವಾದರು. ಜೋನಿ ಸಮಯ ಸಿಕ್ಕಾಗೆಲ್ಲ ಅದನ್ನು ಓದುತ್ತಿರುತ್ತಿದ್ದ. ಕೆಲಸಗಾರರು ಓದೊ ಓದೊ ಎಂದು ಪ್ರೋತ್ಸಾಹಿಸುತ್ತಿದ್ದರು. ಅವರೆಲ್ಲರಿಗೂ ಇದು ಕಳವಳದ ವಿಷಯವಾಯಿತು.

"ನಿನ್ನ ಪುಸ್ತಕ ಕಳುವಾಯ್ತಂತಲ್ಲ?" ಎಂದು ಗೋಪಾಲವೇಷದವರು ಕೇಳಿದರು. ಅವರು ಕೇಳಿಯಷ್ಟೇ ಸುಮ್ಮನಿರಲಿಲ್ಲ.

"ನಮಗೆ ಕೊಟ್ಟುಬಿಡು ಎಂದರೆ ಕೇಳಲಿಲ್ಲ. ಈಗ ಹೇಗಾಯಿತು?" ಎಂದು ಮೂದಲಿಸಿದರು. ಅವರು "ತಮಗೆ ಕೊಡು ನಿನಗೆ ಯಾಕೆ, ಕೆಲಸದವನಿಗೆ" ಎಂದೆಲ್ಲ ಒತ್ತಾಯಿಸಿದ್ದರು. ಜೋನಿ ಕೊಟ್ಟಿರಲಿಲ್ಲ.

ಜೋನಿ ಮೌನವಾಗಿ ಎದ್ದು ಹೋದ. ದಿನಕಳೆದಂತೆ ಉಳಿದ ಕೆಲಸದಲ್ಲಿ ಪುಸ್ತಕವನ್ನು ಆತ ಮರೆತರೂ ಏಕಾಂತದಲ್ಲಿ ಆ ಪುಸ್ತಕವೇ ಬಂದು ನಿಂತಂತೆ, ಹಾಳೆ ತೆರೆದುಕೊಂಡು ಇದೇ ಇಲ್ಲಿದೆ ವಿರಾಟಪರ್ವ, ಇಲ್ಲಿದೆ ಭೀಷ್ಮಪರ್ವ, ಇಲ್ಲಿದೆ ಕರ್ಣಪರ್ವ ಎಂದಂತೆ ಅವನಿಗೆ ಅನಿಸುತ್ತಿತ್ತು.

ಅಂದು ಆಟ ಪ್ರಾರಂಭವಾಗಿ ಅರ್ಧ ಕತೆಯೂ ನಡೆದಿತ್ತು. ಗೋಪಾಲ ವೇಷಧಾರಿಗಳಲ್ಲೊಬ್ಬ ವಾಂತಿಯಾಗುತ್ತದೆ ಎಂದು ಮಲಗಿದ. ಮತ್ತೊಬ್ಬ ನಿದ್ದೆ ಮಾಡಿದ್ದ.

'ಕರ್ಣಪರ್ವ–ಕರ್ಣ ರಣರಂಗದಲ್ಲಿ ಕೈಸೋತು ಕುಳಿತಿದ್ದಾನೆ. ಆಗ ಕೃಷ್ಣ ಕಪಟ ಬ್ರಾಹ್ಮಣನಾಗಿ ಕರ್ಣನಲ್ಲಿ ಹೋಗಿ ಆತನ ಕರ್ಣಕುಂಡಲವನ್ನು ಬೇಡಿ ದಾನ ಪಡೆಯಬೇಕು.

ಕರ್ಣಕುಂಡಲವೆಂದರೆ ಕಿವಿಯ ಒಂದು ಆಭರಣ. ಅದು ಕರ್ಣನಿಗೆ ಹುಟ್ಟುವಾಗಲೇ ಇತ್ತಂತೆ. ಅದರೊಟ್ಟಿಗೆ ಅವನ ಉದರದಲ್ಲಿ ಅಮೃತಕಲಶ ಇತ್ತಂತೆ. ಅವೆರಡು ಆತನಿಂದ ಬೇರ್ಪಡದಿದ್ದರೆ ಅವನಿಗೆ ಸಾವು ಇಲ್ಲ. ಇದನ್ನು ಕೃಷ್ಣ ಅರಿತಿದ್ದ. ಅದನ್ನು ಆತ ಅಪಹರಿಸಬೇಕಾಗಿದೆ. ಕರ್ಣ ದಾನಶೂರ ಎಂದು ಹೆಸರಾಗಿದ್ದ. ಯಾಚಕರು ಏನು ಕೇಳಿದರೂ ಇಲ್ಲವೆನ್ನುತ್ತಿರಲಿಲ್ಲ. ಅವನ ಈ ಔದಾರ್ಯ ಗುಣವನ್ನು ವೃದ್ಧ ಬಾಹ್ಮಣ ಉಪಯೋಗಿಸಿಕೊಂಡು ಕರ್ಣಕುಂಡಲ ಮತ್ತು ಅಮೃತಕಲಶವನ್ನು ಪಡೆಯಬೇಕು.

'ಪ್ರಸಂಗ' ದಲ್ಲಿ ಮೂರು ನಾಲ್ಕು ಪದ್ಯಗಳಿವೆ. ಆದರೆ ಆಗಲೇ ಬೆಳಗಾಗಲು ಬಂದಿತ್ತು. ಆದ್ದರಿಂದ ನೆಪಕ್ಕೆ ಒಬ್ಬ ಬ್ರಾಹ್ಮಣ ಪಾತ್ರ ಬೇಕಿತ್ತು.

ರಾಮಭಟ್ಟರು ಜೋನಿಗೆ ಬ್ರಾಹ್ಮಣನ ವೇಷ ಹಾಕಿಕೊಂಡು ಬರಲು ಹೇಳಿದರು. ಆತನಿಗೆ ಸಹಾಯ ಮಾಡಲು ಯಾರಿಗೊ ಹೇಳಿದರು. ಅವನಿಗೆ ಪಂಚೆ ಉಡಿಸಿ, ಜನಿವಾರ ತೊಡಿಸಿ, ಹಣ್ಣು ಮೀಸೆ ಗಡ್ಡ ಹಚ್ಚಿ ಬಿಳಿಯ ನಾಮ ಹಣೆಗೆ ಇಟ್ಟು ಮುದುಕನ ಹಾಗೆ ನಡೆದು ಹೋಗು ಎಂದು ಹೇಳಿದ. ಕತೆಯ ಸಂದರ್ಭವನ್ನು ಹೇಳಿದ.

ಜೋನಿ ಚೆನ್ನಾಗಿಯೇ ನಟಿಸಿದ.

ರಾಮಭಟ್ಟರ ಕರ್ಣ ಪ್ರಸಿದ್ಧ. ಅವರು ಮಾತಿನಿಂದ ಜಾನಿಯ ಮನಸ್ಸೂ ಕರಗಿತ್ತು. ಜೋನಿ ಕರ್ಣ ಕುಂಡಲ ಕೇಳಿದ.

"ಅಬ್ಬ, ಇದೇ ಕೊಟ್ಟೆ ಎಂದು ತೆಗೆದ. ಅದಕ್ಕೆ ಧಾರೆ ಎರೆದು ಕೊಡಲು ನೀರು ಇಲ್ಲವಲ್ಲ. ಎಲ್ಲಾ ರಕ್ತ" ಎಂದ.

"ಎಲೈ ಕರ್ಣ, ಅದನ್ನು ಯಾಕೆ ಬೇರೆ ಕಡೆ ಅರಸುವಿ. ಒಳಗೆ ಬೆಣ್ಣೆಯನ್ನಿಟ್ಟುಕೊಂಡು ಹೊರಗೆ ತುಪ್ಪವನ್ನು ಅರಸುವಂತೆ" ಎಂದ.

"ಅಬ್ಬ, ಹುಡುಗನ ಮಾತೆ!" ಎಂದರು ಜನ. ಕರ್ಣ ತನ್ನ ಒಡಲನ್ನು ಸೀಳಿ ನೀರು ತೆಗೆದು ಧಾರೆ ಎರೆದು ದಾನ ಕೊಟ್ಟ. ಬ್ರಾಹ್ಮಣ ಪ್ರಸನ್ನನಾದ. 'ನಿನಗೊಂದು ವರ ಕೊಡುತ್ತೇನೆ ಬೇಡು' ಎಂದ.

"ದೇವಾ ನೀನು ಯಾರೆಂದು ಬಲ್ಲೆ, ನೀನು ಪರಮಾತ್ಮನಲ್ಲದೇ ಬೇರಲ್ಲ ಎಂಬುದ ಬಲ್ಲೆ. ನನಗೆ ಮುಕ್ತಿಯೇ ಹೊರತು ಬೇರೆ ಬೇಡ" ಎಂದ.

"ಅದು ನಿನಗೆ ಸ್ವಾಭಾವಿಕವಾಗಿ ಲಭಿಸುತ್ತದೆ. ಬೇರೆ ವರ ಕೇಳು" ಎಂದ.

"ಬೇರೆ ಏನೂ ಬೇಡ" ಎಂದ ಕರ್ಣ.

"ಕರ್ಣ ಪ್ರತಿಯೊಂದು ಸಲ ಮೋಸ ಹೋಗಬೇಡ. ಇದು ನಿನಗೆ ಕೊನೆಯ ಕ್ಷಣ. ನಿನಗೆ ಸುಖವಾಗುವಂತೆ ಒಂದು ವರ ಕೇಳು."

"ಬೇಡ ದೇವ, ನಿನ್ನ ದರ್ಶನ ಆದ ಮೇಲೆ ಬೇರಿನ್ನಾವ ಆಶೆ" ಎಂದ ಕರ್ಣ.

"ಕೇಳು ಕೇಳು" ಎಂದ ಬ್ರಾಹ್ಮಣ. ಕರ್ಣನ ಮೇಲಿನ ಅತಿಯಾದ ಪ್ರೀತಿ, ಕರುಣೆಯಿಂದ ಕರ್ಣನನ್ನು ಮಾಡಿದ ರಾಮಭಟ್ಟರಿಗೆ ಫಜೀತಿಯಾಯಿತು. ಜನ ನಗೆಯಾಡಲು ಶುರು ಮಾಡಿದರು. ರಾಮಭಟ್ಟರಿಗೆ ಸಿಟ್ಟು ನೆತ್ತಿಗೇರಿತು.

"ದರಿದ್ರ ಹುಡ್ಗ ಹೋಗಸಾಯ್ತ್ಯ ಇಲ್ಲ, ಒದೆ ಬೇಕಾ" ಎಂದು ಸಣ್ಣದಾಗಿ ಕೇಳಿದರು. ಭಾಗವತ ಮೃದಂಗಕಾರರೆಲ್ಲ ನಗೆಯಾಡಿದರು. ನಂತರ ಬ್ರಾಹ್ಮಣ ಜೋನಿ ಒಳಗೆ ಹೋದ. ಒಳಗೆಲ್ಲ ನಗೆ.

ಪುಣ್ಯ ರಾಮಭಟ್ಟರಿಗೆ ಸಿಟ್ಟು ಉಳಿದಿರಲಿಲ್ಲ.

ಒಮ್ಮೆ ಮಾತಾಡುತ್ತ ಗೋಪಾಲವೇಷಧಾರಿಗಳು ಜೋನಿಯನ್ನು ಅಪಹಾಸ್ಯ ಮಾಡುತ್ತಲಿದ್ದರು.

"ಹೌದಾ? ಯಾವ ಪುಸ್ತಕದಲ್ಲಿ ಕರ್ಣನಿಗೆ ಎರಡನೇ ವರ ಕೊಡುತ್ತೇನೆಂದು ಬ್ರಾಹ್ಮಣ ಹೇಳುತ್ತಾನೆಂದು ಬರೆದಿದೆ?" ಒಬ್ಬ ಕೇಳಿದರೆ.

"ಹೌದಯ್ಯ, ನಿನಗೇನು ಗೊತ್ತು ಗೆಂಡೆ. 'ವಚನ ಭಾರತ'ದಲ್ಲಿ ಹಾಗೇ ಬರೆದಿದೆ" ಎಂದ.

"ಹೌದಾ?"

"ನಿನಗೊತ್ತಿಲ್ಲದಿದ್ದರೆ ಜೋನಿಯನ್ನು ಕೇಳು. ಆತನಾದರೆ ಪಂಡಿತ."

ಜೋನಿ ಮೌನವಾಗೇ ಇದ್ದ.

ಇನ್ನೊಂದು ಸಲ ಆತ "ಕುನ್ನಿ ನೀನು, ಅನ್ನ ಅರಸಿಕೊಂಡು ಬಂದವ" ಎಂದರು ಅವರಿಬ್ಬರು.

ತನ್ನ ಪುಸ್ತಕವನ್ನು ಕದ್ದವರು ಕೂಡ ಅವರೆ ಎಂದು ಜೋನಿಗೆ ಸಂಶಯವಿತ್ತು.

ತಡೆಹಿಡಿದ ಪ್ರವಾಹ ಬುಗಿಲ್ ಎಂದು ಮುನ್ನುಗ್ಗಿ ಅಣೆಕಟ್ಟನ್ನೇ ಮುರಿದಂತಾಯಿತು. ಸಿಟ್ಟು ಕೈಮೀರಿ ಹೊರಚಿಮ್ಮಿತು. ಕೈಯಲ್ಲಿದ್ದ ಗೂಟದಿಂದ ಇಬ್ಬರಿಗೂ ಬಡಿದ. ಆ ನೋವನ್ನು ತಾಳಲಾರದೆ ಅವರು ಬೊಬ್ಬೆ ಹೊಡೆದರು. ಕೆಲಸಗಾರರೆಲ್ಲ ಓಡಿ ಬಂದರು.

"ಜೋನಿ ಕೆರಳಿದ ಹುಲಿಯಂತಾಗಿದ್ದ."

ಅಂದು ಅವನಿಗೆ ಅನ್ನ ಹಾಕಬಾರದೆಂದು ಭಾಗ್ವತರು ಬಾಣಸಿಗರಿಗೆ ಅಪ್ಪಣೆ ಮಾಡಿದರು. ದೇವಪ್ಪನೂ ಬಯ್ದ. ಜೋನಿ ಒಂದು ಕಡೆಯಲ್ಲಿ ಅಪಮಾನಿತನಾಗಿ ಕುಳಿತ. ಎಲ್ಲರಿಗೂ ಊಟವಾಯಿತು. ಪಾತ್ರೆ ತೊಳೆಯಲು ಆಳುಗಳು ಬಂದರು.

ಅಡಿಗೆಭಟ್ಟರು ಮನಸ್ಸು ತಡೆಯದೇ ಜೋನಿಯನ್ನು ಅರಸಿಬಂದರು. ಊಟದ ಮನೆಗೆ ಕರೆದುಕೊಂಡು ಹೋದರು.

"ಏನು ಜೋನಿ ಬಹಳ ಸಿಟ್ಟು ಬಂತಾ?"

ಜೋನಿಗೆ ತಮಾಷೆ ಮಾಡಬೇಕೆನ್ನಿಸಿತು.

"ಸಿಟ್ಟು ಅಲ್ಲ ಭಟ್ಟರೇ ಕ್ರೋಧ" ಎಂದ. ಭಟ್ಟರು ನಗುನಗುತ್ತ ಒತ್ತಾಯ ಮಾಡಿ ಉಣ್ಣಿಸಿದರು. ಜೋನಿ ಆ ರಾತ್ರಿ ಅಲ್ಲಿಂದ ಬಿಟ್ಟು ಹೊರಟುಬಿಟ್ಟ.

❑

೪. ಸನ್ಯಾಸಿಯ ಸಹವಾಸದಲ್ಲಿ ಸಿದ್ದಪ್ಪ

ಬೆಳಗಿನ ಜಾವ ಝುಮುಝುಮು ಬೆಳಕು ಹರಿಯುತ್ತಿದೆ. ಆಗಲೇ ಹಕ್ಕಿಗಳು ಗೂಡುಬಿಡಲು ಶುರುವೋ ಅಥವಾ ಗೂಡುಬಿಡುವಾಗಿನ ನಾದವೋ, ಎಂತೆಂಥದೋ ಹಕ್ಕಿಗಳು. ಒಂದು ರಸವನ್ನು ಸೇದುವಾಗ ಆಗುವಂತೆ ಸದ್ದು ಮಾಡುತ್ತಿದ್ದರೆ ಇನ್ನೊಂದು ಪದಾರ್ಥಕ್ಕೆ ಒಗ್ಗರಣೆ ಕೊಡುವಾಗಿನ ಗೊರ ಗೊರ ಎನ್ನುವಂತೆ ಕೂಗುತ್ತದೆ. ಇನ್ನೊಂದು ಸಿಳ್ಳು ಹಾಕಿದರೆ ಮತ್ತೆ ಕೆಲವು ಚಿಂವ್ ಚಿಂವ್ ಎನ್ನುತ್ತಿವೆ. ಪೂರ್ವದಲ್ಲಿ ಮೋಡ ಮುಸುಕಿದ್ದರಿಂದಲೋ ಅಥವಾ ಮಲೆಗಳ ಮೇಲೆ ಇನ್ನೂ ಸೂರ್ಯ ಬರದಿದ್ದರಿಂದಲೋ ಈ ಸೂರ್ಯನ ನೇರ ಕಿರಣ ಭೂಮಿಯನ್ನು ತಬ್ಬಿಕೊಂಡಿರಲಿಲ್ಲ.

ದೇವಸ್ಥಾನದ ಎಡಪಕ್ಕದ ವಿಶಾಲವಾದ ಮಂಟಪ(ಜಗಲಿ)ದಲ್ಲಿ ಒಂದು ಕಡೆ ಸಿದ್ದಪ್ಪ ಸಂಧ್ಯಾವಂದನೆಗೆ ಕುಳಿತಿದ್ದಾನೆ.

ಆ ಚಳಿಯಲ್ಲಿ ಮೈಮೇಲೆ ಬಟ್ಟೆ ಹೊದೆದಿಲ್ಲ. ಚಿನ್ನದ ಬಣ್ಣದ ಜರಿ ಅಂಚಿನ ಕೇಸರಿ ಬಣ್ಣದ ಮಡಿ(ಶಾಲನ್ನು) ಉಟ್ಟಿದ್ದಾನೆ. ಮುಂದುಗಡೆ ಬೀಳುವ ಹಾಗೆ ನೆರಿ ಮಾಡಿ ಇಳಿಬಿಟ್ಟು ಎಡಬದಿಯ ಭಾಗವನ್ನು ಹಿಂದೆ ಒಯ್ದು ಸೊಂಟಕ್ಕೆ ಸಿಕ್ಕಿಸಿದ್ದಾನೆ. ಮೈಮೇಲೆ ಜನಿವಾರವಿದೆ. ಒಂದು ಚಿಕ್ಕ ಮಣಿಗಳಿಂದ ಪೋಣಿಸಿದ ರುದ್ರಾಕ್ಷಿಸರ ಕೊರಳಿಗಿದೆ. ಮೋರೆ ತುಸು ಉದ್ದವಿದೆ. ಕಪಾಲು ತುಂಬಿಕೊಂಡಿದೆ. ತುಟಿ ಮೊಗ್ಗು ಅರಳಿದಂತಿದೆ. ಮೂಗಿನ ತುದಿ ಚೂಪಗಿದೆ. ಹಣೆಯ ಮೇಲೆ ಅಡ್ಡವಾಗಿ ತೆಗೆದ ಮೂರು ವಿಭೂತಿ ನಾಮವಿದೆ. ಹಾಗೆಯೇ ತೋಳಿನ ಮೇಲೂ ಆ ಗುರುತು ಇದೆ. ತಲೆಯನ್ನು ಕ್ಷೌರ ಮಾಡಿ ಬೋಳು ಮಾಡಲಾಗಿದೆ. ತಲೆಯ ಹಿಂಬದಿಯಲ್ಲಿ ಮೇಲಕ್ಕೆ ಗೋಪಾದದಷ್ಟು ಚಂಡಿಕೆ(ಜುಟ್ಟು) ಇದೆ. ಅದನ್ನು ಗಂಟುಹಾಕಲಾಗಿದೆ. ಮುಚ್ಚಿದ ಕಣ್ಣಿನ ರೆಪ್ಪೆ ಅರೆ ಅರಳಲ್ಲಿ ತಾವರೆಯ ಎಸಳ ಮೇಲ್ಮೈಯಂತಿದೆ. ಮುಂದುಗಡೆ ಹರಿವಾಣ, ನೀರಿನ ತಟ್ಟೆ ಇದೆ. ಹುಡುಗ ಪದ್ಮಾಸನ ಹಾಕಿ ಕುಳಿತು ಸಂಧ್ಯಾವಂದನೆಯ ಮಂತ್ರ ಉಚ್ಚರಿಸುತ್ತಿದ್ದಾನೆ. ಅವನ ಧ್ವನಿ ಅಷ್ಟು ಎತ್ತರವೂ ಅಲ್ಲದ ಅತಿ ಸಣ್ಣದೂ ಅಲ್ಲದ ರೀತಿಯಿಂದ ಕಿವಿಗೆ ಸಂತೋಷ ಉಂಟಾಗುವ ಹಾಗೆ ಮಂತ್ರದ ನಾದ ಕೇಳಿಬರುತ್ತದೆ.

ಕಿಶೋರ ಸಿದ್ದಪ್ಪ ಶಾಂತಿ ಮಂತ್ರವನ್ನು ಹೇಳುತ್ತಿದ್ದಾನೆ.

ಅಸತೋಮಾ ಸದ್ಗಮಯ ತಮಸೋಮಾ ಜ್ಯೋತಿರ್ಗಮಯ: ಸಹನಾ ಭವತು ಸಹನೌ ಭುನಕ್ತು ಸಹವೀರ್ಯಂ ಕರವಾವಹೈ ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ಓಂ

ಶಾಂತಿಃ ಶಾಂತಿಃ ಶಾಂತಿಃ ಎಂದು ಉಚ್ಚರಿಸಿ ಸಿದ್ದಪ್ಪ ಕಣ್ಣು ತೆರೆದ. ಮುಂದಿನ ಬಟ್ಟಲಲ್ಲಿ ಉದ್ಧರಣೆಯಿಂದ ಮೂರು ಸಲ ನೀರು ಚೆಲ್ಲಿ 'ಓಂ' ಎಂದ.

ಅಲ್ಲೇ ಕುಳಿತು ತನಗೆ ಈಗೆಲ್ಲ ಮಂತ್ರ ಸಹಜವಾಗುತ್ತಿದೆ ಎನಿಸುತ್ತಿದೆ ಅವನಿಗೆ. ಮೊದಲೊಮ್ಮೆ ಹೊಸದಲ್ಲಿ ಗುರುಗಳನ್ನೇ ಕೇಳಿದ್ದ. ನಾವು ಶಾಂತಿಃ ಶಾಂತಿಃ ಶಾಂತಿಃ ಎಂದು ಹೇಳಿಬಿಟ್ಟರೆ ಶಾಂತಿ ಉಂಟಾಗುತ್ತದೆಯೇ? ಸಹನೌ ಭುನಕ್ತು ಎಂದು ಹೇಳಿದ ಮಾತ್ರಕ್ಕೆ ಒಟ್ಟು ಉಣ್ಣುತ್ತೇವೆಯೇ?

ಇದೆಲ್ಲ ಯಾಕೆ?

ಗುರುಗಳು ಗಂಭೀರವಾಗಿ ಹೇಳಿದ್ದರು. "ವತ್ಸ, ನಿನ್ನ ಶಂಕೆ ಸಹಜವಾದುದೆ. ನೀನಿನ್ನೂ ಕಿಶೋರ. ಮಾತು ಕ್ರಿಯೆಗೆ ಪ್ರೇರಕ. ಮೊದಲು ನಿಶ್ಚಯ ಅನಂತರ ಕ್ರಿಯೆ."

ಅವರ ಮಾತಿನಲ್ಲಿ ಪ್ರೀತಿ ಸೂರೆ ಹೋಗಿತ್ತು. ಸಿದ್ದಪ್ಪನಿಗೆ ಒಂದು ರೀತಿಯ ಸಲಿಗೆ ಅವರಲ್ಲಿ ಇತ್ತು.

ಅಷ್ಟರಲ್ಲಿ ಒಂದು ನಾಯಿ ಮುಂದಿನ ಅಂಗಳದಲ್ಲಿ ಹಾದುಹೋಯಿತು.

ಸಿದ್ದಪ್ಪನಿಗೆ ನಾಯಿಯ ಮೇಲೆ ಬಲು ಅಕ್ಕರೆ. ಅವನು ಒಮ್ಮೆ ಒಂದು ನಾಯಿಮರಿಯನ್ನು ಬೀದಿಯಿಂದ ಹಿಡಿದು ತಂದಿದ್ದ. ಅದು ಪೂರ್ಣ ದೊಡ್ಡದಾಗದಿದ್ದರೂ ಚಿಕ್ಕ ನಾಯಿಯೇ ಆಗಿತ್ತು. ಅದರ ಸಲಿಗೆ ಎಷ್ಟೆಂದರೆ ಮುಂದೆ ಬಂದು ಎರಡು ಕಾಲನ್ನು ಒಡೆಯನ ಮೈಗೆ ಚಾಚುತ್ತಿತ್ತು. ಎಷ್ಟು ಚುರುಕೆಂದರೆ ರಾತ್ರಿ ತುಸು ಸದ್ದಾದರೂ ಕಿರುಚುತ್ತಿತ್ತು. ತನಗೆ ನಿದ್ರೆಗೆ ತೊಂದರೆಯಾಗುತ್ತಿತ್ತು. ಗುರುಗಳಿಗೆ ನಿದ್ರಾಭಂಗ ಆಗದಿರಲು ಸಾಧ್ಯವೇ.

ಆತ ಅದರೊಡನೆ ಆಟವಾಡುತ್ತಿರುವಾಗ ಒಮ್ಮೆ ಗುರುಗಳು ಕರೆದರು.

"ಸಿದ್ದಪ್ಪ, ಬ್ರಾಹ್ಮಣರು ನಾಯಿಯೊಡನೆ ಇಷ್ಟು ಸಲಿಗೆ ಮಾಡಬಾರದು. ಅದರಲ್ಲೂ ವ್ರತಸ್ಥನ ನಿಷ್ಠೆಯಲ್ಲಿರುವ ನಿನ್ನಂಥವರು. ನಾನು ಆಶ್ರಮವಾಸಿ."

"ಪ್ರೀತಿ ಅನ್ನಿಸಿತು ಗುರುಗಳೇ."

"ಎಲ್ಲವೂ ಮಾಯೆ. ಪಶು ಮನಸ್ಸನ್ನು ಅತ್ತಿತ್ತ ಹರಿಯಗೊಡದೇ ಆತ್ಮವನ್ನು ಉದ್ಧರಿಸಿ ಕೊಳ್ಳಬೇಕು."

"ಆತ್ಮವೇ ಪರಮಾತ್ಮ ಅನ್ನುವುದಾದರೆ ಪರಮಾತ್ಮನನ್ನೇ ಉದ್ಧಾರ ಮಾಡಲು ನಾನು ಯಾರು ಗುರುಗಳೇ."

ಗುರುಗಳು ಸಿದ್ದಪ್ಪನಿಗೆ ಒಂದು ಕತೆ ಹೇಳಿದರು.

"ಸಿದ್ದ, ಒಮ್ಮೆ ವ್ಯಾಸರಾಯರು ತಮ್ಮ ಶಿಷ್ಯರ ಮಧ್ಯೆ ಒಂದು ಪ್ರಶ್ನೆ ಇಟ್ಟರಂತೆ."

"ಯಾವುದು ಗುರುಗಳೇ."

"ಸಾವಧಾನ ಮಾಡು ಹೇಳುತ್ತೇನೆ. ನಿನ್ನ ಈ ರೀತಿ ಆತುರತೆ ಸಲ್ಲದು. ಸಾಧಕನು ಸಮಾಧಾನಿಯಾಗಿರಬೇಕು."

ಅವರ ಪ್ರಶ್ನೆ–ಪರಮಾತ್ಮನಲ್ಲಿಗೆ ಯಾರು ಹೋಗಬಹುದು? ಶಿಷ್ಯರೆಲ್ಲರೂ ಆಚಾರ್ಯರು ಹೋಗಬಹುದು ಎಂದು ಅಂದರು.

"ಅವರು ಕಳ್ಳ ಶಿಷ್ಯರು, ಗುರುಗಳೇ."

"ಯಾಕೆ?"

"ಗುರುಗಳು ಜೀವ ತ್ಯಜಿಸಿ ಪರಮಾತ್ಮನಲ್ಲಿ ಹೋದರೆ ತಾವು ಮನೆಗೆ ಹೋಗಬಹುದೆಂದು ತಿಳಿದು ಹಾಗೆ ಹೇಳಿದರು."

ಗುರುಗಳಿಗೆ ಹುಡುಗನ 'ಆಧಿಕ ಪ್ರಸಂಗ'ಕ್ಕೆ ತುಸು ಸಿಟ್ಟು ಬಂತು.

"ಸುಮ್ಮನೆ ಕೇಳು".

ಗುರುಗಳು ಎಲ್ಲರನ್ನು ಕೇಳಿಯಾದ ಮೇಲೆ ಕನಕದಾಸರನ್ನು ಕೇಳಿದರು.

"ಕನಕ, ಪರಮಾತ್ಮನಲ್ಲಿಗೆ ಯಾರು ಹೋದರೆ ಹೋಗಬಹುದು."

"ನಾನು ಹೋದರೆ ಹೋಗಬಹುದು."

ಎಲ್ಲರೂ ಕನಕದಾಸನನ್ನು ಬಯ್ದರು. ಆತನಿಗೆ ಸೊಕ್ಕು ಹಾಗೆ ಅಂತ. ಆಮೇಲೆ ಗುರುಗಳು ವಿವರಿಸಿ ಹೇಳಿದರು. "ಕನಕ ಸರಿಯಾಗಿ ಹೇಳಿದ್ದಾನೆ. ನಾನು ಹೋದರೆ ಹೋಗಬಹುದು. ಈ 'ನಾನು' ಎನ್ನುವುದೇ ಅಹಂ. ಅಂದರೆ ಅಹಂಕಾರ. ಇದೇ ಮಾಯೆ. ಅಹಂಕಾರ ಅಳಿದರೆ ಮಾತ್ರ ಪರಮಾತ್ಮನ ಸಂಪರ್ಕ. ಆದ್ದರಿಂದ ನಾನು ಪರಮಾತ್ಮನನ್ನು ಉದ್ಧರಿಸುತ್ತೇನೆ ಎಂಬ ಅಹಂಕಾರವನ್ನು ಗೆಲ್ಲು."

ಸಿದ್ದಪ್ಪನಿಗೆ ಎಲ್ಲಾ ಗೊಂದಲವಾಯಿತು. ಅವನಿಗೆ ಗುರುಗಳೊಡನೆ ಸಲಿಗೆ ಇದ್ದರೂ ಭಯವೂ ಇತ್ತು. ಅಂತೂ ಸಿದ್ದಪ್ಪನ ಆತ್ಮೋದ್ಧಾರದ ಒಂದು ಭಾಗವಾಗಿ ಕುನ್ನಿಯ ಮರಿಯನ್ನು ತ್ಯಜಿಸ ಬೇಕಾಯಿತು. ಆತ ಎಲ್ಲಾದರೂ ಬೀದಿಯಲ್ಲಿ ಕಂಡರೆ ಬಾಲ ಕುಣಿಸುತ್ತ ಬರುತ್ತಿತ್ತು. ಒಳಗೆ ಸಿದ್ದಪ್ಪ ಅದರ ಬೊಳ್ಳೈಸುತ್ತಿದ್ದ; ತಟ್ಟನೆ ಕೈ ತೆಗೆದು ಸುತ್ತ ನೋಡುತ್ತಿದ್ದ.

ಆಶ್ರಮದ ಮತ್ತು ಅದೇ ದೇವಸ್ಥಾನದ ಸುತ್ತ ಮುತ್ತ ನಾಯಿಯೇ ಇದ್ದಿರಲಿಲ್ಲ. ಯಾರಿಗೂ ನಿದ್ರಾಭಂಗವಾಗುತ್ತಿರಲಿಲ್ಲ.

ಆದರೆ ಒಂದು ಬೆಕ್ಕು ಮಾತ್ರ ಅಲ್ಲಿ ಇತ್ತು. ಅದನ್ನು ಆತ ಮುಟ್ಟುತ್ತಿರಲಿಲ್ಲ. ಅದಕ್ಕೆ ದಿನಾಲು ಹಾಲು ತಪ್ಪಿಸುತ್ತಿರಲಿಲ್ಲ. ಬಂಗಾರ ಬಣ್ಣದ ಮೈಚರ್ಮದ ಆ ಬೆಕ್ಕಿನ ಕಾಲ ತುದಿ ಬೆಳ್ಳಗೆ. ಮೀಸೆಯನ್ನು ಕುಣಿಸುತ್ತ ಮೆತ್ತಗೆ ನಡೆದು ಬರುತ್ತಿತ್ತು. ಮುದ್ದಾಗಿ ಕಾಣುತ್ತಿತ್ತು. ಜಿರಲೆ ಕಂಡರೆ ಸಾಕು, ಅದನ್ನು ಹಿಡಿಯದೇ ಬಿಡುತ್ತಿರಲಿಲ್ಲ. ಹೀಗಾಗಿ ಆಶ್ರಮದ ಬಾಳೆಹಣ್ಣು ಸುರಕ್ಷಿತ ವಾಗಿರುತ್ತಿತ್ತು.

ಸಿದ್ದಪ್ಪ ಸಂಧ್ಯಾವಂದನೆ ಮುಗಿಸಿ ಕುಳಿತಿರುವ ಹೊತ್ತಿಗೆ ಗುರುಗಳೂ ಧ್ಯಾನದಿಂದ ಎಚ್ಚೆತ್ತರು. ಅವರು ಕಣ್ಣು ತೆರೆದೊಡನೆ ಸಿದ್ದಪ್ಪ ಹೋಗಿ ಅವರಿಗೆ ವಂದಿಸಿದ. 'ಓಂ' ಅಂದರು ಗುರುಗಳು, ಒಂದು ಹಸ್ತ ಮೇಲೆತ್ತಿ.

ಗುರುಗಳು ಧ್ಯಾನ ಮುಗಿದೊಡನೆ ಒಳಕ್ಕೆ ಹೋಗುತ್ತಿದ್ದರು.. ಅವರಿಗೆ ಉಪಹಾರ ಸಿದ್ಧಪಡಿಸು ತ್ತಿದ್ದ ಸಿದ್ದಪ್ಪ.

ಉಪಹಾರ ಎಂದರೆ ಚಹ, ಕಾಫಿ, ದೋಸೆ ಅಲ್ಲ. ಶಾಂತಂ ಪಾಪಂ. ಅಂಥದ್ದನ್ನೆಲ್ಲ ಅವರು ಮುಟ್ಟುವುದಿಲ್ಲ. ಒಂದು ಲೋಟಾ ಶುದ್ಧ ಹಾಲು – ಸಕ್ಕರೆ ಹಾಕಿ ಕಾಸಿದ್ದು. ಎರಡು ಕರೆಬಾಳೆ ಹಣ್ಣು. ಮತ್ತೇನಾದರೂ ಹಣ್ಣುಹಂಪಲು, ತುಪ್ಪದಲ್ಲಿ ಅದ್ದಿದ ಖರ್ಜೂರ ಇತ್ಯಾದಿ. ಸಿದ್ದಪ್ಪನಿಗೂ ಅದು ಅಭ್ಯಾಸವಾಗಿದೆ.

ಇನ್ನೊಂದು ವಾರದಲ್ಲಿ ಆಶ್ರಮದಲ್ಲಿ ಲೋಕಕಲ್ಯಾಣಾರ್ಥ ಒಂದು ಯಜ್ಞ ಆಗಲಿತ್ತು. ಅದಕ್ಕೆ ದೇವಸ್ಥಾನದ ಇತರ ಭಾಗವನ್ನು ಸಿದ್ಧಗೊಳಿಸಲಾಗಿತ್ತು. ಯಜ್ಞಕ್ಕಾಗಿ ಪ್ರಸಿದ್ಧ ವೈದಿಕನನ್ನು ಆಮಂತ್ರಿಸಲಾಗಿತ್ತು. ಯಜ್ಞದ ಉಸ್ತುವಾರಿಯನ್ನು ಕಂಟ್ರಾಕ್ಟರ ನಂಜಪ್ಪನವರೂ ಪ್ರಸಿದ್ಧ ಹೋಟೆಲ ಮಾಲಿಕ ಗುಂಡಪ್ಪನವರೂ ವಹಿಸಿಕೊಂಡಿದ್ದರು. ಅದನ್ನು ಉದ್ಘಾಟಿಸಲು ವಿದ್ಯಾ ಮಂತ್ರಿಗಳು ಬರುವವರಿದ್ದರು. ಅಧ್ಯಕ್ಷತೆ ವಹಿಸಲು ಬೃಹನ್ ಹತ್ತುಲಕ್ಷ ಮಠದ ಸ್ವಾಮಿಗಳು ಬರುವವರಿದ್ದರು.

ಗುರುಗಳ ಅಪ್ಪಣೆಯಂತೆ ಸಿದ್ದಪ್ಪ ಈಗ ಅವರ ಪತ್ರ ತೆಗೆದುಕೊಂಡು ಅಲ್ಲಿಗೆ ಹೋಗಬೇಕು. ಹಾಗೆ ಹೊರಗೆ ಹೋಗುವಾಗ ಸಿದ್ದಪ್ಪ ಒಂದು ಮಂಕಿ ಕ್ಯಾಪನ್ನು ಧರಿಸುತ್ತಾನೆ. ಅದರಲ್ಲಿ ಅವನ ಜುಟ್ಟು ಮತ್ತು ಬೋಳುತಲೆ ಅಡಗಿರುತ್ತದೆ. ಒಂದು ಲುಂಗಿ ಸುತ್ತುತ್ತಾನೆ. ಒಂದು ಜುಬ್ಬ (ನೆಹರು ಶರ್ಟ್) ಧರಿಸುತ್ತಾನೆ. ಹಣೆಗೆ ಗಂಧವಿರುತ್ತದೆ.

ನಂಜಪ್ಪನವರು ತಿರುಗಿ ಚೀಟಿ ಬರೆದು ಕೊಡುತ್ತಾರೆ ಅಥವಾ ಹೋಟೆಲ ಗುಂಡಪ್ಪನವರ ಹತ್ತಿರ ಬಂದು ಏನೋ ಹೇಳಿ ಹೋಗುತ್ತಾರೆ. ಗುಂಡಪ್ಪನವರು ಚೀಟಿ ಬರೆದು ಕೊಡುತ್ತಾರೆ.

ಸಿದ್ದಪ್ಪನಿಗೆ ಓದು ಬರಹ ಬಾರದು. ಅವರು ಕೊಟ್ಟ ಚೀಟಿ ಇವರಿಗೂ ಇವರು ಕೊಟ್ಟಿದ್ದನ್ನು ಅವರಿಗೂ ತಲ್ಪಿಸುತ್ತಿದ್ದ. ಕೆಲವು ಸಲ ಅವರೇನಾದರೂ ಹೇಳಿದರೆ ಅದನ್ನು ತಲ್ಪಿಸುತ್ತಿದ್ದ. ಆದರೆ ಅವರು ಹೆಚ್ಚೇನೂ ಹೇಳುತ್ತಿರಲಿಲ್ಲ.

ಆದರೆ ಗುಂಡಪ್ಪನವರಲ್ಲಿ ಹೋಗುವುದೆಂದರೆ ಸಿದ್ದಪ್ಪನಿಗೆ ಇಷ್ಟವೇ, ಯಾಕೆಂದರೆ ಅವರದ್ದು ಹೋಟೆಲ್! ಸಿದ್ದಪ್ಪ ಹೋದಾಗ ಮಸಾಲೆ ದೋಸೆ, ಖೀರು, ಬೂಂದಿಲಾಡು ಇಂಥ ವಿಶೇಷ (ಇಂದಿನ ಸ್ಪೆಶಲ್‌ನ್ನೇ) ಕೊಡುತ್ತಾರೆ. ಈ ಮಸಾಲೆ ದೋಸೆ ತಿನ್ನಲು ಸಿಕ್ಕುವುದಾದರೆ ಆತ್ಮೋನ್ನತಿಯೂ ಬೇಡ, ಮುಕ್ತಿಯೂ ಬೇಡ ಎನ್ನಿಸುತ್ತದೆ ಸಿದ್ದಪ್ಪನಿಗೆ. ಆ ದಿನ ಹೊರಟಾಗಲೋ ಬಾನು ಮುಗಿಲಿಂದ ತುಂಬಿಹೋಗಿತ್ತು. ಪಶ್ಚಿಮದ ಗಾಳಿ ಬಲವಾಗಿ ಬೀಸುತ್ತಿತ್ತು. ತೋಟಪಟ್ಟಿಯೊಳಗಿನ ಅಡಿಕೆ, ತೆಂಗಿನಮರಗಳು ತೂಗಾಡುತ್ತಿದ್ದವು. ಅದೊಂದು ನರ್ತನದಂತೆ ಇತ್ತು. ನರ್ತನವೆಂದರೆ ಸಾಮಾನ್ಯದ್ದಲ್ಲ. ಶಿವನು ಪ್ರಳಯಕಾಲದಲ್ಲಿ ತಾಂಡವ ಆಡುತ್ತಾನಂತೆ. ಅಂಥ ರುದ್ರರಮಣೀಯ ನರ್ತನ ಅದು.

ಗಾಳಿ ರಭಸಕ್ಕೆ ತೋಟಪಟ್ಟಿಯೊಳಗಿನ ತೆಂಗಿನ ಮರಗಳು ಮುರಿದು ಬೀಳುತ್ತಿದ್ದವು. ರಸ್ತೆಯ ಬದಿಯ ಮರಗಳು ಉರುಳಿ ರಸ್ತೆ ಸಂಚಾರವೇ ನಿಲ್ಲುವುದುಂಟು. ಆಕಾಶ ಮೊದಮೊದಲು ತೆಳ್ಳಗಿನ ಚಾದರದ ಸೆರಗನ್ನು ಹೊದೆದಂತೆ ಕಾಣುತ್ತದೆ. ಬರಬರುತ್ತ ಮೋಡ ದಟ್ಟೈಸುತ್ತದೆ. ಅದು ಬಹುಬೇಗ ಆಕಾಶದಲ್ಲಿ ಹಾರುತ್ತದೆ. ಅದು ಆಕಾಶದ ಕಡಲು. ಸಿದ್ದಪ್ಪ ನಿಂತು ನೋಡುತ್ತಾನೆ. ಆತನಿಗೆ ತಾನು ಬಂದ ಕೆಲಸವೇ ಮರೆಯುತ್ತದೆ. ಆ ಗಾಳಿಗೆ ಕುಣಿವ ಮರಗಳೊಡನೆ ಕುಣಿಯಬೇಕೆಂದು ತೋರುತ್ತದೆ. ಮುಂದಿನ ಮಲೆ ತುದಿಗೆ ಮೋಡ ಸುತ್ತಿಕೊಳ್ಳುತ್ತದೆ. ಮೋಡ ಕಪ್ಪು ಎನ್ನುವುದುಂಟು. ಆದರೆ ಕಪ್ಪು ಮಾತ್ರ ಅಲ್ಲ, ಹತ್ತಾರು ಕಪ್ಪುಗಳು: ತೆಳು ಕಪ್ಪು, ಸಾದಾ ಕಪ್ಪು, ದಟ್ಟ ಕಪ್ಪು, ಬಿಳಿ ಕಪ್ಪು, ಕಾಡಿಗೆ ಕಪ್ಪು ಆಹಾ! ಇದೆಂಥಾ ವಿಸ್ಮಯ. ಇದನ್ನು ನೋಡಿ ನವಿಲು ಗರಿಬಿಚ್ಚಿ ಕುಣಿಯುತ್ತದಂತೆ. ವರ್ಷಧಾರೆ ಜೋರಾದಂತೆ ಹುಚ್ಚೆದ್ದು ಕುಣಿಯುತ್ತದಂತೆ. ನವಿಲು ಗರಿಯನ್ನು ಸಿದ್ದಪ್ಪ ನೋಡಿದ್ದ. ಸುಗ್ಗಿ ಕುಣಿವವರು ನವಿಲು ಗರಿ ಕುಚ್ಚ (ಗೊಂಚಲ)ವನ್ನು ಹಿಡಿದಿರುತ್ತಿದ್ದರು. ಕಣ್ಣು ಕೋರೈಸುವ ಮಿಂಚು ಬಳ್ಳಿ ಬಳ್ಳಿಯಾಗಿ ಆಕಾಶದಿಂದ ನೆಲಕ್ಕೆ ಹರಿದಂತೆ. ಅದರ ಸಂಗಡವೇ ಎನ್ನುವಂತೆ ಗುಡುಗಿನ ಸದ್ದು ಕಿವಿ ಕೆಪ್ಪು ಮಾಡುವಂತೆ.

ಸಿದ್ದಪ್ಪನಿಗೆ ಭಯವಾಯಿತು. ಅಲ್ಲಿಯೇ ಸಮೀಪದ ಕಟ್ಟಡ ಆಶ್ರಯದಲ್ಲಿ ಇತರರೊಂದಿಗೆ ನಿಂತ.

ಮಳೆ ಸುರಿಯಿತು. ನೋಡು ನೋಡುತ್ತಿದ್ದಂತೆ ನೀರು ರಸ್ತೆ ತುಂಬಿ ಹರಿಯಿತು. ಗಟಾರ ತುಂಬಿತು. ಮುಂದಿನ ಸೇತುವೆಯ ಅಡಿಯಲ್ಲಿ ಹೊಳೆವ ನದಿ ಕೆಂಪು ನೀರಿನ ಸೆಳವಿನಿಂದ ಭೋರ್ಗರೆಯಿತು. ಅಬ್ಬಬ್ಬಾ! ಎಂಥ ಮಳೆಯಪ್ಪ ಎನ್ನುತ್ತಿದ್ದರು ಜನ. ಹಾಗೆ ಹೇಳುತ್ತಿರುವಾಗಲೇ ಹೊಳೆಯಲ್ಲಿ ಯಾರದೋ ಎಮ್ಮೆಯೊಂದು ಕೊಚ್ಚಿ ಹೋಯಿತು. "ಅಯ್ಯೋ ಪಾಪ! ಎಮ್ಮೆ

ಹೋಯಿತಲ್ಲ" ಎಂದು ಕೆಲಸದವರು ಕೊಡೆ ಅರಳಿಸಿ ಅದು ಹೋದ ದಿಕ್ಕಿನ ಕಡೆಗೆ ಓಡಿದರು. ನಿಂತು ನೋಡಿದರು "ಹೋಯ್ತೋ ಹೋಯ್ತೋ" ಎಂದು ಕೂಗಿದರು.

"ಅದೊ ಅದೋ ಮುಂದಿನ ಸುಳಿಗುಂಡಿಯಲ್ಲಿ ಮುಳುಗಿತು."

ಮುಂದೆ ಎಮ್ಮೆ ಎದ್ದುದನ್ನು ಯಾರೂ ಕಾಣಲಿಲ್ಲ. ಒಂದು ಒಂದೂವರೆ ತಾಸಿನ ಮಳೆ ಸಣ್ಣಗಾಯಿತು. ಸಿದ್ದಪ್ಪ ತನ್ನ ಕೆಲಸ ಮುಗಿಸಿ ಬಂದ.

"ಗುರುಗಳೇ ಮಳೆ ರಭಸದಲ್ಲಿ ನಾನು ಸತ್ತೇ ಹೋಗ್ತಿದ್ದೆ."

"ಹೋದರೆ ಎಲ್ಲಿ ಬಿಡುತ್ತಿದ್ದಿ, ಮತ್ತೆ ಹುಟ್ಟಿ ನಿನ್ನಲ್ಲೇ ಬರುತ್ತಿದ್ದೆ. ಋಣಾನುಬಂಧ."

"ನಾನು ಮತ್ತೆ ಎಲ್ಲೋ ಹೋಗಿ ಹುಟ್ಟಿ ಬೆಳೆದು ನಿಮ್ಮಲ್ಲಿ ಬರುವವರೆಗೆ ನೀವು ಎಲ್ಲಿ ಇರ್ತಿದ್ದಿರೋ." ಸಿದ್ದಪ್ಪ ಮಾತು ಪಟಾಯಿಸಿಬಿಟ್ಟಿದ್ದ. ಆದರೆ ತುಟಿಕಚ್ಚಿಕೊಂಡ ಅವನಿಗೆ ಭಯವಾಗಿತ್ತು. ಆದರೆ ಗುರುಗಳು ಪ್ರಸನ್ನರಾಗೇ ಇದ್ದರು.

"ಸಿದ್ದ ನಿನಗೆ ಏನೂ ಆಗುತ್ತಿರಲಿಲ್ಲ. ಬಿರುಗಾಳಿ ಮಳೆ ಬಂದಾಗಲೇ ಅನ್ನಿಸಿತ್ತು ನೀನು ಮಳೆಯಲ್ಲಿ ಸಿಕ್ಕಿಬೀಳಬಹುದು ಎಂದು. ಆದರೆ ನನ್ನ ದಿವ್ಯ ದೃಷ್ಟಿಯಿಂದ ನೋಡಿ ತಿಳಿದೆ. ನೀನು ಸುರಕ್ಷಿತ."

"ತಮ್ಮ ಅನುಗ್ರಹ ಗುರುಗಳೇ."

ಗುರುಗಳಿಗೆ ಅಂಥ ಪ್ರೀತಿ ತನ್ನ ಮೇಲೆ ಇರುವುದಂತೂ ಹೌದು.

ಅವನಿಗೆ ತಾನು ಗುರುಗಳನ್ನು ಭೆಟ್ಟಿಯಾದಾಗಿನ ಸಂದರ್ಭದ ನೆನಪಾಯಿತು.

ಅದೊಂದು ದಿನ ರಾತ್ರಿ. ಸಿದ್ದಪ್ಪ ತನಗರಿವಿಲ್ಲದೇ ಆಶ್ರಮಕ್ಕೆ ಬಂದಿದ್ದ. ಎಲ್ಲವೂ ಬಾಗಿಲು ಹಾಕಿತ್ತು. ಎಲ್ಲಾ ಸ್ತಬ್ಧ. ಸಿದ್ದಪ್ಪ ಅರೆನಿದ್ದೆಯಲ್ಲಿ ಎಂಬಂತೆ ಆಶ್ರಮದ ಜಗಲಿಯ ಮೇಲೆ ಬಂದು ಮಲಗಿದ್ದ.

ಚುಮ್ ಚುಮ್ ಬೆಳಗು, ಗುರುಗಳ ಕಾಲಿಗೆ ಸಿದ್ದಪ್ಪ ಸಿಲುಕಿದ್ದ. ಗುರುಗಳು ಬೆಚ್ಚಿದರು.

"ಯಾರದು" ಎಂದು ಸಿಟ್ಟಿನಿಂದ ಕೇಳಿದರು.

"ನಾನು, ತಪ್ಪಾಯ್ತು, ನಾನು ನಾನು" ಎಂದು ತಡವರಿಸಿದ.

ಕೂಡಲೇ ಗುರುಗಳ ಸ್ವರ ಸಮಾಧಾನಕ್ಕೆ ಬಂತು.

"ಏನು ಬೇಕಿತ್ತು?"

"ನನಗೆ ತಿಳಿಯದೇ ಬಂದೆ, ನಾನು ಹೀಗೆ ಬಂದೆ."

"ವತ್ಸ, ನಿನ್ನ ಆತ್ಮ ನನ್ನನ್ನೇ ಅರಸಿ ಬಂದಿದೆ. ನೀನು ಬರುತ್ತೀ ಎಂದು ನನಗೆ ರಾತ್ರಿಯೇ ತಿಳಿದಿತ್ತು. ಇನ್ನೂ ಯಾಕೆ ಬಂದಿಲ್ಲ ಎಂದೇ ನೋಡಲು ಈ ಕತ್ತಲೆಯಲ್ಲಿ ಹೊರಬಂದಿದ್ದೆ. ಹೆದರಬೇಡ ಎಲ್ಲಾ ಋಣಾನುಬಂಧ."

"ಇಲ್ಲ ಇಲ್ಲ, ನಾನು ಹೊರಟೆ."

"ಎಲ್ಲಿಗೆ ಎತ್ತ? ಹೋಗುವುದಾದರೆ ಇಲ್ಲಿಗೆ ಬರುತ್ತಿದ್ದೆಯಾ? ನಿನಗೇನು ಬೇಕು?"

"ನಾನು ಓದಬೇಕು, ಪುಸ್ತಕ ಓದಬೇಕು?"

"ಎಷ್ಟು ಕಲಿತಿರುವೆ?"

ಏನು ಹೇಳಬೇಕೆಂಬುದೇ ಸಿದ್ದಪ್ಪನಿಗೆ ತಿಳಿಯಲಿಲ್ಲ.

"ನಾನು ಏನೂ ಕಲಿತಿಲ್ಲ."

"ಸರಿ, ಕಲಿಯುವಿಯಂತೆ."

"ಹೇಗೆ?"

"ನಮ್ಮಲ್ಲಿ ಎಲ್ಲ ವ್ಯವಸ್ಥೆಯಿದೆ. ಸಮಾಧಾನ ಮಾಡಿಕೊ" ಎಂದರು. ಕೈ ತೆಗೆದು ಅಕ್ಷತೆಯನ್ನೇ ಕೈಗೆ ಹಾಕಿದರು.

"ಕೈ ಮುಚ್ಚು ಎಂದರು."

ಐದು ನಿಮಿಷದ ನಂತರ "ಮುಷ್ಟಿ ತೆರೆ" ಎಂದರು.

ಸಿದ್ದಪ್ಪ ಮುಷ್ಟಿ ತೆರೆದಾಗ ಅಲ್ಲಿ ಬಂಗಾರದ ಅಕ್ಕಿಗಳಿದ್ದವು.

ಸಿದ್ದಪ್ಪ ಶಿಷ್ಯನಾದ.

ಅವರು ಹೇಳಿದರು. "ನಮ್ಮ ಖಾಯಂ ಆಶ್ರಮ ಆಂಧ್ರದಲ್ಲಿ ಇದೆ. ಆಶ್ರಮದ ವತಿಯಿಂದ ಶಾಲೆ ಕಾಲೇಜುಗಳು ನಡೆಯುತ್ತವೆ. ದಿನಾಲು ನೂರಾರು ಜನ ಊಟ ಮಾಡುತ್ತಾರೆ. ನೂರಾರು ವಿದ್ಯಾರ್ಥಿಗಳು ಆಶ್ರಮದ ಅನ್ನ ಉಂಡು ವಿದ್ಯಾರ್ಜನೆ ಮಾಡುತ್ತಾರೆ. ನೀನು ದೊಡ್ಡವನಾದರೂ ಚಿಂತೆಯಿಲ್ಲ. ನಿನಗೆ ಆಶ್ರಮದಲ್ಲಿ ಕೆಲಸ ಸಿಕ್ಕುತ್ತದೆ. ಖಾಸಗಿಯಾಗಿ ನೀನು ಅಕ್ಷರಾಭ್ಯಾಸ ಮಾಡಬಹುದು."

ಸಿದ್ದಪ್ಪನಿಗೆ ಸಂತೋಷವಾಯಿತು. "ರೋಗಿ ಬಯಸಿದ್ದೂ ಹಾಲು ಅನ್ನ ವೈದ್ಯ ಹೇಳಿದ್ದೂ ಹಾಲು" ಎಂದಂತಾಯಿತು. ಸಿದ್ದಪ್ಪ ಶಿಷ್ಯನಾದ.

ಸಿದ್ದಪ್ಪ ಒಂದು ಬುಡಕಟ್ಟು ಜನಾಂಗಕ್ಕೆ ಸೇರಿದವ. ಸ್ವಾಮಿಗಳು ಹೇಳಿದ ಹಾಗೆ ಋಣಾನು ಬಂಧವೋ ಏನೋ, ಅವನಿಗೆ ತುಸು ತಲೆ ಸರಿ ಇದ್ದಿರಲಿಲ್ಲವಂತೆ. ಮೈಸೂರು ಕಡೆಯಿಂದ ಮನೆಬಿಟ್ಟು ಕೆಲಸ ಹುಡುಕುತ್ತ ಬಂದುಬಿಟ್ಟನಂತೆ.

ಗುರುಗಳು ಹೇಳಿದರು. "ಇಲ್ಲಿ ನಮ್ಮಂತೆ ಇರಬೇಕಾದರೆ ಸಮಾಜ ಒಪ್ಪಿದ ರೀತಿಯಲ್ಲಿ ಇರಬೇಕು."

ಅವರು ಅವನಿಗೆ ಬ್ರಾಹ್ಮಣ ವಟುವಿನ ದೀಕ್ಷೆ ಕೊಟ್ಟರು. ಸ್ವತಃ ಸಂಧ್ಯಾವಂದನೆಯ ಮಂತ್ರ ಕಲಿಸಿದರು.

"ಊಟ ಮಾಡುವಾಗ ಬಾಳೆ ಎಲೆ ಬದಿಯಲ್ಲಿ ಏನೊ ಅನ್ನದ ಕೊಳೆ ಇಡ್ತಾರಲ್ಲ ಗುರುಗಳೇ."

"ನೀನು ಚುರುಕಿನವ ಸರಿ. ಅದಕ್ಕೆ ಧರಿಸುವುದು ಎನ್ನುತ್ತಾರೆ."

"ಊಟ ಮುಗಿದ ಮೇಲೆ ತೀರ್ಥ ತೆಗೆದುಕೊಳ್ಳಬೇಕು. ಅದಕ್ಕೆ ಪರಿಶೇಚನೆ ಎನ್ನುತ್ತಾರೆ."

ಇದೆಲ್ಲ ಭಾಳ ಕೆಟ್ಟದ್ದು ಅನಿಸಿತು ಅವನಿಗೆ. ಆದರೆ ಇನ್ನಾರೇ ತಿಂಗಳು ಗುರುಗಳು ಆಂಧ್ರಕ್ಕೆ ಮೂಲ ಆಶ್ರಮಕ್ಕೆ ಹೋಗುತ್ತಾರೆ. ಕೆಲಸ ಕೊಡುತ್ತಾರೆ. ಓದು ಓದು ಎಂದು ಅವನ ಮನಸ್ಸು ಭೋರ್ಗರೆಯಿತು.

ಸಿದ್ದಪ್ಪನಿಗೆ ಅವಿಶ್ರಾಂತ ದುಡಿತ, ಯಜ್ಞ ಮೂರು ದಿನ ಅವ್ಯಾಹತವಾಗಿ ನಡೆಯಿತು. ದೇವಸ್ಥಾನದ ಒಳಮಂಟಪದಲ್ಲಿ ಯಜ್ಞ ವೇದಿಕೆ ನಿರ್ಮಿಸಲಾಗಿತ್ತು. ಹೊರಗೆ ಮಳೆ ಹೊಯ್ಯುತ್ತಿದ್ದರೂ ತೊಂದರೆ ಇದ್ದಿರಲಿಲ್ಲ.

"ನೋಡಿ ಮಳೆ ಎಷ್ಟು ಬೇಗ ಕಡಿಮೆ ಆಗಿದೆ. ಸೂರ್ಯ ಕಿರಣ ಹರಡಿದೆ. ಎಲ್ಲಾ ಗುರು ಮಹಿಮೆ" ಎನ್ನುತ್ತಿದ್ದರು ವೈದಿಕರು.

ನಿರೀಕ್ಷಣೆಯಂತೆ ಎಲ್ಲಾ ಕಾರ್ಯಕ್ರಮ ನೆರವೇರಿತು. ಬೀದಿಯೆಲ್ಲ ಶೃಂಗರಿಸಲ್ಪಟ್ಟಿತ್ತು. ಮಂತ್ರಿಗಳೂ ಬಂದಿದ್ದರು.

ಗುರುಗಳು ವೇದಿಕೆಯ ಮೇಲೆ ಪದ್ಮಾಸನ ಹಾಕಿ ಗಂಭೀರವಾಗಿ ಕುಳಿತಿದ್ದರು. ಜನಸ್ತೋಮ ಮಂತ್ರ ಮುಗ್ಧವಾಗಿ ನೋಡಿತು.

ಗುರುಗಳಿಗೆ ಸುಮಾರು ನಲ್ವತ್ತು ವರ್ಷ ವಯಸ್ಸು ಆಗಿರಬಹುದು. ತುಂಬ ಗಡ್ಡವಿದೆ. ಅದು ಚೂಪಾಗಿ ಕೊನೆಗೊಂಡಿದೆ. ತಲೆಯ ಕೂದಲನ್ನು ಶಿಖೆ ಕಟ್ಟಿದ್ದಾರೆ. ಮಧ್ಯೆ ಒಂದೊಂದು ಕೂದಲು ನರೆತಿದೆ. ಮೋರೆ ತುಂಬಿಕೊಂಡಿದೆ. ಕಣ್ಣು ಕೆಂಪಾಗಿದೆ. ತುಟಿ ಉಬ್ಬಿದೆ. ಎದೆಯ ಮೇಲೆ ಮಾಂಸಖಂಡ ಹೇರಿಕೊಂಡಿದೆ. ಕೈತೋಳು ಉಬ್ಬಿಕೊಂಡಿದೆ. ಮೈ ಬಣ್ಣ ಕಪ್ಪೇ ಆದರೂ ಆಕರ್ಷಕ ಮೈಕಟ್ಟಿದೆ. ಕೊರಳಿಗೆ ರುದ್ರಾಕ್ಷಿಸರ, ಹಣೆಗೆ ಚಂದನದ ಹುಂಡು. ಪೀತಾಂಬರವನ್ನು ಕ್ಯಾಲೆಂಡರ್ ಕೃಷ್ಣ ಉಟ್ಟಂತೆ ಉಟ್ಟಿದ್ದಾರೆ. ಹುಲಿಚರ್ಮದ ಮೇಲೆ ಕುಳಿತಿದ್ದಾರೆ.

ಗುರುಗಳು ಗಂಭೀರವಾಗಿ ಮಾತಾಡುತ್ತಾರೆ. ಅವರ ಮಾತು ಸ್ವರವೇನೂ ಕಿವಿಗೆ ಹಿತಕರವಾಗಿರದಿದ್ದರೂ ಭಾಷೆಯಲ್ಲಿ ಸಮ್ಮೋಹಕತೆ ಇದೆ. ಅವರು ಸಾವಕಾಶ ಮಾತಾಡುತ್ತಾರೆ.

ಅವರು ಆತ್ಮೋನ್ನತಿಯ ಬಗ್ಗೆ ಮಾತಾಡಿದರು. ರಾಷ್ಟ್ರಸೇವೆಯ ಬಗ್ಗೆ ಮಾತಾಡಿದರು. ನಾಗರಿಕ

ಪ್ರಜ್ಞೆಯ ಬಗ್ಗೆ ಮಾತಾಡಿದರು. ಭಾರತದ ಪೂರ್ವಜರ ಹಿಂದಿನ ಸಂಸ್ಕೃತಿಯ ಬಗ್ಗೆ ಮಾತಾಡಿದರು.

ಪ್ರವಚನ ಮುಗಿದ ಮೇಲೆ ಆಶೀರ್ವದಿಸಿದರು. ಸ್ವತಃ ಮಂತ್ರಿಗಳು, ಬೆಂಗಳೂರಿನಿಂದ ಬಂದ ವಿಜ್ಞಾನಿಗಳು ಗುರುಗಳ ಪಾದಕಮಲಗಳಿಗೆ ಶಿರಸಾಷ್ಟಾಂಗ ನಮಸ್ಕಾರ ಮಾಡಿದರು.

ಎಲ್ಲರ ಬಾಯಲ್ಲಿ ಗುರುಗಳ ಪ್ರಶಂಸೆಯೇ ಪ್ರಶಂಸೆ.

ಸಿದ್ದಪ್ಪನಿಗೆ ಸಂತೋಷ ಆಗದಿರುತ್ತದೆಯೇ? ಗುರುಗಳ ಬಳಿ ಅನೇಕರು ಬಡವರು ಬರುತ್ತಿದ್ದರು. ದೊಡ್ಡವರೆನ್ನುವವರು ಬರುತ್ತಿದ್ದರು. ಅವರಿಗೆ ಗುರುಗಳು ಅಧ್ಯಾತ್ಮದ ಅಂದರೆ ದೇವರು ಧರ್ಮದ ಅರ್ಥ ವಿವರಣೆ ಹೇಳುತ್ತಿದ್ದರು. ಅವರಲ್ಲಿ ಕೆಲವರಂತೂ ಗುರುಗಳ ಆತ್ಮಬಳಗಕ್ಕೆ ಸೇರಿದ್ದರು. ಬಡವರೂ ಬರುತ್ತಿದ್ದರು. ಒಬ್ಬರಿಗೆ ಅನಾರೋಗ್ಯವಿದ್ದರೆ. ಇನ್ನೊಬ್ಬರಿಗೆ ಮಕ್ಕಳಾಗಿರುವುದಿಲ್ಲ. ಮತ್ತೊಬ್ಬರಿಗೆ ನೌಕರಿ ಇಲ್ಲದಿದ್ದರೆ, ಇನ್ನೊಬ್ಬರಿಗೆ ವ್ಯಾಪಾರದಲ್ಲಿ ನಷ್ಟವಾಗುತ್ತಿದೆ.

ಗುರುಗಳು ಅವರಿಗೆ ಆಶೀರ್ವಾದ ಮಾಡುತ್ತಿದ್ದರು. ಅವರು ಹೇಳುತ್ತಿದ್ದರು: "ಎಲ್ಲಾ ನಿಮ್ಮ ನಂಬಿಕೆ. ನನ್ನದೇನಿಲ್ಲ. ಆದರೂ ನನ್ನ ಆಶೀರ್ವಾದ ಇದೆ."

"ಅಷ್ಟೇ ಸಾಕು ದೇವರೇ" ಎನ್ನುತ್ತಿದ್ದರು ಜನ. ಒಂದೊಂದು ಸಲ ಅವರು ಗಾಳಿಯಲ್ಲಿ ಕೈಬೀಸಿ ವಿಭೂತಿಯನ್ನು ತೆಗೆದುಕೊಡುತ್ತಿದ್ದರು.'

ಒಮ್ಮೆ ಓರ್ವ ಮುದುಕಿ ಬಂದಿದ್ದಳು. ಅವಳಿಗೆ ದಮ್ಮು ರೋಗ, ಅಂದರೆ ಆಸ್ತಮಾ.

"ಚಾಮಿ, ದಮ್ಮನ ರೋಗ ಊರಲ್ಲಿ ಎಲ್ಲಾ ದಾಕ್ತರ ಔಸುದ್ಯವು ಮುಗಿತು. ನೀವೇ ಕಾಪಾಡಿ. ನೀವೇ ದೇವರು."

"ಅಮ್ಮಾ ಎಲ್ಲವೂ ಪೂರ್ವಜನ್ಮದ ಕರ್ಮ. ಕರ್ಮ ಸವೆದ ಹೊರತು ಬಿಡದು" ಎಂದು ವಿಭೂತಿಯನ್ನು ಕೊಟ್ಟರು. ಅವಳು ಬಿದ್ದು "ಹೌದು ಹಿಂದಿನ ಜನ್ಮದಲ್ಲಿ ಮಾಡಂದು! ಎಂಥ ಪಾಪ ಮಾಡಿದ್ದೆನೋ!" ಎಂದು ಗೋಳಾಡಿ ಹೋಗಿದ್ದಳು.

ಗುರುಗಳು ರಾತ್ರಿ ಫಲಹಾರ ಸೇವಿಸುವಾಗ ಸಿದ್ದಪ್ಪ ಕೇಳಿದ.

"ಗುರುಗಳೇ ಈ ಮುದುಕಿಗೆ ಪೂರ್ವಜನ್ಮದ ಕರ್ಮ ಎಂದುಬಿಟ್ಟಿರಿ. ಪಾಪ ನನ್ನ ಅಜ್ಜಿಯ ಹಾಗೇ ಇದ್ದಾಳೆ. ತಾವು ಮಂತ್ರದಿಂದ ಅವಳನ್ನು ಗುಣಪಡಿಸಬಹುದಿತ್ತು. ಪಾಪ."

"ಕರ್ಮದ ಫಲವನ್ನು ಅನುಭೋಗಿಸಲೇಬೇಕು. ಅದಕ್ಕೆ ಮದ್ದಿಲ್ಲ."

"ಎಲ್ಲಾ ಪೂರ್ವಜನ್ಮದ ಫಲ ಎಂದಾದರೆ ಈ ತಪಸ್ಸು, ಪೂಜೆ, ಯಜ್ಞ ಎಲ್ಲಾ ವ್ಯರ್ಥ ಅಲ್ಲವೇ?"

"ವತ್ಸ ಏನಂತಿ? ಮುಂದಿನ ಜನ್ಮದಲ್ಲಿ ಒಳ್ಳೆಯ ಫಲ ಬರಲೆಂದೇ ಈ ಧ್ಯಾನ, ತಪಸ್ಸು, ಧರ್ಮ ಇತ್ಯಾದಿ......."

"ಹಾಗಾದರೆ ಈ ಆಸ್ಪತ್ರೆ, ಜನರ ಸೇವೆ, ಬಡವರಿಗೆ ದಾನ ಎಲ್ಲ ವ್ಯರ್ಥ ಅಲ್ಲವೇ? ಅದು ಅವರ ಪೂರ್ವಜನ್ಮದ ಫಲ. ಅನುಭೋಗಿಸಿಯೇ ತೀರಬೇಕು. ಅಂದಮೇಲೆ ಅವರಿಗೆ ಉಪಕಾರ ಮಾಡಿದರೆ ಅವರ ಕರ್ಮಫಲ ಹಾಗೇ ಇದ್ದು ಮತ್ತೆ ಮುಂದಿನ ಜನ್ಮಕ್ಕೆ ಬರದೆ? ಇದೇ ಜನ್ಮದಲ್ಲಿ ಮುಗಿದು ಹೋಗುತ್ತಿತ್ತಲ್ಲ? ಉಪಕಾರ ಮಾಡಲು ಹೋಗಿ ಅಪಕಾರ ಆಗುವುದಿಲ್ಲವೇ?" ಎಂದು ಕೇಳಿದ್ದ.

ಗುರುಗಳು ನಸುನಕ್ಕು ಹೇಳಿದರು.

"ವತ್ಸ, ತರ್ಕಕ್ಕೂ ಒಂದು ಮಿತಿ ಬೇಡವೇ?

ನನಗೂ ಮೊದಲು ಹಾಗೆ ಅನ್ನಿಸುತ್ತಿತ್ತು. ಆದರೆ ಆಧ್ಯಾತ್ಮ ಉನ್ನತಿ ಆಗುತ್ತ ಹೋದಂತೆ ಅಂಥ ಸಂಶಯವೆಲ್ಲ ಬಿರುಗಾಳಿಗೆ ಸಿಕ್ಕಿದ ಮೋಡದಂತೆ ಚದುರಿಹೋಯಿತು.

ಪ್ರತಿಯೊಂದಕ್ಕೂ ಹಿರಿಯರನ್ನು ಪ್ರಶ್ನಿಸುತ್ತ ಹೋಗಬಾರದು. ಸಂಶಯಾತ್ಮಾ ವಿನಶ್ಯತಿ. ಅಂದರೆ ಸಂಶಯ ಪ್ರವೃತ್ತಿ ವಿನಾಶಕ್ಕೆ ಕಾರಣ ಎಂದು ದೊಡ್ಡವರು ಹೇಳಿದ್ದಾರೆ. ಧರ್ಮಶಾಸ್ತ್ರದಲ್ಲಿ ಸಂಶಯ ಬಂದರೆ ಹಿರಿಯರ ನಡತೆಯಂತೆ ನಡೆದರೆ ಸಾಕು ಎಂದು ಶಾಸ್ತ್ರಕಾರರೂ ಹೇಳಿದ್ದಾರೆ. ತಿಳಿಯಿತೆ? ನಾಲಿಗೆ ಇದೆ ಎಂದು ಪ್ರಶ್ನಿಸುತ್ತ ಹೋಗಬಾರದು. ತಿಳಿಯಿತೇ?" ಎಂದಿದ್ದರು.

* * *

ಸಿದ್ದಪ್ಪನ ಸಂಶಯ ಪ್ರವೃತ್ತಿಯೇನೂ ನಿಂತಿರಲಿಲ್ಲ. ಆದರೆ ಮೊದಲಿನ ಹಾಗೇ ಪದೇ ಪದೇ ಪ್ರಶ್ನಿಸುತ್ತಿರಲಿಲ್ಲ.

ಗುರುಗಳು ಒಮ್ಮೊಮ್ಮೆ ಪ್ರವಾಸಕ್ಕೆ ಹೋಗುತ್ತಿದ್ದರು. ಅವರು ಹೊರಡುವುದು ರಾತ್ರಿಯಲ್ಲೇ. ಸಾಮಾನ್ಯವಾಗಿ ಜನ ಮಲಗಿದ ಮೇಲೆ. ಹೋಟೆಲ್ ಸಾವುಕಾರರು ಅಥವಾ ಕಂಟ್ರಾಕ್ಟರ್ ನಂಜಪ್ಪನವರು ಕಾರು ಕಳಿಸುತ್ತಾರೆ. ಕಪ್ಪು ಕಾಜು ಮುಚ್ಚಿರುತ್ತದೆ. ಯಾರಿಗೂ ಒಳಗಿದ್ದವರು ಕಾಣುವುದಿಲ್ಲ. ಕಂಡರೆ ದಾರಿಯ ಮೇಲೆ ತಡೆದು ಅಡ್ಡಬೀಳುವವರೆಷ್ಟು ಇರುತ್ತಿದ್ದರೊ!

ಬೆಳಗಾಗುವುದರೊಳಗೆ ಬರುವುದೂ ಉಂಟು. ಬಂದು ಧ್ಯಾನಕ್ಕೆ ಕೂಡ್ರುವುದುಂಟು. ಒಮ್ಮೊಮ್ಮೆ ಮೂರು ನಾಲ್ಕು ದಿನ ಬರದಿರುವುದೂ ಉಂಟು. ಆಗೆಲ್ಲ ಆಶ್ರಮದ ಉಸ್ತುವಾರಿ ಸಿದ್ದಪ್ಪನದೇ.

ಆಶ್ರಮಕ್ಕೆ ಅನೇಕ ಜನರು ಬರುತ್ತಾರೆ. ಬಡವರು, ಬಲ್ಲಿದರು. ಅವರು ಗುರುಗಳಿಂದ ಯಾವು ಯಾವುದೋ ಸಮಸ್ಯೆಗೆ ಪರಿಹಾರ ಪಡೆಯಲು ಬರುತ್ತಾರೆ. ಗುರುಗಳು ಇಲ್ಲದಿದ್ದರೆ ಅವರಿಗೆ ಸಮಾಧಾನವಿಲ್ಲ. ಸಿದ್ದಪ್ಪನನ್ನೇ ಅವರು ಕಾಡುವುದುಂಟು.

"ಮರಿಸ್ವಾಮಿಗೋಳು, ನೀವೇ ಬಂದು ವಿಬೂತಿ ಕೊಡಿ. ನೀವೇ ಅಕ್ಷತ ಕೊಡಿ. ನೀವೇ ಪರಸಾದ ಕೊಡಿ........" ಹೀಗೆ ಹೀಗೆ.

ಸಿದ್ದಪ್ಪ ಮೊದಮೊದಲು ನಿರಾಕರಿಸುತ್ತಿದ್ದ. ಆದರೆ ಆ ಬಡವರನ್ನು ನೋಡಿ ಗುರುಗಳ ಹಾಗೆ 'ಇದು ನಿನ್ನ ಪೂರ್ವಜನ್ಮದ ಕರ್ಮ. ಸವೆಸಬೇಕು ಬೆನ್ನು ಬಿಡದು' ಎಂದು ಹೇಳಲು ಬಾಯಿ ಬರುವುದಿಲ್ಲ. "ಓಂ" ಎಂದು ವಿಭೂತಿ ಎತ್ತಿ ಕೊಟ್ಟುಬಿಡುತ್ತಾನೆ. ಇದ್ದಕ್ಕಿದ್ದಂತೆ ಆತ 'ಮರಿ ಸ್ವಾಮಿ' ಆಗಿಬಿಟ್ಟಿದ್ದಾನೆ . ಗುರುಗಳದೇ ಶೈಲಿಯನ್ನು ಅನುಕರಿಸುತ್ತಾನೆ. ಬೇಗ ಗಡ್ಡ ಮೀಸೆ ಬಂದುಬಿಡಬಾರದೇ ಎನ್ನಿಸುತ್ತದೆ.

ಹಾಗೇ ಒಂದು ದಿನ ಇದ್ದಕ್ಕಿದ್ದಂತೆ,

"ಚಾಮೀ" ಎಂದು ಧ್ವನಿ ಬಂತು.

ಸಿದ್ದಪ್ಪ ಕಣ್ತೆರೆದ. ಅರೆ! ಇವಳು ಆ ಮುದುಕಿ. ದಮ್ಮು ರೋಗದ ಮುದುಕಿಯಲ್ಲವೇ? ಎಂದೆನ್ನಿಸುತ್ತಿದ್ದಂತೆ "ಚಾಮಿ ಇಲ್ವಾ?" ಕೇಳಿದಳು ಮುದುಕಿ.

"ಇಲ್ಲ. ಅಜ್ಜಿ."

"ಅಯ್ಯೋ ಚಾಮೀರ ಕಾಂಬೇಕಿತ್ತು" ಎಂದಳು.

"ಏನು ವಿಭೂತಿ ಬೇಕಾ?" ಎಂದು ಉಮೇದಿಯಿಂದಲೇ ಕೇಳಿದ್ದ ಸಿದ್ದಪ್ಪ.

"ಅಲ್ಲ ಅಲ್ಲ. ಚಣ್ ಚಾಮೀ ನಂಗೆ ದಮ್ಮು ಗುಣ ಆಯ್ತು ಚಂಚಾಮೀ, ದೊಡ್ಡ ಚಾಮೀ ಇಬೂತಿ ಕೊಟ್ಮೇನೆ."

"ಹೌದಾ?" ಆಶ್ಚರ್ಯ ಸಿದ್ದಪ್ಪನಿಗೆ. ಎಲಾ! ಗುರುಗಳು ಪೂರ್ವಜನ್ಮದ ಕರ್ಮ ಬೆನ್ನು ಬಿಡದು ಎಂದಿದ್ದರಲ್ಲಾ? "ಹೌದು ಚಂಚಾಮೀ, ದೊಡ್ಡ ಚಾಮೀ ಇಬೂತಿ ಕೊಟ್ಮೇಲೆ ಔಸುದ್ಯ ಮಾಡ್ದೆ ಚಂಚಾಮೀ. ಗುಣ ಆಯ್ತು" ಎಂದು ಕಾಲಿಗೆ ಬಿದ್ದುಬಿಡಬೇಕೆ?. ಸಿದ್ದಪ್ಪ ಓಡಿಬಿಟ್ಟ.

"ನೀವೆಲ್ಲ ನನ್ನ ಕಾಲ್ಗೆ ಬೀಳಬಾರ್ದು ಅಜ್ಜೀ" ಎಂದಿದ್ದ ಸಿದ್ದಪ್ಪ.

* * *

ಅಂದು ಗುರುಗಳು ಸಿದ್ದಪ್ಪನಿಗೆ ಬಹುಪ್ರಿಯವಾದ ಸಂದೇಶವನ್ನು ಕೊಟ್ಟರು.

"ವತ್ಸ ಇನ್ನೊಂದು ವಾರದಲ್ಲಿ ನಾವು ಆಂಧ್ರಕ್ಕೆ ನಮ್ಮ ಮೂಲ ಆಶ್ರಮಕ್ಕೆ ತೆರಳಿಬಿಡುವ."

ಆಹಾ! ಎಂಥ ವಾರ್ತೆ!! ಸಿದ್ದಪ್ಪನಿಗೆ ಉತ್ಸಾಹವೇ ಉತ್ಸಾಹ.

ಅವನು ನಿಂತಲ್ಲಿ ಕುಂತಲ್ಲಿ ಕನಸು ಕಾಣುತ್ತಾನೆ.

ಆಂಧ್ರ ಆಶ್ರಮ! ಅದು ಎಷ್ಟು ದೊಡ್ಡದಿದೆಯೊ, ಅಲ್ಲಿಯ ಭಾಷೆ ಆಹ್! ಹೊಸ ಭಾಷೆ ಕಲಿಯುವುದೆಂದರೆ ಸಂತೋಷವಲ್ಲವೇ? 'ಒಣಕ್ಕಂ.'

"ಒಣಕ್ಕಂ" ಎಂದರೆ ಏನು? ಥೆ ನನ್ನ ಕುಂಬಳಕಾಯಿ ತಲೆಯೇ? ಗುರುಗಳಲ್ಲಿ ಕೇಳಬೇಕಿತ್ತು.

ಒಂದು ಸಲ ಯಾರೊ ಒಬ್ಬರು ಕಾರು ತೆಗೆದುಕೊಂಡು ಬಂದಿದ್ದರು. ಅವರು ಬಹಳ ಹೊತ್ತು ಒಳಗಡೆ ಕುಳಿತು 'ಎಂಡಪೊಯಿ ಗಂಡಪೊಯಿ' ಎಂದು ಮಾತಾಡಿಕೊಳ್ಳುತ್ತಿದ್ದರು. ತನಗೆ ಏನೂ ತಿಳಿಯದು. ಅದರಲ್ಲಿ ಅವರು ಹೇಳಿಕೊಂಡ 'ಒಣಕ್ಕಂ' ಒಂದು ಮಾತ್ರ ನೆನಪಿದೆ. ಇನ್ನು ತಾನು ಎಂಡ ಪೊಂಡವನ್ನು ಕಲಿಯುತ್ತೇನೆ.

ಅಲ್ಲಿ ಶಾಲೆ ಕನ್ನಡವೂ ಇದೆಯಂತೆ. ಕನ್ನಡವನ್ನು ಕಲಿಯುತ್ತೇನೆ. 'ಒಣಕ್ಕಂ' ಕೂಡ ಕಲಿಯುತ್ತೇನೆ. ತಾನು ಏಕೆ ಆಂಧ್ರದಲ್ಲೇ ಇದ್ದುಬಿಡಬಾರದು?

ದಿನ ಕಳೆದಂತೆ ಕನಸು ಜಾಸ್ತಿಯಾಗುತ್ತಿದೆ. ಇನ್ನು ಆರು ದಿನ ಉಳಿಯಿತು. ಇನ್ನೂ ಮೂರು ದಿನ ಉಳಿಯಿತು ಎಂದುಕೊಳ್ಳುತ್ತಾನೆ.

ಗುರುಗಳು ಹೇಳಿದರು. "ಇನ್ನು ನಾಲ್ಕೇ ದಿನ ವತ್ಸಾ, ಯಾರಿಗೂ ಸುದ್ದಿ ಮಾಡುವುದು ಬೇಡಾ. ಜನ ಜಾತ್ರೆ ಸೇರುತ್ತದೆ."

"ಜನರನ್ನು ಆಶೀರ್ವದಿಸುವುದು ಬೇಡವೇ ಗುರುಗಳೇ?"

"ಏನೂ ಬೇಡ. ನಾನು ಮೂರನೇ ದಿನ ಹೊರಡುತ್ತೇನೆ. ನೀನು ಒಂದು ದಿನ ತಡೆದು ಬಾ. ಯಾರೇ ಆಶ್ರಮಕ್ಕೆ ಬಂದರೂ ಗುರುಗಳು ಭಕ್ತರ ಮನೆಗೆ ಹೋಗಿದ್ದಾರೆ; ಎರಡು ದಿನ ತಡೆದು ಬರುತ್ತಾರೆ ಎನ್ನು. ನೀನು ಯಾರಿಗೂ ಸುದ್ದಿ ಮಾಡಕೂಡದು. ರಾತ್ರಿ ಕಾರು ಬರುತ್ತದೆ. ಹೊರಟುಬಿಡಬೇಕು. ನಾನು ಎಲ್ಲಾ ವ್ಯವಸ್ಥೆ ಮಾಡಿರುತ್ತೇನೆ".

ಸಿದ್ದಪ್ಪನಿಗೆ ಇದೆಲ್ಲ ವ್ಯವಸ್ಥೆ ಯಾಕೋ ಸರಿ ಅನ್ನಿಸುತ್ತಿರಲಿಲ್ಲ. ಆದರೆ ಅವನಿಗೆ ಬೇಗ ಬೇಗ ಆಂಧ್ರಕ್ಕೆ ಹೋಗಬೇಕಾಗಿದೆ. ಆ ಮೂರನೇ ದಿನ ಇಂದೇ ಆಗಿಬಿಟ್ಟಿದ್ದರೆ ಎನ್ನಿಸುತ್ತದೆ. ಆದರೂ ಆ ಚಾಮೀ ಅಜ್ಜಿಯನ್ನು ನೋಡಬೇಕೆನ್ನಿಸುತ್ತದೆ.

ಅಂದು ರಾತ್ರಿ ಸಿದ್ದಪ್ಪನಿಗೆ ಬಹಳ ಹೊತ್ತಿನ ತನಕ ನಿದ್ದೆಯೇ ಹತ್ತಲಿಲ್ಲ. ಕನಸು, ಆಂಧ್ರಕ್ಕೆ ಹೋದ ಕನಸು. ಮತ್ತೆ ಎಚ್ಚರ.

ರಾತ್ರಿ ಆಶ್ರಮಕ್ಕೆ ಯಾರೋ ಇಬ್ಬರು ಹೊಸಬರು ಬಂದಿದ್ದರು. ಇಷ್ಟು ದಿನವೂ ಅವರನ್ನು ಸಿದ್ದಪ್ಪ ನೋಡಿರಲಿಲ್ಲ. ಅವರು ಸಿದ್ದಪ್ಪನ ಜೊತೆಯೇ ಮಲಗಿದ್ದರು. ರಾತ್ರಿ ಸಿದ್ದಪ್ಪನಿಗೆ ಎಚ್ಚರಾದಾಗ ಅವರು ಅಲ್ಲಿ ಇದ್ದಿರಲಿಲ್ಲ. ಬಾಗಿಲ ಕದ ತಾಡಿತ್ತು. ಸಿದ್ದಪ್ಪನಿಗೆ ಕುತೂಹಲವಾಯಿತು.

ಮಸುಮಸುಕಾದ ಕತ್ತಲು. ಚಂದ್ರ ಮಾತ್ರ ಮುಳುಗಿರಬೇಕು. ಸಾವಕಾಶ ಬಾಗಿಲು ತೆರೆದು ಸಿದ್ದಪ್ಪ ಹೊರಬಂದ. ಗುರುಗಳ ಕೋಣೆಯಲ್ಲಿ ಏನೇನೊ ಗುಸು ಗುಸು ಮಾತು. ದೀಪವಿದ್ದಿರಲಿಲ್ಲ. ಸಿದ್ದಪ್ಪ ಬೆಕ್ಕಿನ ಹೆಜ್ಜೆ ಹಾಕುತ್ತ ಬಾಗಿಲಿಗೆ ಕಿವಿ ಒತ್ತಿದ. ಕೇಳಿಸಲಿಲ್ಲ. ಅಸ್ಪಷ್ಟ ಮಾತು. ಅವರು ಹೊರಬಂದುಬಿಟ್ಟು ತನ್ನ ಗುಟ್ಟು ರಟ್ಟಾದರೆ ಆಂಧ್ರ ಎಲ್ಲಿ? ಇಷ್ಟು ದಿನ ಮಾಡಿದ ಗುರುಸೇವೆ ವ್ಯರ್ಥವಾಗುವುದಲ್ಲ! ಗುರುಗಳೆಂದಂತೆ ಸಂಯಮ ಬೇಕು. ಇನ್ನೊಂದೆರಡೇ ದಿನ. ಎರಡು ದಿನದ ನಂತರ ಹೊಸಯುಗ ಎಂದುಕೊಂಡ.

ಸಿದ್ದಪ್ಪ ನಿದ್ದೆ ಮಾಡಿರಲಿಲ್ಲ. ಪಕ್ಕದಲ್ಲಿ ಮಲಗಿದವರು ಹಿಂದಕ್ಕೆ ಬರುವುದನ್ನೇ ಕಾಯುತ್ತಲಿದ್ದ. ಆದರೆ ಅವರು ಬರಲಿಲ್ಲ. ಬದಲಾಗಿ ಆಶ್ರಮದ ಮುಂದೆ ಕಾರಿನ ಸಪ್ಪಳ. ಅರೆ ಅವರು ಬರುವಾಗ ಕಾರು ತಂದಿರಲಿಲ್ಲವಲ್ಲ.

ಮಾರನೆಯ ದಿನ ಗುರುಗಳು ಧ್ಯಾನಸ್ಥರಾಗಿದ್ದರು. ಮುಂಜಾನೆ ಒಂದು ಲೋಟ ಹಾಲಿನ ವಿನಾ ಏನನ್ನೂ ಸೇವಿಸಿರಲಿಲ್ಲ. ಮಧ್ಯಾಹ್ನ ನಾಲ್ಕು ಗಂಟೆಯ ಹೊತ್ತಿಗೆ ಅವರು ಎಚ್ಚರ. ಮತ್ತೆ ಸ್ನಾನ, ಫಲಹಾರ.

ಸಿದ್ದಪ್ಪನನ್ನು ಗುರುಗಳು ಕರೆದರು.

"ಸಿದ್ದ, ಗುಂಡೂರಾಯರಿಗೆ ಒಂದು ಪತ್ರ ಕೊಡುತ್ತೇನೆ. ತಲ್ಪಿಸಿ ಬರಬೇಕು. ಗುಂಡೂರಾಯರ ಕೈಯಲ್ಲಿಯೇ ಕೊಡಬೇಕು. ಅವರು ನಿನ್ನ ನಿರೀಕ್ಷೆಯಲ್ಲಿಯೇ ಇರುತ್ತಾರೆ. ಜತನದಿಂದ ಒಯ್ಯಿ."

"ಆಯ್ತು ಗುರುಗಳೆ."

ಸಿದ್ದಪ್ಪ ಟೊಪ್ಪಿ ಏರಿಸಿದ. ಲಕೋಟೆಯನ್ನು ಅಂಗಿಯ ಕಿಸೆಯಲ್ಲಿ ಭದ್ರವಾಗಿಟ್ಟುಕೊಂಡು ಹೋಟೆಲ್‌ನ ಮಸಾಲೆ ದೋಸೆಯನ್ನು ನೆನೆಸಿಕೊಳ್ಳುತ್ತ ಹೊರಬಿದ್ದ.

ಆದರೆ ಸಿದ್ದಪ್ಪನಿಗೆ ಯಾಕೋ ತಡೆಯದಾಯಿತು.

ಸಿದ್ದಪ್ಪ ಯಾವಾಗಲೂ ತುಸು ಕುತೂಹಲದ ಹುಡುಗ. ವಿಚಾರದಲ್ಲಿ ತರ್ಕವೂ ಜಾಸ್ತಿ. ಯಾವುದನ್ನು ನೋಡಿದರೂ ಅದನ್ನು ಸರಿಯಾಗಿ ತಿಳಿದುಕೊಳ್ಳಬೇಕೆಂಬ ಪ್ರವೃತ್ತಿ ಅವನದು. ಒಟ್ಟಾರೆ ಚಿಕಿತ್ಸಕ ಮನೋಭಾವ. ಅದಕ್ಕಾಗಿ ಆತ ಕಷ್ಟಪಡಲು ಸಿದ್ಧ.

ಲಕೋಟೆಯಲ್ಲಿ ರಟ್ಟಿನ ತರಹ ವಸ್ತು ಇದ್ದಂತೆ ಕಂಡಿತು. ಸಿದ್ದಪ್ಪನ ಕುತೂಹಲ ಮತ್ತೂ ಕೆರಳಿತು.

ಲಕೋಟೆಯ ತುದಿ ಎಂಜಲು ತಾಗಿಸಿ ನೆನೆಸಿದ. ಸಾವಕಾಶ ಮುಚ್ಚಳ ತೆರೆದ. ಅವನಿಗೆ ಆಶ್ಚರ್ಯ ಕಾದಿತ್ತು ಅಲ್ಲಿ.

ಲಕೋಟೆಯ ಒಳಗೆ ನಾಲ್ಕು ಹುಡುಗಿಯರ, ಇಬ್ಬರು ಗಂಡಸರ ಫೋಟೋ ಇದ್ದವು. ಗುರುಗಳು ಹುಡುಗಿಯರ ಫೋಟೋ ಗುಂಡೂರಾಯರಿಗೆ! ಅಬ್ಬ ಇದೇನು? ಎಂದು ಪತ್ರವನ್ನು ತೆರೆದ.

"ಫೋಟೋ ಇದೆ. ನಾಳೆ ರಾತ್ರಿ ಎರಡು ಗಂಟೆಗೆ ಹೋಟೆಲ ಹತ್ತಿರ ಬರುತ್ತಾರೆ. ಅಷ್ಟುಹೊತ್ತಿಗೆ ಬೇರೆ ಕಾರು ಆಂಧ್ರದಿಂದ ಬರುತ್ತದೆ. ಖಾತ್ರಿ ಮಾಡಿಕೊಳ್ಳಿ. ಒಂದು ನಿಮಿಷವೂ ತಡಮಾಡದಂತೆ ಕಳಿಸಿ.

"ನಾಲ್ಕು ಗಂಟೆಗೆ ಮತ್ತೊಂದು ಕಾರು ಮಹಾರಾಷ್ಟ್ರದಿಂದ ಬರುತ್ತದೆ. ಈ ಹುಡುಗನನ್ನು ಕಳಿಸಿ, ಅವರು ಹುಡುಗನಿಗೆ ತಕ್ಕ ವ್ಯವಸ್ಥೆಯನ್ನು ಮಾಡುತ್ತಾರೆ. ನಿನ್ನೆಯೇ ಅವರನ್ನು ಕಂಡು ವ್ಯವಸ್ಥೆ ಮಾಡಲು ಹೇಳಿದ್ದೇನೆ. ಇಲ್ಲಿ ಹುಡುಗಿಯರ ಫೋಟೋ ಇದೆ. ಹಾಗೆಯೇ ಇಬ್ಬರು ಡ್ರೈವರರ ಫೋಟೋ ಇದೆ. ಎಚ್ಚರ, ನಾನು ಇಂದೇ ಹೊರಡುತ್ತೇನೆ."

ಪತ್ರ ಓದಿದ ಸಿದ್ದಪ್ಪನ ಎದೆ ನಡುಗಿತು. ಮೈ ಬೆವರಿತು. ಪತ್ರ ಮಡಚಿ ಕಿಸೆಗೆ ಹಾಕಿಕೊಂಡ. ಸಮೀಪದ ಅಂಗಡಿಗೆ ಹೋಗಿ ಒಂದಿಷ್ಟು ನೀರು ಕುಡಿದ. ನನ್ನನ್ನು ಮುಗಿಸುವದೆಂದರೇನು? ಹುಡುಗಿಯರು ಯಾಕೆ?

ನೇರ ಅಂಚೆ ಕಚೇರಿಗೆ ಹೋದ. ಒಂದು ಲಕೋಟೆ ತೆಗೆದುಕೊಂಡ. ಅವನ ಕಿಸೆಯಲ್ಲಿ ಹಣ ಇತ್ತು. ಅವನ ಸ್ವಂತ ಹಣವನ್ನು ಆತ ಕಿಸೆಯಲ್ಲೇ ಇಟ್ಟುಕೊಳ್ಳುತ್ತಿದ್ದ. ಆಶ್ರಮದಲ್ಲಿ ಅವನದಾದ ವ್ಯವಸ್ಥೆಯೇನೂ ಇದ್ದಿರಲಿಲ್ಲ.

ಲಕೋಟೆ ತೆಗೆದುಕೊಂಡ ಸಿದ್ದಪ್ಪ ಅದರಲ್ಲಿ ಗುಂಡೂರಾಯರಿಗೆ ತಲ್ಪಿಸಬೇಕಾದ ಪತ್ರವನ್ನು ತೆಗೆದುಕೊಂಡು ಅದರ ಹಿಂಬದಿಗೆ ಆಶ್ರಮದ ಹೆಸರು ವಿಳಾಸ ಬರೆದ. ಗುಂಡುರಾಯರ ಹೋಟೆಲ ಹೆಸರು ವಿಳಾಸ ಬರೆದ. ಪೊಲೀಸ ಕಚೇರಿಯ ವಿಳಾಸ ಬರೆದ. ಇನ್ನೇನು ಡಬ್ಬಿಗೆ ಹಾಕಬೇಕೆನ್ನುವಷ್ಟರಲ್ಲಿ ತಟ್ಟನೆ ಹೊಳೆಯಿತು.

ಅರೇ ನಾನು ಎಂಥ ದಡ್ಡ ಕೆಲಸ ಮಾಡುತ್ತಿದ್ದೆ. ಸುಮ್ಮನೆ ಲಕೋಟೆ ಕೊಂಡೆನಲ್ಲ. ಇದನ್ನು ಪೆಟ್ಟಿಗೆಗೆ ಹಾಕಿದರೆ ತಲ್ಪುವುದು ನಾಳೆಗಲ್ಲವೇ? ಇಂದೇ ತಲ್ಪುವಂತೆ ಏನಾದರೂ ಮಾಡಬೇಕು ಎಂದುಕೊಂಡ.

ಮಾರನೇ ದಿನದ ಎಲ್ಲ ಪತ್ರಿಕೆಗಳ ಮುಖಪುಟದಲ್ಲಿ ದೊಡ್ಡಕ್ಷರದಲ್ಲಿ ಸುದ್ದಿ ಪ್ರಕಟವಾಗಿತ್ತು.

"ಭಗವಂತಾಶ್ರಮದ ಗುರುವಿನ ಬಂಧನ. ವೇಶ್ಯಾವಾಟಿಕೆಗೆ ಹುಡುಗಿಯರನ್ನು ಸಾಗಿಸುತ್ತಿದ್ದ ದೊಡ್ಡ ಜಾಲದ ಪತ್ತೆ. ಹೋಟೆಲ ಮಾಲೀಕ ಗುಂಡುರಾಯ ಬಂಧನಕ್ಕೆ ತೀವ್ರ ಶೋಧ." ಎಂದು ಪ್ರಕಟವಾಗಿತ್ತು.

ಆಂಧ್ರದಲ್ಲಿ ತಕ್ಕ ಆಶ್ರಮ ಇದೆಯೆಂದೂ ತಾನು ಆಶ್ರಮದಿಂದ ಶಾಲೆ, ಕಾಲೇಜು, ಹಾಸ್ಪಿಟಲ

ನಡೆಸಲಾಗುತ್ತದೆಯೆಂತಾ ಸುಳ್ಳೇ ಸುದ್ದಿ ಹರಡಿ ಅಲ್ಲಿ ಕೆಲಸ ಕೊಡಿಸುವ ಆಮಿಷ ಒಡ್ಡಿ ಸುಂದರ ಯುವತಿಯರನ್ನು ಸಾಗಿಸುವ ಒಂದು ದೊಡ್ಡ ಜಾಲವೇ ಭಗವಂತ ಸ್ವಾಮಿಯ ಹಿಂದೆ ಇದೆ ಯೆಂದು ಪತ್ರಿಕೆ ಬರೆದಿತ್ತು.

ಪತ್ರಿಕೆಯಲ್ಲಿ ಇನ್ನೂ ಒಂದು ಆಶ್ಚರ್ಯಕರ ಸುದ್ದಿ ಪ್ರಕಟವಾಗಿತ್ತು.

ಸ್ವಾಮಿಯ ಹಿಂದೆ ಒಂದು ದೊಡ್ಡ ಗುಂಪು ಇದ್ದು ನರಬಲಿ ಕೊಟ್ಟರೆ ತಮಗೆ ಬಂಗಾರದ ಕೊಪ್ಪರಿಗೆ ಸಿಕ್ಕುತ್ತದೆಯೆಂದು ಆಶ್ರಮದಲ್ಲಿ ಒಬ್ಬ ಅನಾಥ ಹುಡುಗನನ್ನು ಅದಕ್ಕಾಗೇ ಸಾಕಲಾಗಿತ್ತೆಂದೂ ಹುಡುಗ ತಲೆತಪ್ಪಿಸಿಕೊಂಡಿದ್ದಾನೆಂದೂ ಪೊಲೀಸರಿಗೆ ಸುದ್ದಿ ಸುಳುವು ಕೊಟ್ಟವನು ಅವನೇ ಇರಬಹುದೆಂದು ಊಹಿಸಲಾಗುತ್ತದೆಂದೂ, ಆ ಪತ್ರಿಕೆಗಳು ವರದಿ ಮಾಡಿದ್ದವು.

❑

೫. ಹೋಟೆಲ್ ಮಾಣಿ ಗರುಡ

ಚಹ ಕುಡಿಯಲೆಂದು ಬಂದ ಒಬ್ಬ ಯುವಕನ ಪ್ಯಾಂಟಿನ ಮೇಲೆ ಹಸನ್ ಟೇಬಲ್ ಉಜ್ಜುವಾಗ ನೀರು ಸಿಡಿಯಿತು.

ಯುವಕನು ಬಿಳಿ ಬಣ್ಣದ ಪ್ಯಾಂಟು ಧರಿಸಿದ್ದ. ಬಿಳಿ ವಸ್ತ್ರದ ಮೇಲೆ ಚೂರು ಕೊಳೆ ಬಿದ್ದರೂ ಅದು ಎದ್ದು ಕಾಣುವುದಿಲ್ಲವೇ – ಮನುಷ್ಯರ ಚರಿತ್ರೆಯಲ್ಲಿ ಕಾಣುವ ದುರ್ಗುಣದಂತೆ?

ಯುವಕನಿಗೆ ಸಿಟ್ಟು ಬಂತು. "ಭಾಡ್ಯಾ ಸರಿ ಕೆಲ್ಸ ಮಾಡಲಾಗುದಿಲ್ವೇನು" ಎಂದು ಹಸನನನ್ನು ಹೊಡೆಯಲು ಕೈ ಎತ್ತಿದ.

ಅಲ್ಲಿಯೇ ಮುಂದಿನ ಮೇಜಿಗೆ ತಿಂಡಿ ಇಟ್ಟು ಹಿಂದಿರುಗುತ್ತಿದ್ದ ಗರುಡ ತಟ್ಟನೆ ಅವನನ್ನು ತಡೆದ.

"ನೋಡಿಲ್ಲಿ" ರೇಗಿದ ಯುವಕ.

"ಸಮಾಧಾನ ಸರ್. ಆತ ಎಷ್ಟು ಚಿಕ್ಕವ ನೋಡಿದಿರಾ?"

"ಚಿಕ್ಕವನಾದ್ರೆ ಕೆಲ್ಸಕ್ಕೆ ಯಾಕೆ ಬರ್ಬೇಕು?"

"ಹೊಟ್ಟೆಗಿಲ್ಲದಕ್ಕೆ." ನಿಮ್ಮ ತಮ್ಮ ಆಗಿದ್ರೆ – ಈಗ ಶಾಲೆಯಲ್ಲಿ ಆಟ ಆಡ್ತಾ ಇರ್ತಿದ್ದ ಎಂದುಕೊಳ್ಳುತ್ತ ಕೊಳೆಬಿದ್ದ ಯುವಕನ ಪ್ಯಾಂಟಿನ ಭಾಗಕ್ಕೆ ತಾನೇ ನೀರು ಹಚ್ಚಿದ.

ಯುವಕ ಮಾತಾಡದಾದ. ಕಣ್ಣು ಕೆಕ್ಕರಿಸಿ ನೋಡಿಕೊಳ್ಳುತ್ತ ಎದ್ದು ಹೋದ.

ಹಸನ ಎಂಟು ವರ್ಷದ ಬಾಲಕ. ಆತ ಕೂಡ ಅಲ್ಲಿ ಕೆಲಸಗಾರ. ಹಸನ ಸುಮಾರು ಮೂರುವರೆ ಅಡಿ ಎತ್ತರವಿದ್ದ. ಅವನ ತಲೆ ತುಸು ದೊಡ್ಡದು. ಅದರಿಂದ ಉಳಿದ ಮಕ್ಕಳು ಅವನನ್ನು 'ಬೊಂಡ' ಎಂದು ಕರೆಯುತ್ತಿದ್ದರು. ಅವನದು ಟೇಬಲ್ ಒರೆಸುವ ಕೆಲಸ. ಎಡಗೈಯಲ್ಲಿ ಪ್ಲಾಸ್ಟಿಕ್ ಬಕೆಟ್ ಹಿಡಿದುಕೊಂಡಿರುತ್ತಾನೆ, ಬಲಗೈಯಲ್ಲಿ ಅರಿವೆ ಹಿಡಿದು ಟೇಬಲ್ ಒರೆಸುತ್ತಾನೆ. ಒರೆಸುವ ಆ ವಸ್ತ್ರ ತೀರ ಒದ್ದೆಯಾದರೆ ನೀರಿನ ಹನಿ ಉದುರುತ್ತದೆ. ಮತ್ತೆ ಅದನ್ನು ಹಿಂಡಿ ಗಟ್ಟಿ ಮಾಡಿಕೊಂಡು ಬರುತ್ತಾನೆ. ಉಜ್ಜಿದ ಕೊಳೆಯನ್ನು ಎಡಗೈಯಲ್ಲಿಯ ಪ್ಲಾಸ್ಟಿಕ್ ಬಕೆಟ್ ಅನ್ನು ಟೇಬಲ್‌ಗೆ ಹತ್ತಿರ ಹಿಡಿದು ಅದರಲ್ಲಿ ಕೆಡಹಿಕೊಳ್ಳುತ್ತಾನೆ. ಮೇಜಿನ ಎರಡೂ ಬದಿಯಲ್ಲಿ ಗಿರಾಕಿಗಳು ಕುಳಿತಿದ್ದರೆ ಅವನಿಗೆ ಮೇಲಿನ ಇನ್ನೊಂದು ಬದಿಗೆ (ಅದು ಉದ್ದವಾಗಿರುವುದರಿಂದ) ಕೈ ಮುಟ್ಟುವುದಿಲ್ಲ. ಆಗ ಬುಟ್ಟಿ ಕೆಳಗಿಟ್ಟು ಮೇಜಿನ ಅಂಚನ್ನು ಹಿಡಿದು ಕೆಳಗಿನ

ಪಟ್ಟಿಯನ್ನು ಆಚೆಗೆ ಕೈಹಾಕಿ ಎಳೆಯುತ್ತಾನೆ. ಹಾಗೆ ಎಳೆಯುವಾಗಲೇ ಅಚಾತುರ್ಯದಿಂದ ಕೊಳೆಯ ಹನಿ ಆ ಯುವಕನ ಬಿಳಿ ಪ್ಯಾಂಟಿಗೆ ಸಿಡಿದದ್ದು.

'ಹೋಟೆಲ್ ಧರ್ಮರಾಯ'ದಲ್ಲಿ ಹತ್ತು ಮಂದಿ ಬಾಲಕಾರ್ಮಿಕರಿದ್ದರು. ಸಪ್ಲಾಯರ್ ಅವರಲ್ಲಿ ಇಬ್ಬರು ಗಂಡಸರಿದ್ದರು. ಮೂರನೆಯವನಾಗಿ ಗರುಡ. ಚಾ ಕುಡಿದ ಪಾತ್ರೆಗಳನ್ನು ತೆಗೆಯುವವರು ಮೂವರು. ಮೇಜು ಒರೆಸುವವರು ಮೂವರು. ಮೂವರು ಇತರ ಕೆಲಸಕ್ಕೆ. ಎಲ್ಲರೂ ಎಂಟರಿಂದ ಹದಿನಾಲ್ಕು ವರ್ಷದ ಒಳಗಿನ ವಯಸ್ಸಿನವರು. ಅವರಲ್ಲಿ ಗರುಡನೇ ಹಿರಿಯವ. ಹಸನನೇ ಅತಿ ಕಿರಿಯವ.

ಹಸನ್‌ಗೆ ಹಾಕಿದ ಅಂಗಿಚಡ್ಡಿ ದೊಗಳೆಯಾಗಿತ್ತು. ಮೊಳಕಾಲು ಕೆಳತನಕವೂ ಅವನ ಚೆಡ್ಡಿ ಚಾಚಿತ್ತು. ಸೊಂಟಕ್ಕೆ ಒಂದು ಗಡುತರ ದಾರವನ್ನು ಬಿಗಿದು ಚಡ್ಡಿಯನ್ನು ನಿಲ್ಲಿಸಿದ್ದ. ಅಂಗಿಯ ತೋಳು ಮುಕ್ಕಾಲು ಮುಂಗೈತನಕವೂ ಬರುತ್ತಿತ್ತು. "ಹಸನನ ಅಂಗಿಯಲ್ಲಿ ಎರಡು ಜನರು ಹೊಕ್ಕಬಹುದು" ಇತರ ಹುಡುಗರು ತಮಾಷೆ ಮಾಡುತ್ತಿದ್ದರು.

ಈಗ ದೊಡ್ಡದಾದರೇನು? ಹುಡುಗನೇನು ದೊಡ್ಡವನಾಗುವುದಿಲ್ಲವೇ? ಎಂದು ಹೊಲಿಸುವಾಗ ಮಾಲಿಕರ ಆಲೋಚನೆ.

ಹಸನ್ ಇತರರಿಗೆಲ್ಲ ಆಟಿಕೆಯ ವಸ್ತುವಿನಂತೆ. ಹೀಗೆ ಹೋಗುವಾಗ ಹತ್ತಿರ ಸಿಕ್ಕಿದರೆ ತಲೆಯನ್ನು ಬೊಟ್ಟಿನಿಂದ ಸಿಡಿಯುತ್ತಾರೆ. ನಿಂತುಕೊಂಡಿದ್ದರೆ ಅಂಗಿಯನ್ನು ಎಳೆಯುತ್ತಾರೆ. ಆತ ಹಾಗೆಯೇ ನಿಂತು ಎಲ್ಲಾದರೂ ನೋಡುತ್ತಿದ್ದರೆ "ಏ ಬೊಂಡ, ಇಲ್ಬಾ. ಈ ಟೇಬಲ್ ಉಜ್ಜು" ಎನ್ನುತ್ತಾರೆ.

ಎಷ್ಟೋ ಸಲ ಹಸನ್ ಹಾಗೆ ನಿಲ್ಲುವುದುಂಟು. ಅಂಗಡಿಗೆ ಗಿರಾಕಿಗಳು ಅನೇಕರು ಬರುತ್ತಾರೆ. ಕೆಲವರ ಜೊತೆ ಮಕ್ಕಳೂ ಇರುತ್ತಾರೆ. ತನ್ನದೇ ವಯಸ್ಸಿನವರ ಕಡೆ ಹಸನ್ನನ ದೃಷ್ಟಿ ಹೋಗುತ್ತದೆ. ಆ ಚಿಕ್ಕವರು ಧರಿಸುವ ಬಣ್ಣಬಣ್ಣದ ಪ್ಯಾಂಟು, ಬಣ್ಣಬಣ್ಣದ ಅಂಗಿ, ಕಾಲಿಗೆ ಬೂಟು, ತಲೆಗೆ ಹ್ಯಾಟು. ಅವರು ತಾಯಿಗೋ ತಂದೆಗೋ ಅಂಟಿಕೊಂಡಿರುತ್ತಾರೆ. ಖುರ್ಚಿಯನ್ನು ಹತ್ತಲು ಪ್ರಯತ್ನಿಸುತ್ತಾರೆ. ತಾನಾದರೆ ಎಳೆದು ಹತ್ತಿಬಿಡುತ್ತಿದ್ದೆ ಎಂದುಕೊಳ್ಳುತ್ತಾನೆ ಹಸನ. ಅವರ ತಾಯಿ ಕೊಂಕಳಿಗೆ ಕೈಹಾಕಿ ನೆಗಿದು ಕೂಡ್ರಿಸುತ್ತಾಳೆ ಅಥವಾ ಅಂಥ ಹುಡುಗಿಯರು ಇರುತ್ತಾರೆ. ಚೆಂದಾಗಿ ಬಾಬ್‌ಕಟ್ ಮಾಡಿ, ಅದರ ಮೇಲ್ಬದಿ ಅರ್ಧವನ್ನೇ ಕೆಲಂಡರಿನ ನಾರದನ ಹಾಗೆ ಮೇಲ್ ಚಂಡಿಕೆ ಕಟ್ಟಿ ಅದರ ಸುತ್ತಲೂ ಒಂದು ಬಣ್ಣದ ರಬ್ಬರ ಬ್ಯಾಂಡ್ ಕೂಡ್ರಿಸಿರುತ್ತಾರೆ. ಬಣ್ಣದ ಹೂವು ಹೂವಿನ ಅಂಗಿಯು ನಿರಿನಿರಿಗೆಯಾಗಿ ಕೆಳಚಾಚಿರುತ್ತದೆ.

ಹಸನ್ ನೋಡುತ್ತ ನಿಂತರೆ 'ಏ ಬೊಂಡ ಇಲ್ಲಿ ಒರ್ಸು' ಎಂದೋ ಕೊಳ್ಬೊಂಡವೆಂದೊ ಕರೆಯುತ್ತಾರೆ. ಹಸನ್‌ಗೆ ಸಿಟ್ಟು ಬರುತ್ತದೆ. ಕೂಡಲೇ ಎಚ್ಚೆತ್ತು ಸಿಟ್ಟು ಮಾಡಿಕೊಳ್ಳುತ್ತಲೇ ತನ್ನ ಪ್ಲಾಸ್ಟಿಕ್ ಬುಟ್ಟಿ ಒರೆಸುವ ಬಟ್ಟೆ ಹಿಡಿದು ಮೇಜಿನ ಕಡೆ ಓಡುತ್ತಾನೆ.

ಹಾಗೆ ತಮಾಷೆ ಮಾಡಿದವರು ಸಮೀಪದಿಂದಲೇ ಹಾದು ಹೋಗುವುದಾದರೆ 'ನೋಡು ಸಾವ್ಕಾರಗೆ ಹೇಳ್ಕೊಡ್ಲೊ' ಎಂದು ಕಣ್ಣು ಕೆಕ್ಕರಿಸಿ ನೋಡಿ ಮುಂದೆ ಹೋಗುತ್ತಾನೆ.

ಒಮ್ಮೊಮ್ಮೆ ಆತ ಹಾಗೆ ದೂರು ಹೇಳುವುದುಂಟು. 'ತಿರ್ಪತಿ ನಂಗೆ ಕೊಳ್ಬೊಂಡ ಅಂದ' ಎಂದು ಹೇಳಿದರೆ ಸಾವುಕಾರರು 'ಹೋಗು ಹೋಗು ತಲೆ ನೋಡಿದ್ರೆ ಬೊಂಡ್ಡಾಗಾಯಿ; ದೊಡ್ಡ ಪುಕಾರು ತಂದ್ಬಿಟ್ಟ' ಎನ್ನುತ್ತಾರೆ. ಸೌಡಿ ಇದ್ದರೆ ಅವರೂ ನಗುತ್ತಾರೆ. ಆಗ ತನಗೆ ತಮಾಷೆ ಮಾಡಿದ ವೆಂಕಟ್ರಮಣನಿಗೆ 'ಎಂಟ್ಮಣ', ಸುಬ್ರಾಯನಿಗೆ 'ಚುಬ್ಬ', ಧುರ್ಗಪ್ಪನಿಗೆ 'ದುಗ್ಗ' ಎಂದೆಲ್ಲ ಕರೆದು ಸೇಡು ತೀರಿಸಿಕೊಳ್ಳುತ್ತಾನೆ. ಮಧ್ಯೆ ಕೆಲಸವಿಲ್ಲದೆಯೇ, ವಿಶ್ರಾಂತಿಗಾಗೋ ನಿಲ್ಲುವುದಾದರೆ ಆತ ಗರುಡನ ಹತ್ತಿರವೇ ನಿಲ್ಲುತ್ತಾನೆ. ಅವನೊಬ್ಬ ಮಾತ್ರ ಅವನಿಗೆ ಏನೂ ಅನ್ನುವುದಿಲ್ಲ. ಗರುಡನ ಅಂಗಿ ತುದಿಯನ್ನು ನೇವರಿಸುತ್ತಲೊ ಅವನ ಚೆಡ್ಡಿ ಕಿಸೆಯಲ್ಲಿ ಕೈಹಾಕುತ್ತಲೋ ಇರುತ್ತಾನೆ. ಇಬ್ಬರೇ ಇರುವಾಗಲಾದರೆ ಗರುಡ ಅವನಿಗೆ ಮುದ್ದು ಕೊಡುವುದೂ ಉಂಟು. ಹಸನ್ ಮುದ್ದಾಗಿದ್ದ. ಅವನ ಮೋರೆ ತುಂಬಿಕೊಂಡಿತ್ತು. ಏನೊ ಧ್ಯಾನಿಸುವನಂತೆ ಅವನ ಕಣ್ಣುಗಳು ಇರುತ್ತಿದ್ದವು. ಮಾತಿನಲ್ಲೂ ಮಾರ್ದವತೆ ಇತ್ತು. ಅವನು ಗರುಡನಿಗೆ ಗಯ್ಡಣ್ಣ ಎಂದು ಕರೆಯುತ್ತಿದ್ದ. ಆತ ನಕ್ಕರೆ ತಿಂಗಳು ಮೂಡಿದಂತೆ ಅನ್ನಿಸುತ್ತಿತ್ತು ಗರುಡನಿಗೆ.

ಅವರೆಲ್ಲರೂ ಮುಂಜಾನೆಯೇ ಏಳುತ್ತಿದ್ದರು. ಸ್ನಾನ ಮುಗಿಸುತ್ತಿದ್ದರು. ಸಂಜೆಯ ತನಕವೂ ಅವರು ಕೆಲಸ ಮಾಡಬೇಕಾಗುತ್ತಿತ್ತು. ಮುಂಜಾನೆಯ ಉಪಹಾರದ ನಂತರ ಸುಮಾರು ಹನ್ನೊಂದು ಗಂಟೆಗೆ ಅವರಿಗೊಂದು ಲಘು ಉಪಹಾರ ಕೊಡಲಾಗುತ್ತಿತ್ತು. ನಂತರ ಮೂರು ಗಂಟೆಗೆ ಊಟ. ನಂತರ ಸುಮಾರು ನಾಲ್ಕರ ತನಕವೂ ಗಿರಾಕಿಗಳು ಹೆಚ್ಚು ಇರುತ್ತಿರಲಿಲ್ಲ. ಆಗ ವಿಶ್ರಾಂತನಾಗಿ ಕೆಲಸ ಮಾಡಿದರೆ ಸಾಕಿತ್ತು. ನಂತರ ಮತ್ತೆ ಗಿರಾಕಿಗಳ ದಟ್ಟಣಿ ಜಾಸ್ತಿಯಾಗು ತ್ತಿತ್ತು. ರಾತ್ರಿ ಎಂಟರತನಕವೂ ಅವರು ಕೆಲಸ ಮಾಡಬೇಕಾಗುತ್ತಿತ್ತು. ರಾತ್ರಿ ಎಂಟಕ್ಕೆ ಊಟ. ನಂತರ ಕೆಲವರು ಬೀದಿಗಿಳಿದು ಹೋಗುತ್ತಿದ್ದರು. ರಸ್ತೆಯ ಮೇಲೆ ಕಬಡ್ಡಿ ಕುಂಟಾಟ ಆಡು ತ್ತಿದ್ದರು. ಹತ್ತು ಗಂಟೆಗೆ ಬಂದು ಮಲಗುತ್ತಿದ್ದರು. ಯಾಕೆಂದರೆ ಮುಂಜಾನೆ ಬೇಗನೇ ಏಳಬೇಕು. ಆದರೆ 'ಕೊಳ್ಬೊಂಡ' ಮಾತ್ರ ಅವರೊಟ್ಟಿಗೆ ಹೋಗುತ್ತಿರಲಿಲ್ಲ. ಅವನಿಗೆ ದಣಿವಾಗಿಬಿಡುತ್ತಿತ್ತು. ಊಟವಾದವ ಹಸೇ ಸೇರಿಬಿಡುತ್ತಿದ್ದ. ಆಮೇಲೆ ಆತ ಏಳುವುದು ಮುಂಜಾನೆ. ಉಳಿದವರು 'ಏಳೋ ಬೊಂಡ, ಕೊಳ್ಬೊಂಡ' ಎಂದು ಕರೆದಾಗಲೇ.

'ನೋಡೋ ಗಯ್ಡಣ್ಣ' ಎನ್ನುತ್ತಿದ್ದ.

"ಹೇ ಸುಮ್ಮನೆ ಇರ್ರೋ, ಅವನಿಗೆ ಹಿಂಸೆ ಕೊಡಬೇಡಿ. ನಮ್ಮ ಮುದ್ದುಮಣಿ ಅವ" ಎಂದು ಗರುಡ ಎನ್ನುತ್ತಿದ್ದ. ಉಳಿದವರು ನಕ್ಕು ಸುಮ್ಮನಾಗುತ್ತಿದ್ದರು.

ರವಿವಾರ ಅವರೆಲ್ಲ ತಮ್ಮ ತಮ್ಮ ಬಟ್ಟೆಯನ್ನು ಸ್ವಚ್ಛಗೊಳಿಸಿಕೊಳ್ಳಬೇಕಿತ್ತು. ಅದನ್ನು ತಿಂಗಳಬಾರಿ ಯಾದರೆ ತಲೆಗೂದಲನ್ನು ಕತ್ತರಿಸಿಕೊಂಡು ಬರಬೇಕು. ಅದನ್ನು ಬಿಟ್ಟರೆ ಇಡೀ ದಿನ ಬಿಡುವು.

ರಸ್ತೆಯಲ್ಲಿ ತಿರುಗಾಟ. ಇಲ್ಲವೇ ಸಿನಿಮಾ. ತಿಂಗಳಿಗೆ ಒಂದು ಸಿನೆಮಾ ಎಂದು ಮಾಲಿಕರು ನಿಶ್ಚಿಯಿಸಿದ್ದಾರೆ. ಅದರಂತೆ ಮಾತ್ರ ಹಣ ಕೊಡುತ್ತಾರೆ. ಕೆಲವರು ಹೋಗುವುದಿಲ್ಲ. ಯಾಕೆಂದರೆ ತಿಂಗಳ ಸಂಬಳದಲ್ಲಿ ಅದು ಕಡಿತವಾಗುತ್ತದೆ. ಹಾಗೇ ತಿರುಗಾಡಿ ಸಿನೆಮಾ ಪೋಸ್ಟರ್ ನೋಡಿ ಬರುವುದು. ಯಾವುದಾದರೂ ಆಟದ ಬೈಲಿನಲ್ಲಿ ಕ್ರಿಕೆಟ್ ಆಡುತ್ತಿದ್ದರೆ ಅಲ್ಲಿ ಹೋಗಿ ನೋಡುತ್ತ ನಿಲ್ಲುವುದು.

ಮೊದಲಾದರೆ ಸಮೀಪದ ಹಳ್ಳಕ್ಕೆ ಈಸಾಡಲು ಹೋಗುತ್ತಿದ್ದರು. ಒಮ್ಮೆ ಅಲ್ಲಿ ಒಬ್ಬ ಹುಡುಗ ನೀರಿನಲ್ಲಿ ಮುಳುಗಿ ಸತ್ತುಹೋದ. ಸುಳಿಯಲ್ಲಿ ಸಿಕ್ಕಿದ ಎನ್ನುತ್ತಾರೆ ಕೆಲವರು. ಅವರೊಳಗೆ ಜಗಳವಾಗಿ ಯಾವನೋ ಮುಳುಗಿಸಿ ನೀರು ಕುಡಿಸಿದ ಎನ್ನುತ್ತಾರೆ ಕೆಲವರು. ಅದಕ್ಕೂ ಮೇಲೆ ಮಾಲೀಕರು ಹಳ್ಳಕ್ಕೆ ಹೋಗದಂತೆ ಕಟ್ಟಾಜ್ಞೆ ಮಾಡಿಬಿಟ್ಟಿದ್ದಾರೆ. ಆ ಹಳ್ಳದಲ್ಲಿ ಮೊಸಳೆ ಇದೆ ಎಂದು ಕೂಡ ಸುದ್ದಿ ಹಬ್ಬಿಸಿದ್ದಾರೆ. ಹೀಗಾಗಿ ಅಲ್ಲಿ ಯಾರೂ ಹೋಗುವುದಿಲ್ಲ.

ರವಿವಾರ ಮಾತ್ರ ಹಸನ್ ಪೇಟೆಗೆ ಹೋಗುತ್ತಾನೆ. ಅವನನ್ನು ಒಂದು ತಾಸು ಪೇಟೆ ಸುತ್ತಿಸಿಕೊಂಡು ತಿರುಗಿ ತಂದುಬಿಡುತ್ತಾನೆ ಗರುಡ. ಒಟ್ಟಾರೆ ಅವನಿಗೆ ಗರುಡಗಾವಲು. ಗರುಡನಿಗೆ ಅವನ ತಮ್ಮನ ನೆನಪಾಗುತ್ತಿತ್ತೋ ಏನೋ.

ಮೊದಲ ದಿನಗಳಲ್ಲಿ ಗರುಡನೂ ಅವರ ಸಂಗಡವೇ ಇರುತ್ತಿದ್ದ. ಅಲ್ಲದೇ ಅವರೊಟ್ಟಿಗೆ ಪೇಟೆಯ ಪರಿಚಯವನ್ನು ಮಾಡಿಕೊಳ್ಳಬೇಕಿತ್ತು.

ನಂತರದ ದಿನಗಳಲ್ಲಿ ಮಾತ್ರ ಅವನ ದಿನಚರಿ ಬೇರೆಯಾಯಿತು. ಪಟ್ಟಣದಲ್ಲಿ ಒಂದ ಕಡೆ ರಾತ್ರಿ ಶಾಲೆ ನಡೆಯುತ್ತಿತ್ತು. ಬೇರೆ ಬೇರೆ ಕೆಲಸದಲ್ಲಿದ್ದವರು ರಾತ್ರಿ ವೇಳೆಯಲ್ಲಿ ತರಬೇತಿ ಪಡೆಯುತ್ತಿದ್ದರು. ಅದು ರಾತ್ರಿ ಏಳರಿಂದ ಹತ್ತರತನಕ ನಡೆಯುತ್ತಿತ್ತು. ಅಲ್ಲಿ ಗರುಡ ಶಾಲೆಗೆ ಹಾಜರಾದ. ಆದಿತ್ಯವಾರ ಮುಂಜಾನೆ ಹತ್ತಕ್ಕೆ ಹೋಗಿಬಿಡುತ್ತಿದ್ದ. ಆದರೂ ಹಸನ್ನನಿಗೆ ಆತ ಮುಂಜಾನೆಯ ಪೇಟೆ ದೇಖೋ ಕಾರ್ಯಕ್ರಮವನ್ನು ತಪ್ಪಿಸುತ್ತಿರಲಿಲ್ಲ. ತನ್ನಂತೆಯೇ ಇತರರನ್ನೂ ಆತ ಶಾಲೆಗೆ ಹೋಗಲು ಒತ್ತಾಯಿಸಿದ್ದಿದೆ. ಆದರೆ ಅವರಗೆ ಸಂಬಳವನ್ನು ಮನೆಗೆ ಕಳಿಸಬೇಕಲ್ಲ? ಇಲ್ಲಿ ಖಾಸಗೀ ಶಾಲೆಗೆ ಫೀ ತುಂಬಲು ಹಣ ಖರ್ಚು ಮಾಡುವುದು ಸಾಧ್ಯವಾಗುತ್ತಿರಲಿಲ್ಲ. ಇದು ಒಂದಾದರೆ ಅವರಿಗೂ ಹಗಲಿಡೀ ಕೆಲಸ ಮಾಡಿ ದಣಿವಾಗಿರುತ್ತಿತ್ತು. ರಾತ್ರಿ ಮತ್ತೆ ಶ್ರಮ ಅವರು ಬಯಸುತ್ತಿರಲಿಲ್ಲ. ಒಂದು ಬಗೆಯ ವಿಶ್ರಾಂತಿ ವಿಲಾಸವನ್ನು ಅವರ ಮನಸ್ಸು ಬಯಸುತ್ತಿತ್ತು.

ಹಸನ್‌ಗೆ ಕಲಿಯುವ ಲವಲವಿಕೆಯೇನೋ ಇತ್ತು; ಅದರಲ್ಲಿ 'ಗಯ್ಡಣ್ಣ'ನನ್ನು ಮೆಚ್ಚಿಸುವ, ಸಮೀಪಿಸಿ ಇರಬಯಸುವ ಒಳಬಯಕೆಯೂ ಇದ್ದಿರಬಹುದು. ಆದರೆ ರಾತ್ರಿ ಹಸೆ ಕಂಡರೆ ಸಾಕಾಗಿರುತ್ತಿತ್ತು ಅವನಿಗೆ. ಗರುಡ ತನ್ನ ಶಾಲೆ ಮುಗಿಸಿಕೊಂಡು ಬಂದಾಗ ಹಸನ್ ಗಾಢ ನಿದ್ದೆಯಲ್ಲಿರುತ್ತಿದ್ದ. ಒಮ್ಮೊಮ್ಮೆ 'ನಾ ಬೊಂಡಾದ್ರೆ ನೀ ದುಗ್ಗ' ಎಂದೊ 'ಗಯ್ಡಣ್ಣಗೆ ಹೇಳ್ತೆ' ಎಂದೋ ಅನ್ನುತ್ತಿದ್ದ. ಸ್ವಪ್ನ ಕಾಣುತ್ತಿರಬೇಕು. ಎಷ್ಟೋ ಸಲ ಅಡ್ಡತಿಡ್ಡ ಮಲಗುತ್ತಿದ್ದ. ಗರುಡ

ಅವನನ್ನು ಸರಿಪಡಿಸಿ ಮಲಗಿಸುತ್ತಿದ್ದ. ಎಷ್ಟೋ ಸಲ ಚಾದರವೂ ಎಲ್ಲೋ ಬಿದ್ದಿರುತ್ತಿತ್ತು. ಹಸನ್ ಕಾಲು ಕೊಕ್ಕೆ ಮಾಡಿ ಆರಾಮ ಖುರ್ಚಿಯ ನಮೂನೆಯಲ್ಲಿ ತನ್ನೆರಡೂ ಕೈಗಳನ್ನು ತೊಡೆ ಸಂದಿಗೆ ಸೇರಿಸಿಕೊಂಡು ಮಲಗಿರುತ್ತಿದ್ದ. ಗರುಡ ಅವನ ಚಾದರವನ್ನು ಹೊದೆಸಿ ಮಲಗಿಸುತ್ತಿದ್ದ.

ಹಸನ್ ಮುಂಜಾನೆ ಏಳುವಾಗ ತಲೆದಿಂಬಿನ ಕಡೆ ಕಾಲು, ಕಾಲಿನ ಕಡೆ ತಲೆ ಮಾಡಿ ಅಂದರೆ ಹಿಂದುಮುಂದಾಗಿ ಮಲಗಿರುತ್ತಿದ್ದ. ಅದನ್ನು ನೋಡಿ ಉಳಿದವರು ನಗುತ್ತಿದ್ದರು. ನೋಡಿದಿರಾ ರಾತ್ರಿ ಹನ್ನೆರಡು ತಾಸಿನಲ್ಲಿ ಪೃಥ್ವಿ ತನ್ನ ಅರ್ಧ ಮೈಸುತ್ತ ತಿರುಗಿದ್ದಕ್ಕೆ ಹಸನ್‌ನೇ ಸಾಕ್ಷಿ ಎಂದು ನಗಿಸುತ್ತಿದ್ದ.

ಹಾಗೆಂದರೇನು ಎಂದು ಅವರು ಕೇಳಿದ್ದಿದೆ. ಗರುಡ ಹಗಲು ರಾತ್ರಿಯಾಗಲು ಭೂಮಿ ತನ್ನ ಮೈಸುತ್ತನ್ನು ತಿರುಗುವುದೇ ಕಾರಣ ಎಂದು ವಿವರಿಸಿದ್ದಾನೆ.

ಅವರಿಗೆ ಆಶ್ಚರ್ಯವೋ ಆಶ್ಚರ್ಯ!

ಭೂಮಿ ತಿರುಗುವುದಾದರೆ ಸೂರ್ಯ, ಚಂದ್ರ ತಿರುಗಿದಂತೆ ಕಾಣುವುದು ಯಾಕೆ?

"ನೀವು ಬಸ್ಸಿನ ಮೇಲೆ ಕುಳಿತವರಿ ಗೆ ಬಸ್ಸು ಹೋಗುತ್ತದೆನ್ನುವ ಬದಲು ಗಿಡಮರಗಳು ಚಲಿಸಿದ ಹಾಗೆ ಕಾಣುವುದಿಲ್ಲವೇ."

"ಭೂಮಿ ಗೋಲ ಇದ್ದರೆ ನಾವು ಏಕೆ ಉರುಳಿ ಬೀಳುವುದಿಲ್ಲ."

"ನಿಮ್ಮ ತಲೆಯಲ್ಲಿಯ ಹೇನು ಯಾಕೆ ಉದುರಿ ಬೀಳುವುದಿಲ್ಲ."

"ನನ್ನ ತಲೆ ದೊಡ್ಡ" ಹಸನ್ ಎಂದ.

"ಅದಕ್ಕೆಂತಲೇ ನಿಂಗೆ ಬೊಂಡ ಅಂತಾರೆ" ಎಂದು ಅವರು ನಕ್ಕರು.

"ಹಾಗಲ್ಲ ಮರಿ, ನಮ್ಮ ತಲೆ ನಮಗೆ ಸಣ್ಣದೇ ಆದರೂ ಹೇನಿಗೆ ಅತಿ ದೊಡ್ಡ. ಹಾಗಾಗಿ ಅದಕ್ಕೆ ಸಪಾಟು ಬಯಲು ಭೂಮಿ."

"ಅಂದರೆ."

"ಅಂದರೆ ಭೂಮಿಯೇ ತಲೆಯಾಗಿ ನಾವೇ ಹೇನು ಇದ್ದಂತೆ."

"ಓ ಭೂಮಿ ಅಷ್ಟು ದೊಡ್ಡ ತಲೆ ಆದ್ರೆ ಮಜಾ ಆಗ್ತಿತ್ತು." ಹಸನ್ ಎಂದ.

'ಬೊಂಡ ಉದುರಿ ಬೀಳ್ತಿತ್ತು" ಎಂದು ಅವರು ತಮಾಷೆ ಮಾಡಿದರು.

"ಇದೆಲ್ಲ ಹೇಗೆ ನಿನಗೆ ತಿಳೀತದೆ?"

"ಶಾಲೆಗೆ ಹೋಗಿ ಕಲಿಯಬೇಕು."

"ನಾನೂ ಶಾಲೆಗೆ ಬತ್ತೆ" ಎಂದು ಹಸನ್ ಹೇಳಿದ. ಆದರೆ ಅದು ಸಾಧ್ಯವಾಗುತ್ತಿರಲಿಲ್ಲ.

ಕಾಲಕ್ರಮೇಣ ಗರುಡನಿಗೆ ತುಂಬ ತೊಂದರೆಯಾಗುತ್ತಿತ್ತು. ಅವನ ಕಲಿಕೆಯ ಕ್ಲಾಸು ಸಂಜೆ ಏಳಕ್ಕೆ ಶುರುವಾಗುತ್ತಿತ್ತು. ಆದರೆ ಹೋಟೆಲ್‌ನಲ್ಲಿ ಎಂಟರತನಕವೂ ಇರಬೇಕಾಗುತ್ತಿತ್ತು. ಉಳಿದ ಸಮಯದಲ್ಲಿ ಅಭ್ಯಾಸ ಮಾಡಲು ಅವನಿಗೆ ಸಮಯವೇ ಇರುತ್ತಿರಲಿಲ್ಲ.

ಅನುಕೂಲ ಬೇರೆಲ್ಲಿ ಸಿಕ್ಕುತ್ತದೋ ಎಂದು ಹುಡುಕುತ್ತಲೇ ಇದ್ದ. ನಗರದ ಇನ್ನೊಂದು ದೂರದ ಗಲ್ಲಿಯಲ್ಲಿ ಬೋರ್ಡಿಂಗ್ (ಖಾನಾವಳಿ)ನಲ್ಲಿ ಬೇಡಿಕೆ ಇತ್ತು. ಅಲ್ಲಿ ಪಾಳಿಯ ಮೇಲೆ ಕೆಲಸವಿತ್ತು. ಊಟದ ವಿಭಾಗದವರು ಮುಂಜಾನೆ ಆರು ಗಂಟೆಗೆ ಕೆಲಸಕ್ಕೆ ಹಾಜರಾಗಿ ಸಂಜೆ ಮೂರು ಗಂಟೆಗೆ ಕೆಲಸದಿಂದ ವಿರಾಮ ಪಡೆಯಬಹುದಿತ್ತು. ದೋಸ್ತನೊಬ್ಬನ ಸಹಾಯದಿಂದ ಇದು ಲಭ್ಯವಿತ್ತು.

ಆದರೆ ಅವನು ಹಸನ್‌ನನ್ನು ಹೇಗೆ ಬಿಟ್ಟು ಹೋಗಬಲ್ಲವನಾಗಿದ್ದ?

ಹೀಗೆ ಮೂರು ನಾಲ್ಕು ತಿಂಗಳೇ ಕಳೆದವು. ಗರುಡ ತುಂಬ ಕಷ್ಟ ಸಹಿಸಬೇಕಿತ್ತು. ಆತನಿಗೆ ಇನ್ನು ಮೂರು ವರ್ಷದಲ್ಲಿ ಎಸ್‌ಎಸ್‌ಎಲ್‌ಸಿ ಮುಗಿಸಿಕೊಡುವುದಾಗಿ ಅವನ ಟ್ಯೂಷನ್ ಕ್ಲಾಸಿನವರು ಭರವಸೆ ಕೊಟ್ಟಿದ್ದರು. ಆತ ಇಂಗ್ಲಿಷನ್ನೂ, ಹಿಂದಿಯನ್ನೂ ಅಭ್ಯಾಸ ಮಾಡಬೇಕಾಗಿತ್ತು. ಹಿಂದಿ ಅಷ್ಟು ತೊಂದರೆ ಅನ್ನಿಸುತ್ತಿರಲಿಲ್ಲ. ಅಲ್ಲಿ ಜನರೊಡನೆ ಮಾತನಾಡಿ ಅದನ್ನು ಕಲಿತಿದ್ದ. ಆದ್ದರಿಂದ ಪುಸ್ತಕದ ಹಿಂದಿ ಕಷ್ಟಕರವೆನ್ನಿಸುತ್ತಿರಲಿಲ್ಲ. ಆದರೆ ಇಂಗ್ಲಿಷ್ ಹಾಗಿರಲಿಲ್ಲ. ಹೆಚ್ಚು ಶ್ರಮವನ್ನು ಹಾಕಬೇಕಿತ್ತು. ಇತರ ವಿಷಯಗಳ ಅಭ್ಯಾಸ ಕೂಡ ಕಠಿಣವೇ ಇತ್ತು. ಆದ್ದರಿಂದ ಆತ ಹೇಗಾದರೂ ಮಾಡಿ ವೇಳೆ ಉಳಿಸಿ ಕೊಳ್ಳಬೇಕಿತ್ತು. ಬೇರೆ ಉದ್ಯೋಗ ದೊರಕಿಸುವುದು ಸುಲಭವಲ್ಲ. ಈಗ ಹೇಗೋ ಹೊಟೇಲ್ ಕೆಲಸ ಅಭ್ಯಾಸವಾಗಿದೆ. ಅದೇನೂ ಉಳಿದವರು ತಿಳಿದಂತೆ ಸುಲಭದ ಕೆಲಸವೇನೂ ಅಲ್ಲ. ದೂರದಬೆಟ್ಟ ಕಣ್ಣಿಗೆ ನುಣ್ಣಗೆ. ದೂರದಿಂದ ಸುಲಭ ಎಂದು ತೋರುತ್ತದೆ. ಪ್ರತಿ ಕೆಲಸಕ್ಕೂ ಅವರದೇ ಆದ ಕ್ರಮ, ಶಿಸ್ತು ಮತ್ತು ಶ್ರಮ ಇರುತ್ತದೆ. ಈಗ ಗರುಡ ಅಂಥ ಕುಶಲತೆಯನ್ನು ಪಡೆದಿದ್ದಾನೆ. ಆದ್ದರಿಂದ ಅದೇ ಕ್ಷೇತ್ರದಲ್ಲಿ ಮುಂದುವರಿಸುವುದೇ ಹಾದಿ ಅಂದುಕೊಂಡಿದ್ದಾನೆ.

ಕೊನೆಗೂ ಆತ ತನ್ನ ಗುರಿಸಾಧನೆಯಲ್ಲಿ ಕಠಿಣಮನಸ್ಕನಾಗಲೇ ಬೇಕಾಯಿತು. ಗರುಡ ತನ್ನ ಹೊಸ ಹೋಟಲ್‌ಗೆ ಹೋಗಿಬಿಟ್ಟ.

ಈಗ ಅವನಿಗೆ ಮಧ್ಯಾಹ್ನ ಬಿಡುವು ಸಿಕ್ಕುತ್ತಿತ್ತು. ಗರುಡ ಸಿಕ್ಕ ಯಾವ ಕ್ಷಣವನ್ನೂ ಹಾಳು ಮಾಡದೇ ಅಭ್ಯಾಸದಲ್ಲಿ ತೊಡಗಿರುತ್ತಿದ್ದ. ಆದರೆ ಅವನಿಂದ ಹಸನ್‌ನನ್ನು ಮರೆಯುವು ದಾಗಲಿಲ್ಲ. ಅಂಥ ರಭಸದ ಅಭ್ಯಾಸ ಕೆಲಸಗಳಲ್ಲೂ ಹಸನ್ ಆತನನ್ನು ಕಾಡುತ್ತಿದ್ದ. ಒಮ್ಮೊಮ್ಮೆ ಎರಡು ಕೆಲಸಗಳ ಮಧ್ಯದಲ್ಲಿ ನಿಂತಾಗಲೂ ಹಸನ್ ಬಂದಂತೆ ಕಾಣುತ್ತಿತ್ತು. ಕನಸಿನಲ್ಲಿ ಹಸನ್ ಚಾದರ ತೆಗೆದೊಗೆದು ತೊಡೆಸಂದಿಯಲ್ಲಿ ಕೈ ಸೇರಿಸಿಕೊಂಡು ಚಳಿಯಲ್ಲೇ ಮಲಗಿದ ಹಾಗೆ ಕಾಣುತ್ತಿತ್ತು.

ಹಸನ್ನನಿಂದ ಪಡೆದ ಮಾಹಿತಿಯಿಂದ ಒಮ್ಮೆ ಗರುಡ ಹಸನ್ನನ ಮನೆಗೆ ನಡೆದ.

"ಕಲಾಯಿ ಶೇಖ್‌ರ ಮನೆ ಇದೆಯೇ?" ಎಂದು ಸರಿಯಾಗಿ ಅದೇ ಮನೆಗೆ ಹೋಗಿ ಕೇಳಿದ ಗರುಡ.

ಅವನ ಧ್ವನಿ ಗಯ್ಡಣ್ಣನದೋ ಎಂದೆನ್ನಿಸಿ ಹಸನ್ ಹೊರಗೆ ಓಡಿಬಂದ.

"ಹಸನ್"

"ಗರ್ಡಣ್ಣ ಗರ್ಡಣ್ಣ" ಎಂದು ಓಡಿಬಂದು ಗರುಡನ ಸೊಂಟ ಅಪ್ಪಿಕೊಂಡ. ಅವನ ಕಣ್ಣಲ್ಲಿ ನೀರು ಸುರಿಯುತ್ತಿತ್ತು. "ಬನ್ನಿ ಬನ್ನಿ ಗರುಡ. ನಮ್ಮ ಮಗ ಹಗಲೂ ರಾತ್ರಿ ನಿಮ್ಮದೇ ಸುದ್ದಿ ಹೇಳ್ತಿದ್ದ. ಎಲ್ಲಿ ಹುಷಾರಿಲ್ಲಾಗಿತ್ತೋ ಎಂದು ನಾವು ಹೆದರಿದ್ವು" ಎಂದು ಪ್ರೀತಿಯಿಂದ ಹಸನ್ನನ ತಂದೆ ತಾಯಿಗಳು ಸ್ವಾಗತಿಸಿದರು.

ಹಸನ್ನನಿಗೆ ಸಂತೋಷವೇ ಸಂತೋಷ. ಈಗ ಗಯ್ಡಣ್ಣನಿಂದ ಗರ್ಡಣ್ಣನಿಗೆ ಸುಧಾರಣೆಯಾಗಿತ್ತು.

ಹಸನ್ ತಂದೆ ಪಾತ್ರೆಗೆ ಕಲಾಯಿ ಹಾಕುವ ಉದ್ಯೋಗ ಮಾಡಿಕೊಂಡು ಬಂದವರು. ಈಗ ಸ್ಟೀಲು ಮತ್ತು ಅಲ್ಯೂಮಿನಿಯಂ ಪಾತ್ರೆಯ ಹಾವಳಿಯಿಂದಾಗಿ ತಾಮ್ರದ ಪಾತ್ರೆ ಅಪರೂಪವಾಗಿ ಪಾತ್ರೆಗೆ ಕಲಾಯಿ ಹಾಕುವ ಶೇಖ್‌ರ ಉದ್ಯೋಗಕ್ಕೆ ಅಷ್ಟು ಬೇಡಿಕೆ ಇದ್ದಿರಲಿಲ್ಲ. ಅದರಲ್ಲೂ ಈಗ ಶೇಖ್‌ರಿಗೆ ಆಸ್ತಮಾ ಬೇನೆ ಗಂಟುಬಿದ್ದಿದೆ. ತಿಂಗಳಿಗೆ ಮೂರುವಾರ ಹಸೆಯ ಮೇಲೆ ಇದ್ದಂತೆ. ತಾಯಿ ಬಾನು ನಾಲ್ಕು ಮನೆಯ ಪಾತ್ರೆ ಬಳಿಯುವ ಕೆಲಸ ಮಾಡಿಕೊಂಡಿದ್ದಾಳೆ. ಹಸನ್‌ಗೆ ಇಬ್ಬರು ಅಕ್ಕಂದಿರು ಬೇರೆ ಇದ್ದಾರೆ. ಹೀಗಾಗಿ ಅವರ ಬದುಕು ತೀರಾ ಬಡತನದಲ್ಲಿ ಸಾಗಿತ್ತು.

ಗರುಡನನ್ನು ನೋಡಿ ಅವರಿಗೆ ತಮ್ಮ ಪಾಲಿನ ದೈವವೇ ಬಂದಂತಾಗಿತ್ತು. ಅಂದು ಶೇಖ್‌ರು ಪೇಟೆಗೆ ಹೋಗಿ ಮಟನ್ ತಂದರು. ತುಂಬ ಪ್ರೀತಿಯಿಂದ ಉಣಬಡಿಸಿ ಉಪಚರಿಸಿದರು.

ಗರುಡ ತನ್ನನ್ನಿಲ್ಲಿ ಬಿಟ್ಟು ಹೇಳದೇ ಕೇಳದೇ ಹೋದದ್ದಕ್ಕೆ ಹಸನ್ ತುಂಬಾ ಸಿಟ್ಟು ಮಾಡಿದ. ಇನ್ನು ಗರುಡನೊಡನೆ ಮಾತಾಡುವುದಿಲ್ಲ ಎಂದ. ಗರುಡ ಅದೇ ಹೋಟೆಲಿಗೆ ಬಂದರೆ ಮಾತ್ರ ತಾನು ಕೆಲಸಕ್ಕೆ ಹೋಗುವುದಾಗಿಯೂ ಇಲ್ಲದಿದ್ದರೆ ಹೋಗುವುದೇ ಇಲ್ಲ ಎಂದ.

ಆ ಕುರಿತ ಮುಂದಿನ ತನ್ನ ವಿಚಾರ ಗರುಡ ಹೇಳಿದ.

"ಅಚ್ಚಾ ಬಾಬಾ, ನನ್ನ ಬಚ್ಚಾ ಬೇಟನ ಹಂಗಿದ್ದಿ ನೀನು. ನಿನ್ನ ದೇವರೇ ಕಳ್ಸಿದಾನೆ. ಅರೆ ಅಲ್ಲಾ" ಎಂದವಳೇ ಹೀಗೆ ಹಸನ್ನನನ್ನು ರಕ್ಷಿಸಲೆಂದೇ ತನ್ನ ಗರುಡನನ್ನು ದೇವರು ಕಳಿಸಿದ್ದಾನೆಂದೇ ಹಸನ್ನನ ತಾಯಿ ದೇವರನ್ನು ಪ್ರಾರ್ಥಿಸಿದಳು. ಅದೇ ದೇವರು ತನ್ನ ಹಸುಳೆಯನ್ನು ಹೋಟೆಲ್‌ನಲ್ಲಿ ದುಡಿಯಲು ಹಚ್ಚಿದ್ದಾನೆಂದು ಅವಳು ನೆನೆಯದೇ ಹೋದಳು.

ಒಂದೇ ತಿಂಗಳಲ್ಲಿ ಹಸನ್ ಗರುಡನಿದ್ದೆಡೆಗೆ ಕೆಲಸಕ್ಕೆ ಬಂದ.

ಈಗ ಹಸನ್ ಕೂಡ ಕಲಿಯಲು ತೊಡಗಿದ್ದ. ಗರುಡನ ವಿಚಾರ ಈಗ ವಿಸ್ತಾರವಾಗಿತ್ತು. ಅವನಿಗೆ ಬೇರೆ ಬೇರೆ ಸಮಾಜ ಸೇವಕರೊಂದಿಗೆ ಸಂಬಂಧ ಕೂಡ ಉಂಟಾಯಿತು.

ನಗರದಲ್ಲಿ ಹೋಟೆಲ್ ಕಾರ್ಮಿಕರ ಸಂಘಟನೆಯೊಂದು ತಲೆ ಎತ್ತಿತ್ತು. ಆ ಸಂಘಟನೆಯಲ್ಲಿ ಗರುಡ ಸದಸ್ಯ ಕೂಡ ಆದ. ಸಂಘಟಕರು ಬೇರೆ ಬೇರೆ ಹೋಟೆಲ ಕಾರ್ಮಿಕರನ್ನು ಗುಪ್ತವಾಗಿ ಸಂಪರ್ಕಿಸುತ್ತಿದ್ದರು. ಅವರ ಮಧ್ಯೆ ಬಾಲಕಾರ್ಮಿಕರೂ ಇದ್ದರು.

ಆ ನಗರದಲ್ಲಿ ಸಂಘಟನೆಯವರು ಒಂದು ಮೆರವಣಿಗೆ ನಡೆಸಿದರು. ಅವರು ಹೋಟೆಲ್ ಮಾಲಿಕರಿಂದ ತಮಗಿರುವ ಕಿರುಕುಳದ ವಿರುದ್ಧ ಪ್ರತಿಭಟಿಸುವವರಿದ್ದರು. ತಮ್ಮ ಬೇಡಿಕೆಗಳ ಮನವಿ ಬರೆದು ಕಾರ್ಮಿಕ ಮೆರವಣಿಗೆ ಹೋಗಿ ಜಿಲ್ಲಾಧಿಕಾರಿಗಳಿಗೆ ಆ ಮನವಿಯನ್ನು ಅರ್ಪಿಸಿದರು. ಮುಂದಿನ ಬೈಲಿನಲ್ಲಿ ಕಾರ್ಮಿಕರೆಲ್ಲ ಸೇರಿ ಸಭೆ ನಡೆಸಿದರು.

ಮಾರನೇ ದಿನ ಪತ್ರಿಕೆಯಲ್ಲಿ "ಬಾಲಕಾರ್ಮಿಕರನ್ನು ಅರ್ಧದಿನ ಸರಕಾರಿ ಶಾಲೆಗೆ ಹೋಗಗೊಡಿ", "ಹೋಟೆಲ ಮಾಲಿಕರಿಗೆ ಬಾಲಕಾರ್ಮಿಕ ಗರುಡ ಒತ್ತಾಯ" ಎಂದು ಮುಖಪುಟದಲ್ಲಿ ಸುದ್ದಿ ಪ್ರಕಟವಾಗಿತ್ತು.

ಆ ಸಭೆಗೆ ಗರುಡ ಕೆಲಸಕ್ಕಿರುವ ಖಾನಾವಳಿಯ ಇನ್ನು ಕೆಲವು ಬಾಲಕಾರ್ಮಿಕರೂ ಬಂದಿದ್ದರು. ಅದಕ್ಕೆ ಕಾರಣ ಗರುಡನೇ ಆಗಿದ್ದ.

ಇದೆಲ್ಲದರ ಪರಿಣಾಮವೆಂದರೆ ಗರುಡ ತನ್ನ ಕೆಲಸ ಕಳೆದುಕೊಂಡ.

"ಹಸನ್ ಟ್ಯೂಶನ್ ಕ್ಲಾಸ್‌ನ್ನು ಬಿಡಬೇಡ. ಮತ್ತೆ ಭೆಟ್ಟಿ ಆಗುವಾ" ಎಂದು ಹೇಳಿ ತನ್ನ ಎರಡು ಎರಡೂವರೆ ವರ್ಷದ ಉದ್ಯೋಗಕ್ಕೆ ಗೊಜ್ಜು ತೋಕಿದ.

ಗೊಜ್ಜು ತೋಕುವುದು ಎಂದರೆ ಕಲ್ಲು ಹರಳುಗಳನ್ನು ಮುಷ್ಟಿಯಲ್ಲಿ ಹಿಡಿದು ಬೇಡದ ವಸ್ತುವಿನ ಕಡೆ ಒಗೆಯುವುದು, ಮುಕ್ತನಾಗುವುದು ಎಂದು ಅರ್ಥ.

❑

೬. ಪೇಪರವಾಲಾ ಸುಕುಮಾರಸ್ವಾಮಿ

ಸುಕುಮಾರಸ್ವಾಮಿ ನೇರವಾಗಿ ಸಂಪಾದಕರ ಕೋಣೆಗೆ ನುಗ್ಗಿದ. ಹೊರಗೆ ಏನೋ ಕೆಲಸದಲ್ಲಿ ಕೆಲವರು ತೊಡಗಿದ್ದರು. ಮತ್ತೆರಡು ಜನ ಪ್ರೂಫ್ ತಿದ್ದುತ್ತಿದ್ದರು. ಹೀಗಾಗಿ ಸುಕುಮಾರಸ್ವಾಮಿ ಯನ್ನು ಯಾರೂ ಗಮನಿಸಲಿಲ್ಲ.

ಸಂಪಾದಕರು ಏನೋ ಬರೆಯುವುದರಲ್ಲಿ ತೊಡಗಿದ್ದರು. ಅವರು ತಲೆ ಎತ್ತದ್ದನ್ನು ನೋಡಿ ಸುಕುಮಾರಸ್ವಾಮಿ "ಸರ್" ಎಂದ.

ಸಂಪಾದಕರು ತಲೆ ಎತ್ತಿದರು. ಮುಂದಿನ ಖುರ್ಚಿ ತೋರಿಸಿದರು. ಸುಕುಮಾರಸ್ವಾಮಿ ಹೆದರು ಹೆದರುತ್ತ ಕುಳಿತುಕೊಂಡ. 'ಯಾರು' ಎಂಬಂತೆ ಸಂಪಾದಕರು ದೃಷ್ಟಿ ಏರಿಸಿದರು.

"ನಾನು ಸರ್, ಸುಕುಮಾರಸ್ವಾಮಿ"

"ಎಲ್ಲಿಂದ ಬಂದದ್ದು"

"ಇಲ್ಲೇ ಸರ್ ಮೇಗರಹಳ್ಳಿಯಿಂದ, ಇಲ್ಲಿಂದ ಇಪ್ಪತ್ತು ಕಿಲೋಮೀಟರ್ ದೂರ."

"ಉದ್ಯೋಗ"

"ವಿದ್ಯಾರ್ಥಿ ಸರ್."

"ಏನ್ ಕಲಿತಿದ್ದಿ?"

"ಮುಂದಿನ ವರ್ಷ ಎಸ್‌ಎಸ್‌ಎಲ್‌ಸಿಗೆ ಕಟ್ಟಬೇಕು ಎಂದುಕೊಂಡಿದ್ದೇನೆ ಸರ್."

"ಬಂದದ್ದು?"

"ಸರ್ ದಯೆ ತೋರಬೇಕು ಸರ್, ದುಡಿತ ಬೇರೆ ಇಲ್ಲ. ನಿಮ್ಮ ಪೇಪರನ್ನು ಬಸ್ಸಿನಲ್ಲೆಲ್ಲ ಮಾರಬೇಕೆಂದಿದ್ದೇನೆ ಸರ್."

"ಅದಕ್ಕೆ"

"ನನಗೆ ಪೇಪರ್ ಕೊಡಬೇಕು ಸರ್."

ನಮ್ಮ ಪೇಪರಿಗೆ ಬೇರೆ ಬೇರೆ ಏಜಂಟರು ಇರ್ತಾರೆ. ಅವರು ಡಿಪೋಸಿಟ್ ಅಂತ ಮುಂಗಡ ಹಣ ಕೊಟ್ಟಿರುತ್ತಾರೆ. ನಮ್ಮ ವ್ಯವಹಾರ ಏಜಂಟರೊಡನೆ ಮಾತ್ರ. ನೀನು ಪೇಪರ್ ಮಾರಬಯಸುವು ದಾದರೆ ಅವರ ಕೈಕೆಳಗೆ ಕೆಲಸ ಮಾಡು."

"ಅವರು ತೆಗೆದುಕೊಳ್ಳೋದಿಲ್ಲಾ ಸರ್."

"ನಾನು ಪತ್ರ ಕೊಡ್ತೇನೆ."

"ಸರ್ ಏಜೆಂಟರು ಅರ್ಧ ಕಮಿಶನ್ ತಾವೇ ಇಟ್ಟುಕೊಳ್ಳುತ್ತಾರೆ. ನಾನು ನೇರ ಕೊಳ್ತೇನೆ."

"ಕೊಳ್ಳಬಹುದು."

"ಪೇಪರ್ ಮಾರಾಟ ಆದಂತೆ ಸಂಜೆ ಬಂದು ಹಣ ತುಂಬ್ತೇನೆ ಸರ್."

"ಅದಾಗದು."

"ದಯಮಾಡಿ ಸರ್ 'ನಾನು ವಿದ್ಯಾರ್ಥಿ."

"ದಿನಕ್ಕೆ ಎಷ್ಟು ಮಾರುತ್ತಿ?"

"ನೂರು ಕೊಡಿ ಸರ್."

"ನೂರು?"

"ಹೌದು ಸರ್."

"ಹತ್ತು ಪೇಪರ್ ಕೊಡ್ತೇನೆ."

"ಸರ್."

"ನೇರ ಹಣ ಕೊಟ್ಟು ಒಯ್ಯಬೇಕು. ಇಲ್ಲಿ ನೋಡು ಇಲ್ಲಿ ಏನು ಬರೆದಿದೆ?"

ಹಿಂದುಗಡೆ ಒಂದು ಫಲಕ ಬರೆದಿತ್ತು. "ನನ್ನ ವೇಳೆಯನ್ನು ದುರುಪಯೋಗ ಮಾಡಬೇಡಿ." ಸುಕುಮಾರ ಸ್ವಾಮಿ ಓದಿದ.

"ತಿಳಿಯಿತಾ?"

"ನಾನು ಕೊಳ್ತೇನೆ ಸರ್, ನನಗೆ ನೇರ ಕೊಡಿ, ಕಮಿಶನ್ ಮುರಿದು ಕೊಡಿ ದಮ್ಮಯ್ಯಾ" ಸಂಪಾದಕರು ಬೆಲ್ ಒತ್ತಿದರು. ಬೆಲ್ ಟ್ರಣ್ ಟ್ರಣ್ ಸದ್ದು ಮಾಡಿತು. ಜವಾನನೊಬ್ಬ ಓಡಿಬಂದ. ಹಂಚಿಕೆ ಗುಮಾಸ್ತರನನ್ನು ಕರೆಯ ಹೇಳಿದರು, ಆತ ಬಂದ.

"ಮಿ.ರಾವ್ ನೋಡಿ ಈತ ವಿದ್ಯಾರ್ಥಿ, ಪೇಪರ್ ಮಾರ್ತಾನಂತೆ. ಮೆಕ್ಸಿಮಮ್ ಕಮಿಶನ್ ಮುರಿದು ಪೇಪರ್ ಕೊಡಿ."

"ಥ್ಯಾಂಕ್ಯೂ ಸರ್."

ಸಂಪಾದಕರು ಹುಡುಗನನ್ನೇ ನೋಡುತ್ತ ಕುಳಿತುಕೊಂಡರು. ಕ್ಷಣ ಹೊತ್ತು ನಂತರ ತಮ್ಮ ಕೆಲಸದಲ್ಲಿ ತೊಡಗಿದರು. ತಟ್ಟನೆ ತಲೆ ಎತ್ತಿ ರಾವ್ ಅನ್ನು ಕರೆದು ಅವನಿಗೆ ಒಂದು ಗುರುತಿನ ಬ್ಯಾಡ್ಜ್ ಕೊಡಿ ಎಂದರು.

ಪತ್ರಿಕೆಯ ಬೆಲೆ ಒಂದು ರೂಪಾಯಿ. ಕಮಿಶನ್ ಶೇಕಡಾ ನಲ್ವತ್ತು.

ಐವತ್ತು ಪತ್ರಿಕೆಯನ್ನು ಸುಕುಮಾರಸ್ವಾಮಿ ಕೊಂಡ. ದಿನವಿಡೀ ಬಸ್ಸು ತಿರುಗಿದ. ಮೆಜೆಸ್ಟಿಕ್‌ನಿಂದ ಹಿಡಿದು ಬೀದಿ ತಿರುಗಿದ. ಹತ್ತು ಪತ್ರಿಕೆಗಳು ಖರ್ಚಾದವು. ಕುಮಾರಸ್ವಾಮಿಗೆ ತುಂಬ ದುಃಖವಾಯಿತು.

ಪತ್ರಿಕೆಯ ಸಂಜೆ ಸಂಚಿಕೆ ಮತ್ತೆ ಬರುತ್ತಿತ್ತು. ನಲ್ವತ್ತು ಪತ್ರಿಕೆ ವ್ಯರ್ಥವಾಯಿತು. ಆದರೂ ಧೈರ್ಯ ಮಾಡಿ ಸಂಜೆ ಪತ್ರಿಕೆಯನ್ನು ಇಪ್ಪತ್ತೈದು ಕೊಂಡ. ಅದೂ ಮಾರಾಟವಾಗಲಿಲ್ಲ.

ಸುಕುಮಾರಸ್ವಾಮಿ ಮಧ್ಯಾಹ್ನ ಊಟ ಮಾಡಿರಲಿಲ್ಲ. ಸಂಜೆ ಕುಳಿತ. ಊಟ ಮಾಡಿದ. ಬಸ್ ಸ್ಟ್ಯಾಂಡಿನಲ್ಲಿ ಮಲಗಿದ. ರಾತ್ರಿ ಪೋಲಿಸರು ಬಂದು ಲಾಠಿಯಿಂದ ಒತ್ತಿದರು.

“ಯಾರು”

“ವಾತಗರಹಳ್ಳೀ ಅವ್ನಪೋ. ಬಸ್ ತಪ್ಪೋತು. ಮಕ್ಕಂಡಿದೇ” ಎಂದ.

ಪೋಲೀಸ್ ಹೋದ.

ಸುಕುಮಾರಸ್ವಾಮಿ ನಿದ್ದೆ ಹತ್ತಿಲಿಲ್ಲ.

ಸುಕುಮಾರಸ್ವಾಮಿ ಬೆಂಗಳೂರಿಗೆ ಬಂದ ದಿನವೇ ಮೊದಲ ಪಾಠ ಕಲಿತ. ಕಿಸೆಯಲ್ಲಿ ನಾಲ್ಕು ನೂರು ರೂಪಾಯಿಗಳಿದ್ದವು. ಎರಡು ನೂರನ್ನು ಚಡ್ಡಿಯ ಒಳಕಿಸೆಯಲ್ಲಿ ಇಟ್ಟುಕೊಂಡಿದ್ದ. ಮೇಲುಕಿಸೆಯಲ್ಲಿ ಬಾಕಿ ಹಣ ಇಟ್ಟುಕೊಂಡಿದ್ದ. ಬಸ್ಸು ಇಳಿವಾಗ ಅದನ್ನು ಯಾರೋ ಹೊಡೆದಿದ್ದರು. ಚಹ ಕುಡಿದು ಕಿಸೆಯಲ್ಲಿ ಕೈ ಹಾಕಿದ. “ಅಬ್ಬ” ಎಂದ. ನಿನ್ನ ಕಿಸೆಯನ್ನು ರಕ್ಷಿಸಿಕೋ ಎಂಬ ಪ್ರಥಮ ಪಾಠ ಅವನದಾಯಿತು. ಮೂರು ನಾಲ್ಕು ದಿನವಾಗಿತ್ತು. ದಿನಕ್ಕೆ ಒಂದೇ ಊಟವೆಂದರೂ ಹಣ ಖರ್ಚಾಗುತ್ತಿತ್ತು. ಊಟಮಾಡಿ ಬಸ್ ಸ್ಟ್ಯಾಂಡಿನಲ್ಲಿ ಮಲಗುತ್ತಿದ್ದ. ಮಧ್ಯೆ ಪೋಲಿಸರ ಕಾಟ ಬೇರೆ. ಇದ್ದ ಹಣದಲ್ಲಿ ಪತ್ರಿಕೆ ಕೊಳ್ಳುತ್ತಿದ್ದ. ಪತ್ರಿಕೆ ಮಾರಾಟವಾಗುತ್ತಿರಲಿಲ್ಲ.

ಹೀಗೆ ಊಟ ಮಾಡದ ದಿನ ದಾರಿ ಬದಿಯ ಅಂಗಡಿಯಲ್ಲಿ ಒಂದು ಆಮ್ಲೆಟ್ ತಿಂದು ನೀರು ಕುಡಿಯುತ್ತಿದ್ದ. ಮನಸ್ಸಿಗೆ ಬಲವಾಗಿ ಆಘಾತವಾಗಿತ್ತು. ಕೊನೆಗೂ ಜೀವ ಕೊಡುವುದೇ ಗತಿಯಾಯಿತೆ? ಕೊನೆಯದಾಗಿ ತನ್ನ ವಿಧಿಯನ್ನು ಗುರುತಿಸಿಕೊಳ್ಳುವ ಛಲ ತೆಗೆದುಕೊಂಡ.

ಸುಕುಮಾರಸ್ವಾಮಿ ಉಪನಗರ, ಹಳ್ಳಿಗಳ ಕಡೆಗೆ ಹೋಗುವ ಬಸ್ಸುಗಳನ್ನು ಗುರುತಿಸಿಕೊಂಡ. ಪ್ರತಿ ಬಸ್ ಹತ್ತಿದ. ಪೇಪರ್ ಹಿಡಿದು ಅದರ ಮುಖ್ಯ ಸುದ್ದಿ ತನ್ನದೇ ಆದ ಭಾಷೆಯಲ್ಲಿ ಸಾರಿದ. ಒಂದೆರಡು ಪತ್ರಿಕೆಗಳು ಹೋದವು. ಜನ ಭಾಷಣ ಕೇಳುತ್ತಿದ್ದರೇ ಹೊರತು ಕೊಳ್ಳುತ್ತಿರಲಿಲ್ಲ.

ಸುಕುಮಾರಸ್ವಾಮಿ ಹೇಳಿದ, "ಸ್ವಾಮಿ, ಸರ್, ಕೇಳಿ ನಾನು ವಿದ್ಯಾರ್ಥಿ, ಪೇಪರ್ ಮಾರಿ ಕಲಿಯುತ್ತಿದ್ದೇನೆ. ಬೇಡಲು ಬಂದರೆ ನೀವೇ ಅನ್ನುತ್ತೀರಿ. ಕೆಲಸ ಮಾಡಿ ತಿನ್ನಲು ಏನು ರೋಗವೋ ಎಂದು. ಕೆಲಸಕ್ಕೆ ಬಂದರೆ ನಿಮ್ಮ ಪ್ರತಿಕ್ರಿಯೆ ಏನು? ಒಂದು ರೂಪಾಯಿ ಎಲ್ಲಿಗೆ ಹೋಗುತ್ತೆ? ಎಲ್ಲಿಗೆ ಬರುತ್ತೊ? ಪುಕ್ಕಟೆ ಬೇಡ ಸರ್. ವಿದ್ಯಾರ್ಥಿ, ದುಡಿದು ಉಣ್ಣಲು ಪ್ರಯತ್ನಿಸುತ್ತೇನೆ ಸರ್, ಕೊಂಡುಕೊಳ್ಳಿ."

ಪಟಪಟನೆ ಪತ್ರಿಕೆ ಖರ್ಚಾದವು. ನಾಲ್ಕು ಬಸ್ಸು ಹತ್ತಿಳಿಯುವುದರಲ್ಲಿ ಐವತ್ತು ಪತ್ರಿಕೆ ಖರ್ಚಾದವು.

ಮಾರನೇ ದಿನ ನೂರು ಪತ್ರಿಕೆ ಕೊಂಡು ಎಪ್ಪತ್ತು ಖರ್ಚಾದವು. ಹೀಗೆ ಎರಡು ಮೂರು ದಿನಗಳಲ್ಲಿ ನೂರು ಪತ್ರಿಕೆಗೆ ತಲ್ಪಿತು. ಮಾರನೇ ದಿನ ಪತ್ರಿಕಾಲಯಕ್ಕೆ ಹೋದಾಗ ಗುಮಾಸ್ತ ರಾವ್ ಸಂಪಾದಕರು ಒಳಗೆ ಕರೆಯುತ್ತಾರೆ ಎಂದ.

"ಹುಂ ಮಾರ್‍ತಾ ಇದಿಯಾ?"

"ಹೌದು ಸರ್."

"ಎಷ್ಟು ಪ್ರತಿ."

"ನೂರು."

"ಹೌದು ಸರ್."

"ಅದು ಹೇಗೆ?"

ಸುಕುಮಾರಸ್ವಾಮಿ ತನ್ನೆಲ್ಲ ಕಷ್ಟ, ತಾನು ಮಾಡಿದ ಪ್ರಯತ್ನ ಹೇಳಿದ.

ಸಂಪಾದಕರಿಗೆ ಆಶ್ಚರ್ಯವಾಯಿತು. ಗುಮಾಸ್ತನನ್ನು ಕರೆದು ಸುಕುಮಾರಸ್ವಾಮಿ ಗೊತ್ತೆ? ಎಂದರು.

"ನಮ್ಮ ಪೇಪರ್ ಹುಡುಗ."

ಅವನಿಗೆ ಐವತ್ತು ಪರ್ಸೆಂಟೇಜ್ ಕಮಿಶನ್ ಹಾಕಿ ಕೊಡಿ. ಸುಕುಮಾರಸ್ವಾಮಿ "ಥ್ಯಾಂಕ್ಸ್" ಎಂದು ಹೊರಬಿದ್ದ. ನಿಜವಾಗಿ ಆತ ನೂರು ಪ್ರತಿ ಮಾರುತ್ತಿರಲಿಲ್ಲ.

ಆದರೆ ಭವಿಷ್ಯದ ಮೇಲೆ ಭರವಸೆ ಇಟ್ಟು ಹೇಳಿದ್ದ. ಆದರೆ ಅವನ ಪ್ರಯೋಗ ಫಲಕೊಟ್ಟಿತು. ಒಂದೇ ವಾರದಲ್ಲಿ ಆತ ನೂರು ಪ್ರತಿ ಮಾರುತ್ತಿದ್ದ. ಹಳ್ಳಿಗಳಿಂದ ಸಂತೆಗೂ, ಪೇಟೆಗೂ ಬರುವ ರೈತರಿಗೂ ಇತರರಿಗೂ ಈತನ ಪರಿಚಯವಾಗಿತ್ತು. ಈತ ಪೇಪರ್ ಹಿಡಿದು ಬಸ್ ಹತ್ತಿದ ತಕ್ಷಣ "ಕೊಡಪ ಹುಡ್ಗಾ", "ಕೊಡಲೇ ಸ್ವಾಮಿ" ಎಂದು ಕೊಳ್ಳುತ್ತಿದ್ದರು.

ಆತ ಬಸ್ ನಿಲ್ದಾಣದಲ್ಲೇ ಮಲಗುತ್ತಿದ್ದ. ಮುಂಜಾನೆ ಬಸ್ ಸ್ಟ್ಯಾಂಡ್ ಕಕ್ಕಸಿಗೆ ಹೋಗುತ್ತಿದ್ದ.

ಅಲ್ಲಿಯ ನಳದ ನೀರಿನಿಂದಲೇ ಹಲ್ಲುಜ್ಜಿ ತೊಳೆಯುತ್ತಿದ್ದ. ತನ್ನ ಬಗಲು ಚೀಲದಲ್ಲಿ ತನ್ನ ಬಟ್ಟೆ ಬರೆಯನ್ನು ಇಟ್ಟುಕೊಳ್ಳುತ್ತಿದ್ದ. ಮಧ್ಯಾಹ್ನ ಒಂದು ಊಟ ಮಾಡುತ್ತಿದ್ದ. ಸಂಜೆ ರಸ್ತೆ ಪಕ್ಕದ ಅಂಗಡಿಯಲ್ಲಿ ತಿಂಡಿ ತಿಂದು ನೀರು ಕುಡಿಯುತ್ತಿದ್ದ. ಕೈಯಲ್ಲಿ ಕಾಸು ನಿಂತಿತ್ತು. ವಿಶ್ರಾಂತಿ ಸಿಕ್ಕುತ್ತಿತ್ತು. ಸುಕುಮಾರಸ್ವಾಮಿ ಪೇಟೆಯನ್ನು ಸುತ್ತಿಬಿಟ್ಟ.

ಬೆಂಗಳೂರು ಅದೆಷ್ಟು ದೊಡ್ಡ ಪೇಟೆ? ಎಷ್ಟೇ ಗುರುತಿಟ್ಟುಕೊಂಡರೂ ರಸ್ತೆ ಮರೆಯುತ್ತಿತ್ತು. ಮೆಜೆಸ್ಟಿಕ್ ರಸ್ತೆಯಲ್ಲಿಯೂ ಸಂಜೆಗೆ ಜನಜಂಗುಳಿ ದಟ್ಟವಾಗಿ ಸೇರುತ್ತಿತ್ತು. ಯಾವ ಜಾತ್ರೆಯಲ್ಲೂ ಆತ ಅಂಥ ಜನಜಂಗುಳಿ ನೋಡಿರಲಿಲ್ಲ. ಸೀರೆ ಅಂಗಡಿಗಳು ಅದರ ಮುಂಬದಿಗೆ ನಿಲ್ಲಿಸಿದ ಗೊಂಬೆ, ಎಷ್ಟೋ ಅಂಗಡಿಗಳಲ್ಲಿ ವೇಷ ಹಾಕಿ ಕುಣಿಯುತ್ತಿದ್ದರು. ಅಂಗಡಿ, ಬ್ಯಾಂಕು, ಕಚೇರಿ, ಹೋಟಲ್, ಸಿನಿಮಾ ಥೇಟರ್, ನಾಟಕ ಥೇಟರ್, ಗಗನಚುಂಬಿ ಕಟ್ಟಡಗಳು, ದಾರಿ ಬದಿಯ ವ್ಯಾಪಾರ, ಹಣ್ಣಿನ ಅಂಗಡಿ, ಹೂವಿನ ಅಂಗಡಿ, ಹಕ್ಕಿಶಕುನದವರು, ಎಲ್ಲಿಂದಲೋ ಕೇಳಿಬರುತ್ತಿರುವ ಕ್ಲಬ್ಬಿನ ಕುಣಿತದ ವಾದ್ಯ ಸಂಗೀತ. ಚಂದ್ರನ ಬೆಳಕನ್ನೇ ಬಲ್ಬಿನಲ್ಲಿ–ಟ್ಯೂಬಿನಲ್ಲಿ ಹಿಡಿದು ಬಿಡುವಂತಿರುವ ಬೆಳಕು. ಅದೊಂದು ಮಾಯಾಲೋಕವೇ. ಅಲ್ಲಿಯೇ ಕಳ್ಳರೂ ಕೊಲೆಗಡುಕರೂ ಇದ್ದರು.

ಮುಂಜಾನೆ ಹತ್ತು ಗಂಟೆಗೆ, ಸಂಜೆ ಐದು ಗಂಟೆಗೆ ರಸ್ತೆಯಲ್ಲಿ ಎರಡು ಚಕ್ರದ ವಾಹನ ಅವ್ಯಾಹತವಾಗಿ ತಿರುಗುತ್ತಿತ್ತು. ಅಷ್ಟು ವಾಹನಗಳ ಮಧ್ಯೆಯೇ ಎಕ್ಸಿಡೆಂಟ್ ಮಾಡದೇ ಹೇಗೆ ಅವರು ವಾಹನ ನಡೆಸುತ್ತಿದ್ದರು! ತುಸುವೇ ಬ್ಯಾಲೆನ್ಸ್ ತಪ್ಪಿದರೆ, ತುಸುವೇ ಹಾದಿ ಬದಲಿಸಿದರೆ, ತುಸುವೇ ವೇಗವನ್ನು ಹೆಚ್ಚು ಕಡಿಮೆ ಮಾಡಿದರೆ, ತುಸುವೇ ಕೂಡು ರಸ್ತೆಯ ಕೆಂಪು, ಹಸಿರು, ಬೆಳಕಿನ ಮಾರ್ಗ ಸೂಚಿಯನ್ನು ನಿರ್ಲಕ್ಷ್ಯಿಸಿದರೆ ಅಪಘಾತವಾಗದೇ ಇರದು. ಬಹುಶಃ ಇವರಿಂದಲೇ ಸೂರ್ಯನ ಸುತ್ತು ತಿರುಗುವ ಗ್ರಹಗಳೂ ತಮ್ಮ ಸುತ್ತಾಟದಲ್ಲಿ ಎಕ್ಸಿಡೆಂಟ್ ಆಗದ ರೀತಿಯ ಸಮತೋಲನವನ್ನು ಕಲಿತಿರಬೇಕು.

ಅಪರೂಪಕ್ಕೆ ಒಮ್ಮೊಮ್ಮೆ ವಿದ್ಯುಚ್ಛಕ್ತಿ ಕೈಕೊಡುವುದುಂಟು. ಆಗ ರಸ್ತೆಯಲ್ಲಿ ಚಲಿಸುವ ವಾಹನಗಳು ಕಾಣುತ್ತಿರಲಿಲ್ಲ. ಆದರೆ ಅದರ ಬೆಳಕಿನ ಬಲ್ಬುಗಳು ಮಾತ್ರ ಕಾಣುತ್ತಿದ್ದವು. ಅವು ಚಲಿಸುತ್ತಿರುವ ಬೆಳಕಿನ ಅಲೆಗಳಂತೆಯೋ, ಆಕಾಶದಿಂದಲೇ ನಕ್ಷತ್ರಗಳು ಭೂಮಿಗಿಳಿದು ಬಂದಂತೆಯೋ ಭಾಸವಾಗುತ್ತಿತ್ತು.

ಎಷ್ಟೇ ದಾರಿ ತಪ್ಪಬಾರದೆಂದರೂ ಒಮ್ಮೊಮ್ಮೆ ಸುಕುಮಾರಸ್ವಾಮಿಗೆ ಹತ್ತು ಹನ್ನೊಂದು ಘಂಟೆ ಆಗಿಬಿಟ್ಟಿರುವುದುಂಟು.

ಒಮ್ಮೆ ಹೀಗೆ ದಾರಿ ತಪ್ಪಿ ತಡವಾಗಿ ಬರುತ್ತಿರುವಾಗ ಮರದ ನೆರಳಿನಲ್ಲಿ ಕುಳಿತ ನಾಲ್ಕೈದು ಜನ ಹುಡುಗರು ನಿಂತು "ಯಾರಯ್ಯ ಹುಡುಗ? ಎಲ್ಲಿಗೆ ಹೋಗಿದ್ದೆ, ಇಷ್ಟು ರಾತ್ರಿ ಯಾಕೆ?" ಎಂದು ಕೇಳಿದರು.

ಸುಕುಮಾರಸ್ವಾಮಿಯ ಎದೆ ನಡುಗಿತು. ಆತ ಮೌನವಾಗಿ ತನ್ನ ನಡಿಗೆಯನ್ನು ಚುರುಕುಗೊಳಿಸಿದ. "ಏ ನಿಲ್ಲಪೋ ನಮ್ಮ ಯಜಮಾನ ಕರೀತಾನೆ ಬಾ" ಎಂದ ಒಬ್ಬ.

ಸುಕುಮಾರಸ್ವಾಮಿ ಓಡತೊಡಗಿದ. ಕಣ್ಣಿಗೆ ಕಾಣುವವರೆಗೂ ಯಾರೂ ಇದ್ದಿರಲಿಲ್ಲ. ಇದ್ದಕ್ಕಿದ್ದಂತೆ ಮುಂದಿನಿಂದಲೂ ಇಬ್ಬರು ಓಡಿ ಬಂದರು. ಸುಕುಮಾರಸ್ವಾಮಿಯನ್ನು ಕುತ್ತಿಗೆಗೇ ಕೈ ಒತ್ತಿ ಹಿಡಿದರು. ಕೂಗಿದರೆ ಕೊಂದುಬಿಡುತ್ತೇವೆ ಎಂದರು. ಬಾಯಿಗೆ ಬಟ್ಟೆ ಒತ್ತಿದರು. ಸುಕುಮಾರಸ್ವಾಮಿಯ ಬಗಲಚೀಲ, ಕಿಸೆಯಲ್ಲಿದ್ದ ಹಣ ಎಲ್ಲವನ್ನೂ ದೋಚಿದರು. ಆತನನ್ನು ಒಂದು ಗಟಾರದಲ್ಲಿ ನೂಕಿ ನಡೆದರು:

ಸುಕುಮಾರಸ್ವಾಮಿ ಎಷ್ಟೊ ಹೊತ್ತಿನತನಕ ಅಲ್ಲೇ ಮಿಸುಕಾಡುತ್ತಿದ್ದು ಹೇಗೋ ಕಟ್ಟಿದ ಕೈಯನ್ನು ಬಿಡಿಸಿಕೊಂಡು ಬಾಯಿಗೆ ತುರುಕಿದ ಅರಿವೆಯನ್ನು ತೆಗೆದೊಗೆದು ಕುಂಟುತ್ತ ಬಸ್ ಸ್ಟ್ಯಾಂಡಿಗೆ ತಲ್ಪಿದ.

ಮಾರನೇ ದಿನ ಹತ್ತು ಗಂಟೆಗೆ ನೇರವಾಗಿ ಪತ್ರಿಕಾಲಯಕ್ಕೆ ಹೋದ. ಸಂಪಾದಕರನ್ನು ಭೆಟ್ಟಿಯಾಗಿ ತನ್ನ ಕತೆಯನ್ನು ಹೇಳಿದ.

"ಅಷ್ಟು ರಾತ್ರಿ ಯಾಕೆ ತಿರುಗಾಡಲು ಹೋಗಿದ್ದೇ?"

"ರಾತ್ರಿಶಾಲೆ ಎಲ್ಲಿದೆ ಎಂದು ಅರಸಲು ಹೊರಟಿದ್ದೆ."

"ಈ ಪಟ್ಟಣ ಮಾಯಾಲೋಕ. ನೇರ ಕಾಣುವುದಕ್ಕಿಂತ ಅಡ್ಡತಿಡ್ಡ ಅಡಗಿರುವುದೇ ಹೆಚ್ಚು. ಟ್ಯೂಶನ್ ಕ್ಲಾಸ್ ಎಲ್ಲೆಂದು ಯಾವುದಾದರೂ ಪತ್ರಿಕೆಯಲ್ಲಿ ಜಾಹಿರಾತು ಇದೆಯೊ ಎಂದು ನೋಡಿಕೋಬೇಕು. ಇರಲಿ. ನಮ್ಮ ಜವಾನನಿಗೆ ಹೇಳುತ್ತೇನೆ. ನೀನು ರಾತ್ರಿ ಇಲ್ಲಿಗೆ ಬಾ. ನಮ್ಮ ಪೇಪರ್ ಸ್ಟಾಕ್ ರೂಮಿನಲ್ಲಿ ಮಲಗಲು ಸ್ಥಳ ಮಾಡಿಕೊಡಲು ಹೇಳುತ್ತೇನೆ. ಅಲ್ಲಿ ಲೈಟ್ ಕೂಡ ಉಂಟು."

"ನಿಮ್ಮ ಉಪಕಾರ ಈ ಜನ್ಮದಲ್ಲಿ ಮರೆಯುವುದಿಲ್ಲ ಸರ್."

"ಈ ಜನ್ಮ ಮತ್ತೆ ಮುಂದಿನ ಜನ್ಮದಲ್ಲಿ?" ಎಂದು ತುಂಟು ನಗೆಯಾಡಿದರು ಸಂಪಾದಕರು.

"ನನಗೆ ಈ ಜನ್ಮ ಮಾತ್ರ ಗೊತ್ತು ಸರ್."

"ಗುಡ್ ಗುಡ್. ಹಿಡಿ, ಚಹ ಕುಡಿದು ಬಾ" ಎಂದು ಐದು ರೂಪಾಯಿ ನೋಟನ್ನು ಮುಂದೆ ಮಾಡಿದರು.

"ನಾನು ಚಹ ಕುಡಿಯುವುದಿಲ್ಲ ಸರ್. ತಿಂಡಿ ತಿಂದು ನೀರು ಕುಡಿಯುವುದೇ ನನ್ನ ಅಭ್ಯಾಸ."

"ಎಕ್ಸಲೇಂಟ್ ಎಕ್ಸಲೇಂಟ್. ಸಂಜೆ ಬಾ."

"ಪೇಪರ್ ಸರ್."

ಸಂಪಾದಕರು ಗುಮಾಸ್ತನನ್ನು ಕರೆದು ಐವತ್ತು ಪತ್ರಿಕೆಯನ್ನು ಕೊಡಲು ಹೇಳಿದರು. ಸಂಜೆ ಬಂದು ಐವತ್ತು ಪತ್ರಿಕೆಗಳ ಹಣವನ್ನು ಪಾವ್ತಿ ಮಾಡಿ ಮತ್ತೆ ಸಂಜೆಯ ಪ್ರತಿ ನೂರು ಒಯ್ದ. ಅವನದು ಯಾವಾಗಲೂ ಸಂಜೆಯ ಪ್ರತಿಯೇ ಜಾಸ್ತಿ ಮಾರಾಟವಾಗುತ್ತಿದ್ದವು. ಹಳ್ಳಿಯಿಂದ ಪೇಟೆಗೆ ಬಂದ ರೈತರೇ ಮೊದಲಾದ ಜನ ಸಂಜೆ ಹಿಂತಿರುಗುತ್ತಿದ್ದರು. ಅವರ ಕೈಯಲ್ಲಿ ಹಣವಿರುವ ಹೊತ್ತು ಅದೇ ತಾನೇ?

ಸಂಜೆ ಕುಮಾರಸ್ವಾಮಿ ಪತ್ರಿಕಾಲಯಕ್ಕೆ ಬಂದ. ಜವಾನ ಪತ್ರಿಕೆಗಳಿಗೆ ಬೇಕಾಗುವ ಕಾಗದದ ಪಿಂಡಿಗಳನ್ನು ತುಂಬಿದ ಕೋಣೆ ತೋರಿಸಿದ. ನೆಲವನ್ನೇನೋ ಜವಾನ ತುಸು ಸ್ವಚ್ಛ ಮಾಡಿ ಇಟ್ಟಿದ್ದ. ಸರಿ ಎಂದು ಅಲ್ಲಿಯೇ ಇದ್ದ ಗೋಣಿತಾಟನ್ನು ನೆಲಕ್ಕೆ ಹಾಸಿದ. ಅದರ ಮೇಲೆ ಹಳೆಯ ಪತ್ರಿಕೆಗಳನ್ನು ಹಾಸಿಕೊಂಡ. ಹಣ ಸಿಕ್ಕಿದಂತೆ ಒಂದೊಂದೇ ಸಾಮಾನು ತಂದುಕೊಳ್ಳಬೇಕೆಂದು ಕೊಂಡು ಮಲಗಿದ. ಮೇಲೆ ನೋಡುತ್ತಾನೆ. ಆ ಎರಡು ಮೂಲೆಗಳ ನಡುವೆ ವಿಸ್ತಾರವಾಗಿ ಜೇಡದ ಗೂಡು!

ಅದನ್ನು ಗುಡಿಸಿ ಹಾಕಬೇಕು ಎಂದುಕೊಂಡ. ಆದರೆ ಮನಸ್ಸಾಗಲಿಲ್ಲ. ಅದನ್ನೇ ನೋಡುತ್ತ ಧ್ಯಾನಿಸುತ್ತ ಮಲಗಿದ. ಎಷ್ಟೋ ಹೊತ್ತಿನ ಮೇಲೆ ಹಾಗೇ ಮಲಗಿ ನಿದ್ದೆಹೋದ.

❑

೭. ಉಪಸಂಪಾದಕ ಸುಕುಮಾರಸ್ವಾಮಿ

ಸಂಪಾದಕರು ತಮ್ಮ ಪತ್ರಿಕೆಯ ರವಿವಾರದ ಪ್ರಕಟಣೆಯ ಮೇಲೆ ಕಣ್ಣು ಹಾಯಿಸುತ್ತಿದ್ದರು? ರವಿವಾರ ಅದು ಎರಡು ಪುಟದ ವಿಶೇಷ ಪುರವಣಿ ಪ್ರಕಟಿಸುತ್ತಿತ್ತು.

ಆ ಪುಟದಲ್ಲಿ ಮಕ್ಕಳ ವಿಭಾಗದಲ್ಲಿ ಪ್ರಕಟವಾದ ಒಂದು ಕತೆ ಅವರ ಮನಸ್ಸನ್ನು ಸೆಳೆಯಿತು. ಕತೆಯ ಕೆಳಗಡೆ 'ಚಾರ್ವಾಕ್" ಎಂದಷ್ಟೇ ಬರೆದಿತ್ತು.

ಸಂಪಾದಕರು ಪುರವಣಿ ವಿಭಾಗದ ಸಂಪಾದಕರಾದ ವಿಲ್ಸನ್ ವಂಡ್ಸರನ್ನು ಕರೆದರು.

"ವಿಲ್ಸನ್, ಮಕ್ಕಳ ವಿಭಾಗದಲ್ಲಿ ಕತೆ ಇದೆಯಲ್ಲ, ಬಹಳ ಚೆನ್ನಾಗಿ ಇದೆ, ಅಲ್ವ?"

"ಹೌದು ಸಾರ್, ಅಂಥ ಕತೆ ಅಪರೂಪವೇ?"

"ಅದು ಯಾರವರು? ಚಾರ್ವಾಕರ ವಿಳಾಸ ಕೊಡಿ."

"ವಿಳಾಸವೇ ಇಲ್ಲ ಸಾರ್. ಚಾರ್ವಾಕ್ ಎಂದಷ್ಟೇ ಇದೆ. ಕತೆ ಉತ್ತಮವಾದದ್ದರಿಂದ ಆಯ್ಕೆ ಮಾಡಿದೆ."

"ಓಹೋ ಹೀಗೋ ಇರಲಿ, ನೋಡುವ ಲೇಖಕ ಬಂದರೆ ಭೆಟ್ಟಿ ಮಾಡಿಸಿರಿ."

"ಸರಿ ಸರ್."

ಸುಕುಮಾರಸ್ವಾಮಿಗೆ ಅಂದಿನ ಮಕ್ಕಳ ಕತೆಯೇ ಪತ್ರಿಕಾ ಪ್ರಚಾರದ ಗಟ್ಟಿ ವಸ್ತುವಾಯಿತು. 'ನಿಮ್ಮ ಮಕ್ಕಳನ್ನು ನೀವು ಬಲ್ಲಿರಾ? ಅವರ ಅಂತರಂಗವನ್ನು ಬಯಲು ಮಾಡುವ ಕತೆ, ನಿಗೂಢ ಕೋಟೆಯ ಸ್ಫೋಟ. ಓದಿ ಓದಿ ಅರಿಯಿರಿ. ಓದಿ ಹೊಸ ಮನುಷ್ಯರಾಗಿ' ಇತ್ಯಾದಿ. ಉತ್ಸಾಹದಿಂದ ಪತ್ರಿಕೆ ಮಾರಿದ. ಅಂದು ಐವತ್ತು ಪತ್ರಿಕೆ ಜಾಸ್ತಿಯೇ ಹೋಯಿತು.

ಸುಕುಮಾರಸ್ವಾಮಿ ಟ್ಯೂಶನ್ ಪಡೆಯಲು ಖಾಸಗೀ ತರಗತಿಗೆ ಹಾಜರಾಗುತ್ತಿದ್ದ. ಆತ ತನ್ನ ಅಭ್ಯಾಸದಲ್ಲಿ ತುಂಬ ಮಗ್ನನಾಗಿದ್ದ. ಈ ಮಧ್ಯೆ ಬೇರೆ ಓದು ಸಾಗಿತ್ತು. ನಂತರ ಮುಖ್ಯ ಗ್ರಂಥಾಲಯಗಳಿಗೆ ಸೌಡಿ ಸಿಕ್ಕಾಗೆಲ್ಲ ಹೋಗುತ್ತಿದ್ದ. ಅಲ್ಲಿ ಬೇರೆ ಬೇರೆ ಪತ್ರಿಕೆ ಓದುತ್ತಿದ್ದ. ಒಂದೇ ಸುದ್ದಿಯನ್ನು ಬೇರೆ ಬೇರೆ ಪತ್ರಿಕೆಗಳು ಪ್ರಕಟಿಸಿದ ರೀತಿ, ಸ್ಥಳ ಮತ್ತು ಶೈಲಿಯನ್ನು ಗಮನಿಸುತ್ತಿದ್ದ. ಹಾಗೆ ಯಾಕೆ ಆಗುತ್ತದೆ ಎಂದು ಜಿಜ್ಞಾಸೆ ಅವನನ್ನು ಕಾಡಿತು. ಅವನಿಗೆ

ಆಶ್ಚರ್ಯ ತಂದ ಸಂಗತಿಯೆಂದರೆ ಆ ವರ್ಷದ ಸರಕಾರದ ಬಜೆಟ್ ಅನ್ನು ಪತ್ರಿಕೆಗಳು ವಿಶ್ಲೇಷಿಸಿದ ರೀತಿ? ಒಂದೇ ಬಜೆಟ್ ಬಗ್ಗೆ ಬೇರೆ ಬೇರೆ ಪತ್ರಿಕೆಗಳು ಬೇರೆ ಬೇರೆ ಸಂಪಾದಕೀಯ ಬರೆದಿದ್ದವು. ವಿಶ್ಲೇಷಣೆ ಮಾಡಿದ್ದವು. ಬಜೆಟ್ಟಿನಲ್ಲಿ ವಿಲಾಸಿ ವಸ್ತುಗಳ ಮೇಲಿನ ಕರ ಇಳಿಸಿದ್ದನ್ನು ಕೆಲವರು ಸ್ವಾಗತಿಸಿದರು. ಅದರಿಂದ ಕೈಗಾರಿಕೆಗಳಿಗೆ ಪ್ರೋತ್ಸಾಹ ಸಿಕ್ಕುತ್ತದೆಂದು ಖಾಸಗಿಯವರು ಉದ್ಯೋಗದಲ್ಲಿ ಹಣ ತೊಡಗಿಸುವುದರಿಂದ ಕೈಗಾರಿಕೆ ಬೆಳೆದು ಉದ್ಯೋಗದ ಅವಕಾಶ ಜಾಸ್ತಿಯಾಗುತ್ತದೆಂದು ಪ್ರತಿಪಾದಿಸಿದ್ದವು.

ಹೌದು, ಅಲ್ಲವೇ? ತಾನೂ ಈ ಉದ್ಯೋಗಾಕಾಂಕ್ಷಿಯಲ್ಲಿ ಒಬ್ಬನಲ್ಲವೇ?

ಇನ್ನು ಕೆಲವು ಬಜೆಟ್ ಶ್ರೀಮಂತರ ವಿಲಾಸೀ ವಸ್ತುಗಳಿಗೆ ಕರವಿನಾಯಿತಿ ಕೊಡುವ ಮೂಲಕ ಬಡವರನ್ನು ನಿರ್ಲಕ್ಷ್ಯಿಸಿದೆ. ನೇರ ಕರ ವಿಧಿಸುವ ಬದಲು ಅಪ್ರತ್ಯಕ್ಷ ಕರ ಹೇರಿಕೆಯಿಂದ ಬಡವರ ಮೇಲೆ ಸಹಕಾರಿ ಬೊಕ್ಕಸದ ಭಾರ ಹೆಚ್ಚಾಗಿದೆ. ಬಡವರಿಗೆ ಬೇಕಾಗುವ ದಿನೋಪಯೋಗಿ ವಸ್ತುವಿನ ಮೇಲೆ ಕರ ಹೇರಿದ್ದರಿಂದ ಎಲ್ಲ ವಸ್ತುಗಳು ತುಟ್ಟಿಯಾಗಲಿವೆ ಎಂದು ವರ್ಣಿಸಿದ್ದವು. ಅರೆ! ಹೌದಲ್ಲ. ಇದೇ ಸರಿಯಲ್ಲವೇ. ಅವರಿಗೆ ತರಕಾರಿ, ಮೀನು, ಮೊಟ್ಟೆ ಇತ್ಯಾದಿಗಳೆಲ್ಲ ತುಟ್ಟಿ ಆಗುವುದಾದರೆ ಹೇಗೆ ಅವರು ಜೀವನ ಮಾಡಬೇಕು?

ಸುಕುಮಾರಸ್ವಾಮಿಗೆ ತಲೆ ಚಿಟ್ಟು ಹಿಡಿದು ಹೋಯಿತು. ಇದು ಯಾವುದು ಸರಿ? ಇದನ್ನು ತಿಳಿಯುವುದು ಹೇಗೆ? ತಾನೆಷ್ಟು ದಡ್ಡ ಎಂದು ಅಂದುಕೊಳ್ಳುತ್ತಿದ್ದ. ಅವನು ಹಾಜರ ಆಗುವ ಕಲಿಕಾ ತರಗತಿಗೆ ಬೇರೆ ಬೇರೆ ಉದ್ಯೋಗಸ್ಥರೂ ವ್ಯಕ್ತಿಗಳೂ ಬರುತ್ತಿದ್ದರು. ಅವರಲ್ಲಿ ವಿಚಾರ ವಿನಿಮಯವಾಗುತ್ತಿತ್ತು. ಇದರಿಂದ ಸುಕುಮಾರಸ್ವಾಮಿಗೆ ಒಂದು ರೀತಿಯ ಪ್ರಯೋಜನವೇ ಆಯಿತು. ಒಂದನೆಯದಾಗಿ ಸುಕುಮಾರಸ್ವಾಮಿಯ ಉದ್ಯೋಗ, ಪರಿಶ್ರಮ, ಫಲವನ್ನು ಗಮನಿಸಿದ ಇತರರು ಬಹುಬೇಗ ಅವನಿಗೆ ಪ್ರಿಯರಾದರು. ಇಷ್ಟು ಮಾತ್ರವಲ್ಲ ಆತನ ಪತ್ರಿಕೆಯನ್ನೇ ತಾವು ತೆಗೆದುಕೊಳ್ಳುತ್ತೇವೆ ಎಂದರು. ಹೀಗಾಗಿ ಹತ್ತು ಹನ್ನೆರಡು ಪತ್ರಿಕೆ ಹೆಚ್ಚು ಮಾರಾಟವಾಗುತ್ತಿದ್ದವು.

ಎರಡನೆಯದಾಗಿ ಆತನು ಅನೇಕ ವಿಷಯವನ್ನು ಚರ್ಚಿಸುತ್ತಿದ್ದನು.

ಆ ವಾರದ ವಿಶೇಷ ಪುರವಣಿಗೆ ಸಂಪಾದಕರೇ ಬಜೆಟ್ ಕುರಿತು ಟಿಪ್ಪಣಿ ತಯಾರಿಸಿದ್ದರು. ಅದರ ಜೊತೆ ಇನ್ನೊಂದು ಲೇಖನವನ್ನೂ ವಿಲ್ಸನ್ ಸಂಪಾದಕರ ಗಮನಕ್ಕೆ ತಂದ. ಅದು ಚಾರ್ವಾಕನ ಚಿಕ್ಕ ಲೇಖನವಾಗಿತ್ತು.

ಸಂಪಾದಕರಿಗೆ ಆಶ್ಚರ್ಯ ಕಾದಿತ್ತು. ಅವರ ಅನೇಕ ಸಂಗತಿಗಳಿಗೂ ಚಾರ್ವಾಕನು ಮಂಡಿಸಿದ ವಿಚಾರಗಳಿಗೂ ಸಮಾನತೆ ಕಾಣುತ್ತಿತ್ತು. ಮುಖ್ಯವಾಗಿ ಬಜೆಟ್ ಹಣ ಕೇಂದ್ರಿತವಾಗಿದೆಯೇ ಹೊರತು ಮನುಷ್ಯ ಕೇಂದ್ರಿತವಾಗಿಲ್ಲ. ಮನುಷ್ಯ ಕೇಂದ್ರಿತವಾಗುವವರೆಗೂ ಬಜೆಟ್ ಜನಪರ ಆಗುವುದಿಲ್ಲ ಎಂದು ಚಾರ್ವಾಕ ಬರೆದಿದ್ದರು. ಸಂಪಾದಕರಿಗೆ ಆಶ್ಚರ್ಯವಾಯಿತು. ಆ

ಪುರವಣಿಯಲ್ಲಿ ಸಂಪಾದಕರ ಟಿಪ್ಪಣಿಯ ಜೊತೆಗೆ ಚಾರ್ವಾಕನ ಲೇಖನವೂ ಪ್ರಕಟವಾಯಿತು. ಇಂಥ ಲೇಖನ ಸಿಕ್ಕ ಮೇಲೆ ಸುಕುಮಾರಸ್ವಾಮಿಗೆ ಕೇಳಬೇಕೆ, ಬಸ್ಸಿನಲ್ಲಿ ಭಾಷಣ ಹೊಡೆದ. ಪತ್ರಿಕೆ ಬಿಸಿ ದೋಸೆಯಂತೆ ಖರ್ಚಾಯಿತು.

"ಸರ್. ಇಂದು ನೂರೈವತ್ತು ಪ್ರತಿ ಖರ್ಚಾಯಿತು."

"ಹೌದು, ಅದ್ಭುತವಯ್ಯ ನೀನು?"

"ಬಜೆಟ್ ಭಾಷಣದ ಲೇಖನ ಅನುಕೂಲವಾಯಿತು. ಸರ್."

"ಹೌದಾ? ನಿನಗೆ ಹಿಡಿಸಿತಾ?"

"ನನಗೆ ಅಲ್ಲ ಸರ್. ಪತ್ರಿಕೆ ಮಾರಾಟಕ್ಕೆ ನನಗೆ ಅನುಕೂಲವಾಯಿತು. ಆದರೂ ಸರ್ ನನಗೆ ತುಂಬ ಗೊಂದಲ ಸರ್. ಬಜೆಟ್ ಗ್ರಹಿಸುವುದು ಹೇಗೆ.... ಚಾರ್ವಾಕನ ಲೇಖನವೇ ತುಸು ಗೊಂದಲ ಆಗಿಲ್ಲವಾ ಸರ್."

"ಅಲ್ಲೇ ನೋಡಯ್ಯ. ಚಾರ್ವಾಕನ ಲೇಖನ ಇದೆ. ಅದರಲ್ಲಿ ಮುಖ್ಯಸಂಗತಿ ಸರಿಯಾಗೇ ಇದೆ. ಆದರೂ ಅದರ ಸೂಕ್ಷ್ಮಗಳು ಇನ್ನೂ ಬೇರೆ ಇರುತ್ತವೆ. ಮಂಡಿಸುವ ರೀತಿ ಒಮ್ಮೆಲೇ ಬರುವುದಿಲ್ಲ. ಅದು ಅರ್ಥಶಾಸ್ತ್ರದ, ರಾಜ್ಯಶಾಸ್ತ್ರದ ಸೂಕ್ಷ್ಮ ತಿಳಿವಳಿಕೆಯಿಂದ ಬರುವಂಥದು. ಈ ಲೇಖಕ ಯಾರೋ ಹೊಸಬರಿರಬೇಕು. ಆದರೂ ಹಾಕಿದ್ದೇವೆ" ಎಂದು ಸಂಪಾದಕರು ಹೇಳಿದರು.

ಸುಕುಮಾರಸ್ವಾಮಿಗೆ ಬಲು ಸಂತೋಷವಾಯಿತು. ಯಾಕೆಂದರೆ ತಾನು ಸಹ ಚಾರ್ವಾಕನ ಲೇಖನ ಮೆಚ್ಚಿದ್ದ. ಆದರೆ ಸಂಪಾದಕರ ಲೇಖನದ ಹಾಗೆ ವಿಶ್ಲೇಷಣೆ ಸ್ಪಷ್ಟವಾಗಿದ್ದಿರಲಿಲ್ಲ. ಏನೋ ಗೊಂದಲ ಇದ್ದಂತಿತ್ತು. ಆದರೆ ನಾನು ಅದನ್ನು ಮೆಚ್ಚಿದ್ದು, ಪತ್ರಿಕೆ ಮಾರುವಾಗ ಉಪಯೋಗಿಸಿಕೊಂಡಿದ್ದು ಸರಿಯಾಗೇ ಇತ್ತಲ್ಲ ಎಂದುಕೊಂಡ.

❑

೮. ತರಗತಿ

ಕಲಿಕಾ ತರಗತಿಯ ವಾರ್ಷಿಕ ಸಮಾರಂಭವೊಂದು ನೆರವೇರಿತು. ಅದು ವರ್ಷದ ಮಧ್ಯದಲ್ಲೇ ಬರುವಂತಹುದು. ಆ ಸಮಾರಂಭಕ್ಕೆ ಅತಿಥಿಯಾಗಿ ಒಬ್ಬ ಮಹಿಳೆ ಬಂದಿದ್ದರು. ಅವರ ಹೆಸರು ಭೂಮಿ. ಮಧ್ಯ ವಯಸ್ಕರು. ಅವರು ತುಂಬ ಸರಳವಾದ ಉಡುಗೆ ತೊಟ್ಟಿದ್ದರು. ಅಂದವಾದ ಆದರೆ ಸಾದಾ ಸೀರೆ ಉಟ್ಟಿದ್ದರು. ಕೈಯಲ್ಲಿ ಒಂದು ರಿಸ್ಟ್ ವಾಚಿತ್ತು. ಕೊರಳಲ್ಲಿ ಯಾವ ಹಾರವೂ ಇದ್ದಿರಲಿಲ್ಲ. ಅವರು ಕನ್ನಡಕ ಧರಿಸಿದ್ದರು. ಅವರು ಗಂಭೀರವಾಗಿ ಇರುತ್ತಿದ್ದರು. ನೋಡಿದರೆ ಇವರಿಗೆ ಮಾತೇ ಬರಲಾರದೇನೋ ಎನ್ನಿಸುತ್ತಿತ್ತು. ಆದರೆ ಅವರು ಭಾಷಣವನ್ನು ನಿರರ್ಗಳವಾಗಿ ಮತ್ತು ಹೃದ್ಯವಾಗಿ ಮಾಡಿದರು. ಅವರು ಮಾತಾಡುವಾಗ ಕನಸೊಂದನ್ನು ನೇಯುತ್ತಿದ್ದೇನೆ ಎನ್ನುವಂತಿತ್ತು. ಅವರು ಮಹಿಳೆಯರ ಮೇಲೆ ಆಗುವ ಮಾನಸಿಕ ಹಿಂಸೆಯ ಕುರಿತು ಮಾತಾಡಿದ್ದರು. ಕಣ್ಣೆದುರೇ ಆ ಎಲ್ಲ ಚಿತ್ರಗಳು ನಿಂತಿವೆಯೊ ಎನ್ನುವಂತೆ ಅವರ ದೃಷ್ಟಿ ಇರುತ್ತಿತ್ತು. ಹಾಗಿದ್ದರೂ ಅವರು ಕೇಳುಗರನ್ನು ನಿರ್ಲಕ್ಷಿಸುತ್ತಿರಲಿಲ್ಲ. ಅವರನ್ನು ವಶಕ್ಕೆ ತೆಗೆದುಕೊಳ್ಳುತ್ತಿದ್ದರು. ಸುಕುಮಾರಸ್ವಾಮಿಗೆ ತಾನು ಹಾಗೆ ಮಾತಾಡಬಹುದೇ? ಅಹ, ಹೌದು ಹೌದು. ತಾನೊಮ್ಮೆ ಪ್ರಯತ್ನ ಮಾಡಿ ನೋಡಬೇಕು. ಅಲ್ಲಂತೂ ಅವರು ಮನೋವಿಜ್ಞಾನದ ವಿಶ್ಲೇಷಣೆಯೊಂದಿಗೆ ದಿನನಿತ್ಯದ ಸಮಸ್ಯೆಯನ್ನು ಸಮೀಕರಿಸುತ್ತಿದ್ದರು. ಮನೋವಿಜ್ಞಾನ ಎಂಬುದೊಂದಿದೆ, ತಾನು ಇನ್ನೂ ಎಷ್ಟು ತಿಳಿಯುವುದಿದೆ ಎಂದೆನಿಸಿತು ಸುಕುಮಾರಸ್ವಾಮಿಗೆ.

ಶ್ರೀಮತಿ ಭೂಮಿ ಅವರು ಮಹಿಳೆಯರಿಗಾಗಿ ಒಂದು ಕಲಿಕಾ ತರಬೇತಿ ನಡೆಸುತ್ತಿದ್ದರು. ಅಲ್ಲಿ ಶಾಲೆಯಿಂದ ವಂಚಿತರಾದ ಹುಡುಗಿಯರು ಬರುತ್ತಿದ್ದರು. ಅದಕ್ಕೆ ಅವರು ಶುಲ್ಕ ತೆಗೆದು ಕೊಳ್ಳುತ್ತಿರಲಿಲ್ಲ. ಅವರು ಅಲ್ಲಿಯ ಎಲ್ಲ ಪ್ರೌಢ ವಿದ್ಯಾರ್ಥಿಗಳ ಸಹಾಯ ಸಹಕಾರ ಕೇಳಿದ್ದರು. ಯಾವುದೇ ಹೋರಾಟ ಅಂಥ ಪುರಸ್ಕಾರ ಮತ್ತು ಸಂಘಟನೆಯಿಂದ ಮಾತ್ರ ಯಶಸ್ವಿ ಯಾಗುತ್ತದೆ ಎಂದಿದ್ದರು.

ಅವರಿಗೆ ತರಗತಿ ನಡೆಸಲು ಕಲಿಸುವವರ ಆವಶ್ಯಕತೆಯಿತ್ತು. ಹಣದ ಆವಶ್ಯಕತೆಯಿತ್ತು. ಅಲ್ಲಿ ಕೆಲವರು ತಿಂಗಳಿಗೆ ಐದು ರೂಪಾಯಿ ಕೊಡುವುದಾಗಿ ಭರವಸೆ ಇತ್ತರು. ಅಲ್ಲೇ ಒಂದು ಸಂಘಟನೆ ಮಾಡಲಾಯಿತು. ಅದಕ್ಕೆ ಸಂಚಾಲಕರೆಂದು ಕಾಸಿಮ್‌ನನ್ನು ಮಾಡಲಾಯಿತು. ಕಾಸಿಮ್ ಕಾರಖಾನೆಯ ಒಬ್ಬ ಕೂಲಿಯಾಗಿದ್ದ.

ಸುಕುಮಾರಸ್ವಾಮಿ ತಾನು ಎರಡು ದಿನಗಳಿಗೆ ಒಂದು ತಾಸು ಭೂಮಿ ಅವರ ತರಗತಿಗೆ ಕಲಿಸಲು ಮೀಸಲಿಡುವುದಾಗಿ ತಿಳಿಸಿದ.

ಕೋಣೆಗೆ ಹೋದ.

"ಸರ್."

"ಹಂ. ಏನಯ್ಯ? ಹೇಗಿದ್ದೀ?"

"ಚಾರ್ವಾಕನನ್ನು ಕರೆತಂದಿದ್ದೇನೆ ಸರ್."

"ಹೌದಾ? ಎಲ್ಲಿ ಎಲ್ಲಿ ಕರೆ ಒಳಗೆ."

"ಇಲ್ಲೇ ಇದ್ದಾನೆ ಸರ್."

"ಎಲ್ಲಿ? ಎಲ್ಲಿ?"

"ನಿಮ್ಮೆದುರು ಇದ್ದಾನಲ್ಲ ಸರ್."

ಸುಕುಮಾರಸ್ವಾಮಿ ತನ್ನನ್ನೇ ತೋರಿಸಿಕೊಂಡು ನಗೆಯಾಡಿದ. ಸಂಪಾದಕರಿಗೆ ಆಶ್ಚರ್ಯವೋ ಆಶ್ಚರ್ಯ.

ಒಂದು ನಿಮಿಷ ಅವನನ್ನೇ ದಿಟ್ಟಿಸಿ ನೋಡಿದರು.

"ಸುಳ್ಳು ಹೇಳ್ತಿಯೇನಯ್ಯ?"

"ಈಗ ನಿಜವಾದ ಕಷ್ಟ ಸರ್. ನಾನು ಹೇಗೆ ಖಾತ್ರಿ ಮಾಡಿಕೊಳ್ಳಲಿ."

ಸಂಪಾದಕರಿಗೆ ಖಾತ್ರಿಯಾಯಿತು. ಅವರಿಗೆ ಬಹು ಪ್ರೀತಿಯಾಯಿತು. ಎದ್ದುಬಂದು ತಬ್ಬಿ ಕೊಂಡರು.

"ನನ್ನ ಸುದೈವ ಸರ್. ನಿಮ್ಮಂಥ ಗುಣ ಪಕ್ಷಪಾತಿಗಳೂ ಉದಾರಿಗಳೂ ಆದ ಸಂಪಾದಕರು ಸಿಕ್ಕದಿದ್ದರೆ ನನ್ನ ಗತಿ ಏನಾಗುತ್ತಿತ್ತೋ ಸರ್."

"ಸುದೈವ ಗಿದೈವ ಎಲ್ಲಾ ಸುಳ್ಳಯ್ಯ. ಎಲ್ಲ ನಿನ್ನ ಶ್ರಮ. ಇಷ್ಟೇ, ನಿನ್ನ ಶ್ರಮ ಸರಿಯಾದ ದಿಕ್ಕಿನಲ್ಲಿತ್ತು. ಅದಿರಲಿ, ನಿನ್ನ ಲೇಖನದ ಬಗ್ಗೆ ನಿನಗೇ ಸಮಾಧಾನ ಉಂಟೋ?"

"ಇಲ್ಲ ಸರ್, ನಾನು ಬಹಳ ಓದಬೇಕು."

"ಅದರೊಟ್ಟಿಗೆ ಭಾಷೆಯೂ ಬೇಕು, ಸಾಹಿತ್ಯವೂ ಬೇಕು. ನಿನ್ನ ಕತೆ ಚೆನ್ನಾಗಿತ್ತು. ನೋಡು."

"ಹೌದು ಸರ್ ನನಗೆ ಹೆಚ್ಚು ಸಾಹಿತ್ಯ ಓದಲು ಸೌಡಿಯೇ ಆಗುತ್ತಿಲ್ಲ. ಅದಲ್ಲದೇ ಕಾವ್ಯ ತಿಳಿಯುತ್ತಿಲ್ಲ."

"ಏನಿಲ್ಲ ತಿಳಿಯುವಂತದ್ದೇನೂ ಇಲ್ಲ. ನಿನಗೆ ಒಂದು ಕಟ್ಟಪ್ಪಣೆ ಉಂಟು ನನ್ನದು."

"ಹೇಳಿ ಸರ್."

"ಪಾಲಿಸ್ತೀಯಾ?"

"ಮುದ್ದಾಂ ಸರ್."

"ಹಾಗಾದರೆ ಕೇಳು, ನಿನಗೆ ವಿಲ್ಸನ್ ಮಾಹಿತಿ ಒದಗಿಸಿ ಕೊಡುತ್ತಾರೆ. ಕನ್ನಡ ಸಾಹಿತ್ಯ ಪರಿಷತ್ತಿನವರು ನಡೆಸುವ ಕನ್ನಡ ಜಾಣ ಪರೀಕ್ಷೆಗೆ ಅರ್ಜಿ ಹಾಕು. ಕಟ್ಟುನಿಟ್ಟಾಗಿ ಅಭ್ಯಾಸ ಮಾಡಬೇಕು. ದಿನಾಲು ಎರಡು ತಾಸು ಅದಕ್ಕೂ ಹೆಚ್ಚು ವೇಳೆಯನ್ನು ಅದಕ್ಕಾಗೇ ಮೀಸಲಿಡಬೇಕು. ನಿನಗೆ ಹಳಗನ್ನಡದಿಂದ ಹಿಡಿದು ಹೊಸಗನ್ನಡದ ತನಕ, ವ್ಯಾಕರಣ, ಸಾಹಿತ್ಯ ಮೀಮಾಂಸೆ ಎಲ್ಲ ಅಭ್ಯಾಸಕ್ಕಿದೆ. ತಿಳಿಯಿತೆ? ಸುಮಾರು ಒಂದು ಒಂದೂವರೆ ವರ್ಷ ಅಭ್ಯಾಸ ಮಾಡಬೇಕು ತಿಳಿಯಿತೇನಯ್ಯ?"

"ಅದರ ಅಭ್ಯಾಸ ಹೇಗೆ ಮಾಡುವುದು?"

"ತರಗತಿ ನಡೆಸುವವರಿದ್ದಾರಯ್ಯ, ವಿಲ್ಸನ್‌ಗೆ ಹೇಳ್ತೇನೆ. ಅವನೂ ಅಭ್ಯಾಸ ಮಾಡಿದ್ದಾನೆ. ಸಹಕಾರ ಕೊಡ್ತಾನೆ ಮತ್ತು ಎಲ್ಲದಕ್ಕೂ ಕಲಿಸುವವರು ಯಾರು? ಎಲ್ಲಿದ್ದಾರೆ? ಎಂದು ಕಾಯುತ್ತ ಕೂಡ್ರುವುದೇನಯ್ಯಾ? ಸ್ವಂತ ಕಲಿಯಬೇಕು. ನಿನಗೆ ಎಷ್ಟು ವರ್ಷ?"

"ಹದಿನೇಳು?"

"ಹಂ, ಮತ್ತೆ ಸಣ್ಣವನಯ್ಯ ನೀನು? ಸ್ವಾಧ್ಯಯನ ಮಾಡಬೇಕು. ಗ್ರಂಥಾಲಯಗಳಿವೆ, ಪುಸ್ತಕಗಳಿವೆ. 'ಬನ್ನಿರೋ ನನ್ನ ಸ್ನೇಹ ಮಾಡಿ; ನಾನು ನಿಮಗಾಗಿ ಕಾದಿದ್ದೇನೆ' ಎನ್ನುತ್ತವೆ ಅವು."

"ನಿಮ್ಮ ಆಶೀರ್ವಾದ ಸರ್."

"ಮತ್ತೆ ಆ ಹಳೇ ಭಾಷೆಯಲ್ಲಿ ಮಾತಾಡ್ಬೇಡ" ಸುಕುಮಾರಸ್ವಾಮಿಗೆ ಈಗ ಮತ್ತಷ್ಟು ಜವಾಬ್ದಾರಿ ಹೆಚ್ಚಿತು. ಮಧ್ಯೆ ಆತ ಶ್ರೀಮತಿ ಭೂಮಿ ಅವರ ಕಲಿಕಾ ತರಬೇತಿಗೆ ಹೋಗಿ ಕಲಿಸಬೇಕು. ತನ್ನ ಕಲಿಕಾ ತರಬೇತಿಗೆ ಹೋಗಬೇಕು. ಪತ್ರಿಕಾ ಮಾರಾಟ ಬಿಡುವಂತಿಲ್ಲ. ಯಾಕೆಂದರೆ ಅದು ಆತನ ಜೀವನಾಧಾರ. ಗ್ರಂಥಾಲಯಕ್ಕೂ ಹೋಗಬೇಕು.

ಸುಕುಮಾರಸ್ವಾಮಿ ಸತತವಾಗಿ ಅಧ್ಯಯನದಲ್ಲಿ ತೊಡಗಿದ್ದ. ಕೆಲಸವನ್ನು ಸರಿಯಾದ ಸಮಯಕ್ಕೆ ಮಾಡೇ ಮಾಡುತ್ತಿದ್ದ. ಮಧ್ಯೆ ಆತ ಚಿಕ್ಕ ಚಿಕ್ಕ ಬರಹವನ್ನು ಬರೆಯುತ್ತಿದ್ದ. ಈಗ ಆತ ತನ್ನ ಆಹಾರದ ಕಡೆಗೆ ಹೆಚ್ಚು ಲಕ್ಷ್ಯ ಕೊಡುತ್ತಿದ್ದ. ಈಗ ಅವನ ಕೈಗೆ ಹಣ ಅಚ್ಚುಕಟ್ಟಾದ ಖರ್ಚಿಗೆ ಒದಗುತ್ತಿತ್ತು. ದಿನಾಲು ಹಣ್ಣು ತೆಗೆದುಕೊಳ್ಳುತ್ತಿದ್ದ. ಅದಿಲ್ಲದಾಗ ಹಾಲು, ಅದಿಲ್ಲದಾಗ ಮೊಟ್ಟೆ,

ಹಾಗೆಯೇ ಸೌತೇಕಾಯಿ, ಕ್ಯಾರೆಟ್ ಮೊದಲಾದವುಗಳನ್ನು ರೂಮಿನಲ್ಲೇ ತಂದು ಪಚಡಿ ಮಾಡಿ ಮೆಲ್ಲುತ್ತಿದ್ದ. ವ್ಯಾಯಾಮ ಮಾಡುತ್ತಿದ್ದ.

ಅಧ್ಯಯನ ಧಾರಣ ಶಕ್ತಿಗೆ ಉತ್ತಮ ಆಹಾರ, ಆರೋಗ್ಯ ಆವಶ್ಯಕ ಎಂಬುದನ್ನು ಅವನು ಬಲ್ಲವನಾಗಿದ್ದ. ಹೀಗೆ ಸತತ ಪರಿಶ್ರಮದ ಫಲವಾಗಿ ಆತ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಮೊದಲ ಮಟ್ಟದಲ್ಲಿ ಪಾಸಾಗಿದ್ದ. ಹಾಗೆಯೇ ಕನ್ನಡ ಜಾಣದಲ್ಲೂ ಸಹ ಚಿನ್ನದ ಪದಕ ದೊಂದಿಗೆ ಪಾಸಾಗಿದ್ದ.

ಸುಕುಮಾರಸ್ವಾಮಿಗೆ ಈಗ ಹತ್ತೊಂಬತ್ತು ಇಪ್ಪತ್ತು ವರ್ಷ. ತಿಳಿಯದ ಹಾಗೆ ಆತ ತಾರುಣ್ಯಕ್ಕೆ ಕಾಲಿಟ್ಟಿದ್ದ. ಆಕರ್ಷಕವಾಗಿ ಬೆಳೆದಿದ್ದ.

ಸುಕುಮಾರಸ್ವಾಮಿ ತಂದ ಸಿಹಿಯನ್ನು ಪತ್ರಿಕಾಲಯದಲ್ಲಿ ಎಲ್ಲರಿಗೂ ಹಂಚಿ ಬಂದ.

ಸಂಪಾದಕರ ಮುಂದೆ ನಿಂತ "ನಮಸ್ಕಾರ ಸಾರ್" ಎಂದ. ಸಿಹಿಯನ್ನು ಮೆಲ್ಲುತ್ತ ಸಂಪಾದಕರು ಹೇಳಿದರು.

"ಇಂದಿನಿಂದ ನಿನ್ನನ್ನು ವಿಲ್ಸನ್ನನ ಜತೆ ನಮ್ಮ ಪತ್ರಿಕೆಯ ಉಪಸಂಪಾದಕನನ್ನಾಗಿ ನೇಮಿಸಿದ್ದೇನಯ್ಯಾ. ಹೋಗು ವಿಲ್ಸನ್ ಎಲ್ಲ ಮಾಹಿತಿ ಕೊಡುತ್ತಾರೆ."

ಸುಕುಮಾರಸ್ವಾಮಿ ಮೂಕವಿಸ್ಮಿತನಾದ; ಸಂತೋಷದಿಂದ ಅವನ ಕಣ್ಣು ತುಂಬಿ ಬಂತು.

"ಥ್ಯಾಂಕ್ಯೂ ಸರ್" ಎಂದ

ಬಹಳ ವರ್ಷಗಳ ಮೇಲೆ ವಿಶ್ರಾಂತನಾಗಿ ಆತ ತನ್ನ ಅವ್ವ, ಅಪ್ಪ, ಅಕ್ಕ, ತಂಗಿಯಂದಿರನ್ನು ನೆನೆಸಿಕೊಂಡ. ಒಗಟಿನ ಹುಡುಗಿ ಪಾರ್ವತಿಯ ನೆನಪೂ ಸುಳಿದುಹೋಯಿತು.

ತನ್ನ ಶಾಲೆಯ ಹಿಂದುಗಡೆಯ ಜೇಡದ ಬಲೆ ನಯನ ಮನೋಹರವಾಗಿ ಅವನ ಕಣ್ಣೆದುರು ಹಾಸಿತ್ತು.

ಮಕ್ಕಳೇ, ನೀವು ಅರಿತಿದ್ದೀರಾ. ಇಲ್ಲ. ನಮಗೆ ಪರಿಚಿತರಾದ ಜೋನಿ, ಸಿದ್ದಪ್ಪ, ಗರುಡ, ಸುಕುಮಾರಸ್ವಾಮಿ, ಚಾರ್ವಾಕ ಇವರೆಲ್ಲ ಒಬ್ಬನೇ ನಮ್ಮ ಯಶವಂತ ಎಂದು.

ಯಶವಂತ ತನ್ನ ಅಪ್ಪ, ಅವ್ವ, ತಂಗಿಯರನ್ನೆಲ್ಲ ನೆನೆಸಿಕೊಳ್ಳುತ್ತ ಬಲು ಉತ್ಸಾಹದಿಂದ ತನ್ನ ವಸತಿಗೆ ಬಂದ.

ಇದು ಹೊಸ ದಿನ ಎಂದುಕೊಳ್ಳುತ್ತ ಕಸಬರಿಗೆಯನ್ನೆತ್ತಿಕೊಂಡು ನೆಲ, ಗೋಡೆ, ಮೂಲೆ ಮೂಲೆಗಳನ್ನು ಸ್ವಚ್ಛಗೊಳಿಸತೊಡಗಿದ.

ಹಾಗೆ, ಛಾವಣಿಯನ್ನು ಝಾಡಿಸಲೆಂದು ಎತ್ತಿದ ಕೈ ಎತ್ತಿದಂತೇ ನಿಂತಿತು.

ನೋಡುತ್ತಾನೆ! ಹಸ್ತದಗಲದ ಜೇಡವೊಂದು ತನ್ನ ಬಲೆಯನ್ನು ನೇಯುತ್ತಾ ಇದೆ.

ಏಡಿಗಳಿಗಿರುವಂಥ ಕಾಲುಗಳ ಮೇಲ್ಬದಿ ಕಪ್ಪಾಗಿ ಕೆಳಬದಿ ಕೆಂಪಾಗಿ ಮಧ್ಯೆ ಮಣಿಕಟ್ಟಿನಂತಿರುವಲ್ಲಿ ಅರಿಸಿನದ ಎಳೆಯನ್ನು ಸುತ್ತಿದಂತಿದೆ. ಹೂವಿನ ಪರಾಗರೇಣುಗಳು ಹಾರಿಬಂದು ಹೊಂದಿಕುಳಿತುಕೊಂಡಿರುವಂತೆ ರೋಮ ಸೂರ್ಯರಶ್ಮಿಗೆ ಮಿಂಚುತ್ತಿತ್ತು.

ಯಶವಂತ ಯಾವುದೋ ಮೋಡಿಗೆ ಒಳಗಾದವನಂತೆ ಅದನ್ನೇ ನೋಡುತ್ತ ನಿಂತ.

❑

' ಯಶವಂತನ ಯಶೋಗೀತ '–ಒಂದು
ಅಪರೂಪದ ಮಕ್ಕಳ ಕಾದಂಬರಿ. ಅನುಭವದ
ಗಟ್ಟಿಬೇರುಗಳೊಂದಿಗೆ ಇಲ್ಲಿನ ಬದುಕು
ತನ್ನ ರೆಂಬೆಕೊಂಬೆಗಳನ್ನು ಚಾಚಿದೆ.
ಇದು ಯಶವಂತನ ಬಾಳಗೀತೆ.
ಸ್ವಾಭಿಮಾನ, ನೈತಿಕ ಎಚ್ಚರ, ಮಾನವೀಯ
ಪ್ರೀತಿ –ಪ್ರೇಮ, ಸತ್ಯಕ್ಕಾಗಿ ಹೋರಾಡುವ
ಛಲ, ಸ್ವತಂತ್ರ ಮನೋಧರ್ಮ, ಶ್ರಮ
ಪ್ರತಿಭೆಗಳ ಮಾನ್ಯತೆ ಇತ್ಯಾದಿ ಜೀವನ
ಮೌಲ್ಯಗಳ ಸಂಘರ್ಷವನ್ನು ಕಾದಂಬರಿ ತನ್ನ
ವಸ್ತು ವಿನ್ಯಾಸದಲ್ಲಿ ಕುಸುಮಗಂಧದ ರೀತಿ
ಕಾಣಿಸಿದೆ.

ಪ್ರೊ॥ ಎಸ್. ಜಿ. ಸಿದ್ಧರಾಮಯ್ಯ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು